RECOGNITION TO TELUGU HIGH SCHOOL AT K.G.F.

531. SRI S. N. SHANMUGAM (K G.F.): —

Will the Minister for Education be pleased to state :—

(*a*) whether Government have received any representation for recognition of Telugu High School at Kolar Gold Fields ;

(*b*) if so, the action taken in that behalf ?

SRI K. V. SHANKARA GOWDA (Minister for Education).—

(*a*) Nil.

(*b*) Does not arise in view of reply to Clause (*a*) above.

2-00 PM

ಶ್ರೀ ಎ. ಮುನಿಯಪ್ಪ (ಚಿಕ್ಕಬಳ್ಳಾಪುರ) :—ಸ್ವಾಮಿ, ನಾನು ಬಾಗೇಪಲ್ಲಿ ವಿಚಾರದಲ್ಲಿ ಒಂದು ಪ್ರಶ್ನೆಯನ್ನು ಕೇಳಬೇಕೆಂದು ತಿಳಿಸಿ ಸಾರ್ತಿ ಎದ್ದೆ, ಶ್ರೀ ಪುಟ್ಟಸ್ವಾಮಿಯವರ ನಂ. ೫೬೦ ನೇ ಪ್ರಶ್ನೆಯ ಬಗ್ಗೆ ನಾನು ಕೆಲವು ವಿಚಾರಗಳನ್ನು ತಿಳಿಯಬೇಕಾಗಿತ್ತು.

ಉಪಾಧ್ಯಕ್ಷರು:—ತಾವು ಅದರ ಬಗ್ಗೆ ಅರ್ಧಗಂಟೆ ಚರ್ಚೆಗೆ ಕಾಲಾವಕಾಶ ಕೊಡಬೇಕೆಂದು ಬರೆದು ಕಳುಹಿಸಿದರೆ ನಾನು ಅದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಟಿ. ಆರ್. ಶ್ಯಾಮಣ್ಣ (ಬೆಂಗಳೂರು ಕೋಟೆ) :—ಅಧ್ಯಕ್ಷರೇ, ನಾನು ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೆ. ಅದೇನಾಯಿತೆಂಬುದು ಗೊತ್ತಾಗಲಿಲ್ಲ. ಅದಕ್ಕೆ ನಾನು ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರಬೇಕಾಗಿದೆ. ಅದಕ್ಕೆ ತಾವು ಅವಕಾಶವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

CALLING ATTENTION TO A MATTER OF URGENT PUBLIC IMPORTANCE.

Re:—Damage to the Bridges across Tunga and Bhadra Rivers, and necessity of constructing new bridges.

ಶ್ರೀ ಎಸ್. ಬಂಗಾರಪ್ಪ (ಸೋರಬ) :—ಸ್ವಾಮಿ, ನಾನೀಗ ಸಾರ್ವಜನಿಕ ಪ್ರಾಮುಖ್ಯತೆಯುಳ್ಳ ಒಂದು ಜರೂರು ವಿಚಾರವನ್ನು ಸರ್ಕಾರದವರ ಗಮನಕ್ಕೆ ತಮ್ಮ ಮೂಲಕ ತರಲಿಚ್ಛಿಸುತ್ತೇನೆ.

ಶಿವಮೊಗ್ಗದ ಬಳಿ ಇರತಕ್ಕ ತುಂಗಾ ನದಿಗೆ ಅಡ್ಡಲಾಗಿ ಕಟ್ಟಿರತಕ್ಕ ಸೇತುವೆ ಮತ್ತು ಭದ್ರಾವತಿಯ ಟೌನಿನಲ್ಲಿ ಭದ್ರಾನದಿಗೆ ಅಡ್ಡಲಾಗಿ ಕಟ್ಟಿರತಕ್ಕ ಸೇತುವೆಗಳು ಬಹಳ ಹಳೆಯ ಸೇತುವೆಗಳಾಗಿರುವುದರಿಂದಲೂ ಮತ್ತು ಬಹಳ ಅಪಾಯಸ್ಥಿತಿಯಲ್ಲಿ ಇರುವುದರಿಂದಲೂ ನಾನು ಮಾನ್ಯ ಲೋಕೋಪಯೋಗಿ ಶಾಖೆಯ ಮಂತ್ರಿಗಳ ಗಮನವನ್ನು ಅತಿ ಜರೂರಾಗಿ ಅತ್ತಕಡೆಗೆ ಸೆಳೆಯುವುದಕ್ಕೆ ಇಚ್ಛೆಪಡುತ್ತೇನೆ.

SRI K. LAKKAPPA (Minister for Public Works):—Sir, the existing bridges across Tunga River at Shimoga is about 100 years old. It is a brick-arched bridge with 16 spans of 50' each. It is located on the outskirts of Shimoga City, in furlongs 2-3 of Mile 171 of Bangalore-Honnavar Road. It is reported that such craks as would make the bridge unsafe for traffic have not developed.

The new bridge proposed is on a bye-pass to the Shimoga Town. The proposed new bridge is about one mile upstream of the existing bridge. The necessary preliminary investigations regarding the new bridge have been carried out and the approximate cost of the bridge including the bye-pass, may come to about Rs. 20.00 lakhs. It also includes the construction and improvements of about 2½ miles of approach road and acquisition of irrigated lands.

The State Government have agreed, in principle, for the construction of the new bridge. Due to the paucity of funds and due to the fact that the existing bridge is at present serving the needs of the traffic, the work has not been included in the Budget Estimates. The Shimoga Municipality has agreed during 1965 to contribute a lumpsum contribution of Rs. 2.00 lakhs for this work in annual instalments of Rs. 50,000 each. This amount can be collected from the Municipality in due course when the bridge work is sanctioned, subject to the availability of funds.

Bridge across Bhadra River in Bhadravathi Town:—

The existing bridge across Bhadra River in Bhadravathi Town is of about 50 years old. It is a brick-arched bridge with 13 spans of 50' each. It is located in the heart of Town connecting old and new towns of Bhadravathi at 8/160 mile of Bangalore-Honnavar Road. It is reported that such cracks as would make the bridge unsafe for traffic have not developed.

A new bridge has been proposed about three miles upstream of the existing bridge, with a view to provide a bye-pass to the main traffic, as there is a large volume of traffic on this bridge. The plans and estimates amounting to Rs. 16.15 lakhs have been got up for the new bridge. The estimate provides for 13 spans of 40' clear width, with 'T' beam and deck-slab R.C.C. superstructure with open foundations, and the construction of approaches to an extent of about 2½ miles.

The Town Municipal Council. Bhadravathi, in May 1968, have intimated that they are agreeable to pay a contribution of Rs. 2.50 lakhs equivalent to one-fourth the then estimated cost for this work. This work has been recommended to Government of India for their approval under the Programme of "Roads of Inter-State or Economic Importance". The work finds a place in the Budget Estimates for 1970-71 under "50. Public Works-Development Schemes-Original

(Sri K. LAKKAPPA)

Works-Communication-Bridges on the State Roads of Economic or of Inter-State Importance". It can be taken up for execution after the receipt of approval of Government of India. The necessary contribution can also be collected from the Town Municipal Council when the bridge work is sanctioned.

(Mr. Speaker in the chair.)

ಶ್ರೀ ಎಸ್. ಬಂಗಾರಪ್ಪ:—ಈಗತಾನೆ ಮಾನ್ಯ ಸಚಿವರು ಹೇಳಿದ ಹಾಗೆ ಆ ಶಿವಮೊಗ್ಗದ ಬಳಿ ತುಂಗಾನದಿಗೆ ಅಡ್ಡಲಾಗಿ ಹಾಕಿರತಕ್ಕ ಸೇತುವೆ ೧೦೦ ವರ್ಷಗಳಿಗೂ ಮೇಲ್ಪಟ್ಟಿದ್ದಾಗಿದೆ. ಅದಕ್ಕೆ ಅಷ್ಟು ವಯಸ್ಸಾಗಿರುವುದರಿಂದ ಅನೇಕಾವರ್ತಿ ಅದಕ್ಕೆ ಭಾರಿ ಕ್ರಾಕುಗಳು ಬಂದು ಅನೇಕಸಾರ್ತಿ ಅದಿನ್ನೇನು ಮುರಿಬಿಳುತ್ತದೆ ಅನ್ನುವಂಥ ಪರಿಸ್ಥಿತಿ ಒದಗಿತ್ತು. ಆದ್ದರಿಂದ ಕೂಡಲೇ ಸರ್ಕಾರದವರು ಅಲ್ಲಿ ಹೊಸ ಸೇತುವೆಯನ್ನು ಕಟ್ಟುವುದಕ್ಕೆ ಪ್ರಯತ್ನ ಮಾಡುತ್ತಾರೆಯೇ ?

ಶ್ರೀ ಕೆ. ಲಕ್ಕಪ್ಪ:—ಶಿವಮೊಗ್ಗದ ಬಳಿ ತುಂಗಾನದಿಗೆ ಕಟ್ಟಿರತಕ್ಕ ಸೇತುವೆಯನ್ನು ನಾನೂ ನೋಡಿದ್ದೇನೆ. ಅದರಲ್ಲಿ ಬಂದಿರತಕ್ಕ ಕ್ರಾಕ್ ಅಷ್ಟು ಅಪಾಯಕಾರಿಯಾದ್ದಲ್ಲ ಎಂದು ನಮ್ಮ ತಜ್ಞರು ಅಭಿಪ್ರಾಯ ಪಟ್ಟಿದ್ದಾರೆ. ಅಲ್ಲದೇ ಅದನ್ನು ಅಲ್ಲಿ ಬೈಪಾಸ್‌ಮಾಡಿ ಬೇರೆ ಕಡೆ ಅದನ್ನು ಕಟ್ಟಬೇಕೆಂಬ ಉದ್ದೇಶ ಸರ್ಕಾರಕ್ಕಿದೆ. ಅಲ್ಲಿ ಅದನ್ನು ಹೊಸದಾಗಿ ಕಟ್ಟಬೇಕಾದ್ದು ಅವಶ್ಯಕ. ಆದರೆ ಹಣದ ಅಭಾವದಿಂದ ಸ ಲ್ಪ ನಿಧಾನವಾಗಿದೆ. ಹಣದ ಅನುಕೂಲತೆ ಒದಗಿದ ಕೂಡಲೇ ಆ ಕೆಲಸವನ್ನು ಕೈಗೊಳ್ಳಲಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ:—ಹಿಂತೇ ಕೆಲವುಸಾರ್ತಿ ವಿಪರೀತ ಪ್ರವಾಹ ಬಂದು ಆ ಸೇತುವೆಯೇ ಕೊಚ್ಚಿ ಹೋಗುತ್ತದೆಂಬ ಭೀತಿ ಉಂಟಾಗಿ ಅಲ್ಲಿ ಕೆಲವು ದಿನ ಅಥವಾ ಕೆಲವು ಕಾಲದವರೆಗೂ ಟ್ರಾಫಿಕ್ಕನ್ನು ನಿಲ್ಲಿಸಲಾಗಿತ್ತೆಂಬುದು ಸರ್ಕಾದವರ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಲಕ್ಕಪ್ಪ:—ಹಾಗೆ ಹೊಳೆ ಹೆಚ್ಚಿಗೆ ಯಾವಾಗಲೂ ಬರುವುದಿಲ್ಲ. ಕೆಲವೊಮ್ಮೆ ಹಾಗೆ ಬರುತ್ತದೆ. ಒಮ್ಮೆ ಹಾಗೆ ಓವರ್ ಫ್ಲೋ ಆದದ್ದು ನನಗೂ ಗೊತ್ತಿದೆ. ಆ ಕಾಲದಲ್ಲಿ ನಾನೂ ಅಲ್ಲೇ ಇದ್ದೇ. ಅಲ್ಲಿ ೨ ಗಂಟೆಗಳ ಕಾಲ ನಿಂತು ನಂತರ ಮುಂದಕ್ಕೆ ಆದೇ ಸೇತುವೆಯ ಮೇಲೆ ಹಾದು ಹೋಗಿದ್ದೇನೆ. ಈಗ ಅಲ್ಲಿ ರಸ್ತೆಯನ್ನೂ ಕೂಡ ಸ್ವಲ್ಪ ಎತ್ತರಮಾಡಿದೆ. ಆದರೆ ಯಾವಾಗ್ಗೂ ಅಲ್ಲಿ ಅಂಥ ಯಾವ ಅಪಾಯಗಳೂ ಆಗಲಿಲ್ಲ. ಹಣದ ಅಭಾವ ಹೆಚ್ಚಿಗೆ ಇದ್ದ ಕಾರಣ ಅದನ್ನು ಕೂಡಲೇ ಕೈಗೊಳ್ಳುವುದಕ್ಕಾಗಲಿಲ್ಲ.

MR. SPEAKER:—As a convention clarifications are permitted only to the Hon. Member who gives call attention notice and not to others. I am following the practice prevailing in the Rajya Sabha. I therefore request other Hon. Members not to seek clarifications.

ಶ್ರೀ ಎಸ್. ಬಂಗಾರಪ್ಪ:—ನಾನೂ ಮೊನ್ನೆ ದೆಹಲಿಗೆ ಹೋಗಿದ್ದಾಗ ಅಲ್ಲಿ ಎರಡುಮೂರು ದಿನೆಗಳಾ ಲೋಕ ಸಭೆಯ ಡಿಬೇಟನ್ನು ಕುಳಿತು ಕೇಳಿದ್ದೇನೆ. ಕಾಲ್ ಟೆನ್‌ಷನ್ ನೋಟೀಸ್ ಚರ್ಚೆಗೆ ಬಂದಾಗ ಅನೇಕರು ಮಾತನಾಡಿದ್ದಾರೆ, ಅಲ್ಲಿನ ಸ್ಪೀಕರ್ ಧಿಲ್ಲನ್‌ರವರು ಆಲೋ ಮಾಡಿದ್ದಾರೆ.... ಇದು ಜರೂರಾ-ದಂಥ ವಿಷಯವಾದುದರಿಂದ ಬೇರೆಯವರೂ ಕೂಡ ಇದರ ಬಗ್ಗೆ ಕ್ಲಾರಿಫಿಕೇಷನ್ ಕೇಳಬಹುದು. ಈ ಪದ್ಧತಿ ಪಾರ್ಲಿಮೆಂಟ್‌ನಲ್ಲಿ ಲೋಕಸಭೆಯಲ್ಲಿ ನಡೆಯುತ್ತಾ ಇದೆ. ನಾನು ಡೆಲ್ಲಿಗೆ ಹೋಗಿದ್ದಾಗ ಇದನ್ನು ಪ್ರತಿ ದಿವಸವೂ ನೋಡುತ್ತಾ ಇದ್ದೆ.

MR. SPEAKER:—I have gone through the Regulations. In the Rajya Sabha, five Members can be signatories to a Call Attention

Notice. So, those five Members who are signatories are permitted to ask clarifications. The same convention is being followed here also. If Hon. Sri Bangarappa can spare some time to discuss the point with me in my Chambers, I shall convince him with authorities. Notwithstanding that, if he could persuade me that his view is acceptable, I would not hesitate in accepting his view. For the time being, I request Hon. Members Sri Abdul Khuddus Anwar and Sri Badri Narayan not to press for clarifications.

SRI ABDUL KHUDUS ANWAR:—Why should I not exercise my right to put a question ?

MR. SPEAKER:—I am sorry. I cannot allow him. The Hon. Member may give another notice.

ಶ್ರೀ ಎಸ್. ಬಂಗಾರಪ್ಪ:—ಶ್ರೀಮಾನ್ ಅಬ್ದುಲ್ ಖುದ್ದೂಸ್ ಅನ್ವರ ರವರು ಭದ್ರಾವತಿ ಕ್ಷೇತ್ರದಿಂದ ಆರಿಸಿ ಬಂದಿದ್ದಾರೆ. ಅವರು ಭದ್ರಾವತಿ ನಗರದ ಪ್ರಜೆ ಆಗಿರುವುದರಿಂದ ಆ ಸೇತುವೆಗಳು ನಗರದ ಮಧ್ಯೆ ಇರುವುದರಿಂದ ಅದರ ಬಗ್ಗೆ ಕ್ಲಾರಿಫಿಕೇಷನ್ ಕೇಳುವುದಕ್ಕೆ ಅವರಿಗೆ ಅವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು;—ಅವರ ಪರವಾಗಿ ನೀವೇ ಕೇಳಿ.

ಶ್ರೀ ಎಸ್. ಬಂಗಾರಪ್ಪ.—ಸ್ವಾಮಿ, ನಾನು ಹೇಳಬೇಕಾದ ವಿಷಯ ಇಷ್ಟೆ. ಇದರಲ್ಲಿ ೧/೩ ಭಾಗದಷ್ಟು ದುಡ್ಡನ್ನು ಅಲ್ಲಿಯ ಮುನಿಸಿಪಾಲಿಟಿಯವರು ಕೊಡುವುದಕ್ಕೆ ತಯಾರಾಗಿದ್ದಾರೆ. ಉಳಿದ ದುಡ್ಡನ್ನು ಸರ್ಕಾರದವರು ಹಾಕಿಕೊಂಡು ಈ ಬ್ರಿಡ್ಜನ್ನು ಕಟ್ಟುವುದಕ್ಕೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಕೆ. ಲಕ್ಕಪ್ಪ.—ಶಿವಮೊಗ್ಗಾಕ್ಕಿಂತಲೂ ಇಲ್ಲಿ ಹೆಚ್ಚಿನ ಟ್ರಾಫಿಕ್ ಇದೆ. ಭದ್ರಾವತಿ ಮೂಲಕ ಹಾದು ಹೋಗುವುದೂ ಸೇರಿ ಅಲ್ಲಿ ಹೆಚ್ಚು ಟ್ರಾಫಿಕ್ ಇದೆ. ನಾನೂ ಹೋಗಿ ಖುದ್ದು ಪರಿಶೀಲಿಸಿದ್ದೇನೆ. ಅದರ ಜೊತೆಗೆ ರೈಲ್ವೆ ಬ್ರಿಡ್ಜ್ ಸಮೀಪದಲ್ಲಿ ಹೋಗುವುದರಿಂದ ವಾಹನ ಸಂಚಾರಕ್ಕೆ ಬಹಳ ಅಡಚಣೆಯಾಗಿದೆ. ಆದುದರಿಂದ ಈ ಬ್ರಿಡ್ಜ್ ಆಗತಕ್ಕಂಥಾದ್ದು ಸೂಕ್ತವಾದುದು ಎಂದು ನಾನು ಮನಗಂಡಿದ್ದೇನೆ. ಭದ್ರಾವತಿ ಮುನಿಸಿಪಾಲಿಟಿಯವರು ೨ ಲಕ್ಷ ೫೦ ಸಾವಿರ ರೂಪಾಯಿ ಕೊಡುತ್ತೇವೆಂದು ಒಪ್ಪಿಗೆಯನ್ನೂ ಸಹ ಕೊಟ್ಟಿದ್ದಾರೆ. ಅದನ್ನು ನಾವು ಬಡ್ಜೆಟಿನಲ್ಲೂ ಸೇರಿಸಿದ್ದೇವೆ. ಆದರೆ ನಮಗೆ ಇರತಕ್ಕಂಥ ತೊಂದರೆ ಏನು ಎಂದರೆ ಗೌರ್ನಮೆಂಟ್ ಆಫ್ ಇಂಡಿಯಾದವರು ಇಂಟರ್‌ಸ್ಟೇಟ್ ರೋಡ್ಸ್ ಫಂಡ್ಸ್‌ಗೆ ಎಂದು ಅವರೂ ದುಡ್ಡು ಕೊಡುತ್ತಾರೆ. ಅವರು ಅಪ್ರೂವಲ್ ಕೊಡ ಬೇಕು. ಆದರ ಬಗ್ಗೆ ನಾನು ಡೆಲ್ಲಿಗೆ ಹೋಗಿದ್ದಾಗಲೂ ಮಂತ್ರಿಗಳು, ಉಪ-ಮಂತ್ರಿಗಳಲ್ಲಿ ಇದರ ಬಗ್ಗೆ ಚರ್ಚೆ ಮಾಡಿದ್ದೇನೆ. ಅಲ್ಲದೆ ನಮ್ಮ ರಾಜ್ಯದಲ್ಲಿ ಇನ್ನೂ ೮ ಸೇತುವೆಗಳು ಮತ್ತು ಕೆಲವು ರಸ್ತೆಗಳು ಆಗಬೇಕೆಂದು ಇದರ ಬಗ್ಗೆಯೂ ಒತ್ತಾಯ ಮಾಡುತ್ತಿದ್ದೇನೆ. ಅವರ ಒಪ್ಪಿಗೆ ಬಂದ ತಕ್ಷಣ ಸೇತುವೆಯ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಅದೇ ರೀತಿ ಮೈಸೂರು ಐರನ್ ಅಂಡ್ ಸ್ಟೀಲ್ ವರ್ಕ್ಸ್‌ನವರು ತಮ್ಮ ಭಾಗದ ಕಾಂಟ್ರಿಬ್ಯೂಷನ್ ಕೊಡುವುದಕ್ಕೆ ತಯಾರಾಗಿದ್ದಾರೆ. ಈಗಾಗಲೇ ಸರ್ಕಾರದವರು ಈ ವಿಷಯದಲ್ಲಿ ಅವರೊಂದಿಗೆ ಮಾತುಕತೆ ನಡೆಸಿದಿರಾ ? ಮಾತುಕತೆ ನಡೆಸದೆ ಇದ್ದಿದ್ದರೆ ಅವರ ಹತ್ತಿರ ಮಾತುಕತೆ ನಡೆಸಿ ಅವರ ಸಹಾಯವನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಕೆ. ಲಕ್ಕಪ್ಪ.—ಈ ಸೂಚನೆಯನ್ನು ಮೊದಲೇ ಕೊಟ್ಟಿದ್ದೇನೆ. ಅದರ ಬಗ್ಗೆ ಪತ್ರ ವ್ಯವಹಾರ ನಡೆಯುತ್ತಾ ಇದೆ. ಅವರು ಕೊಡುವುದಕ್ಕೆ ಸಿದ್ಧವಿದ್ದರೆ ಆ ಹಣವನ್ನು ಪಡೆದು ಕೊಂಡು ಬಾಕಿ ಹಣಕ್ಕೆ ಕೇಂದ್ರ ಸರ್ಕಾರದವರ ಒಪ್ಪಿಗೆಯನ್ನೂ ಪಡೆದು ಅವರಿಂದ ಬಂದ ಕೂಡಲೇ ಆ ಸೇತುವೆಗಳ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

MINING OF RECORDS IN THE M.S.E.B

† ಶ್ರೀ ಟಿ. ಆರ್. ಶಾಮಣ್ಣ (ಬೆಂಗಳೂರು-ಕೋಟೆ).—ಮಾನ್ಯ ಸಭಾಪತಿಗಳೇ, ಶ್ರೀಮಾನ್ ಸಿದ್ದವೀರಪ್ಪನವರು ಎಲೆಕ್ಟ್ರಿಸಿಟಿ ಬೋರ್ಡ್‌ನಲ್ಲಿ ಆಗುತ್ತಾ ಇರತಕ್ಕಂಥ ಅಕ್ರಮಗಳ ಬಗ್ಗೆ ಸಾಕಷ್ಟು ವಿವರಗಳನ್ನು ಕೊಟ್ಟಿದ್ದಾರೆ. ನಾನು ಹೇಳುವುದು ಮೊದಲನೆಯದಾಗಿ ೨–೩ ದಿವಸದ ಕೆಳಗೆ ಎಲೆಕ್ಟ್ರಿಸಿಟಿ ಬೋರ್ಡ್‌ಗೆ ಸಂಬಂದಪಟ್ಟಂಥ ಲೆಡ್ಜರ್ಸ್ ಮತ್ತು ಅದಕ್ಕೆ ಸಂಬಂಧಪಟ್ಟ ರಿಕಾರ್ಡ್ಸ್‌ಗಳನ್ನು ಸುಟ್ಟು ಹಾಕಿರುವುದರಿಂದ ದೇಶಕ್ಕೆ ತುಂಬಾ ನಷ್ಟವಾಗಿದೆ. ಇದಕ್ಕೆ ಮುಖ್ಯ ಕಾರಣ ನನಗೆ ತಿಳಿದಮಟ್ಟಿಗೆ ಒಬ್ಬ ಎಂಪ್ಲಾಯಿ ೮೦ ಸಾವಿರ ರೂಪಾಯಿ ಮಿಸ್‌ಅಪ್ರೋಪ್ರಿಯೇಷನ್ ಮಾಡಿ ಅದನ್ನು ಮುಚ್ಚುವುದಕ್ಕೆ ಆ ರೀತಿ ಮಾಡಿದ್ದಾನೆಂದು ತಿಳಿದು ಬಂದಿದೆ.

ಎರಡನೆಯದಾಗಿ ಎಲೆಕ್ಟ್ರಿಸಿಟಿ ಬೋರ್ಡ್ ಎಂಪ್ಲಾಯೀಸ್‌ಗೆ ಮೊನ್ನೆ ಅವಾರ್ಡ್ ಕೊಟ್ಟಾಗ ಯಾರನ್ನೂ ಕೇಳದೆ ಸಿಕ್ಕಾಪಟ್ಟೆ ಕೊಟ್ಟಿದ್ದಾರೆ. ಮತ್ತೆ ಎಲೆಕ್ಟ್ರಿಸಿಟಿ ಬೋರ್ಡ್‌ನಲ್ಲಿ ಲಕ್ಷಾಂತರ ರೂಪಾಯಿ ಹಣದ ದುರುಪಯೋಗ ನಡೆಯುತ್ತಾ ಇರುವುದರಿಂದ ಇದರ ಬಗ್ಗೆ ಆಡಿಟ್ ತೀವ್ರ ರೀತಿಯಲ್ಲಿ ನಡೆಯುತ್ತಾ ಇರುವುದರಿಂದ ಇದರಲ್ಲಿರುವ ಲೋಪದೋಷಗಳನ್ನು ತಪ್ಪಿಸಿಕೊಳ್ಳುವುದಕ್ಕಾಗಿ ಸಂಬಂಧಪಟ್ಟ ಲೆಡ್ಜರ್, ರಿಕಾರ್ಡ್ಸ್‌ಗಳನ್ನು ಉದ್ದೇಶಪೂರ್ವಕವಾಗಿ ಸುಟ್ಟು ಹಾಕಿದ್ದಾರೆ ಎಂದು ತಿಳಿದು ಬಂದಿದೆ. ಈರೀತಿ ಮಾಡಿದಂಥ ಅಕ್ರಮವ್ಯವಹಾರಗಳನ್ನು ತಪ್ಪಿಸಿಕೊಳ್ಳುವುದಕ್ಕಾಗಿ ಒಂದು ರ‍್ಯಾಕೆಟ್ ಹೊರಟಿದೆ. ಮತ್ತು ಈ ಬೋರ್ಡ್‌ನಲ್ಲಿ ಲಕ್ಷಾಂತರ ರೂಪಾಯಿ ನಷ್ಟವಾಗಿರುವುದರಿಂದ ಇದನ್ನು ತುಂಬಲು ಸಾರ್ವಜನಿಕರಿಗೆ ಹೆಚ್ಚಿಗೆ ಟ್ಯಾಕ್ಸ್, ಸರ್‌ಛಾರ್ಜು ಇವುಗಳನ್ನು ಹಾಕಿ ವಸೂಲ್ಮಾಡುತ್ತಿದ್ದಾರೆ. ಈಗ ಈ ಬೋರ್ಡ್‌ನಿಂದ ಜನಗಳಿಗೆ ಯಾವ ವಿಧವಾದ ಸುಖವೂ ಇಲ್ಲ. ಆದುದರಿಂದ ಸರ್ಕಾರದವರು ಈ ಬೋರ್ಡನ್ನು ತಮ್ಮ ವಶಕ್ಕೆ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಇದ್ದು ಬೋರ್ಡ್ ರಚನೆಯಾಗುವುದಕ್ಕೆ ಮೊದಲು ಹೇಗಿತ್ತು ಎಂದರೆ ನನ್ನ ಮನೆಗೆ ಎಲೆಕ್ಟ್ರಿಸಿಟಿ ಛಾರ್ಜು ೧೦ ರೂಪಾಯಿ ಬರುತ್ತಿದ್ದುದು ಈಗೆತ್ತು ೩೦ ರೂಪಾಯಿ ಬರುತ್ತಾ ಇದೆ. ಅದೇ ರೀತಿ ವಾಟರ್ ಛಾರ್ಜು ಮೂರು ಕಾಸನ್ನು ಕೊಡುತ್ತಿರಲಿಲ್ಲ. ಈಗ ೧೦–೧೫ ರೂಪಾಯಿ ಕೊಡಬೇಕಾಗಿದೆ. ಆದುದರಿಂದ ಕಾರ್ಪೊರೇಷನ್ನನ್ನು ರದ್ದು ಮಾಡಿ ನೇರವಾಗಿ ಸರ್ಕಾರದವರೇ ಮಾಡಿದರೆ ಉತ್ತಮ. ಹೀಗೆ ಮಾಡಿದರೆ ಮೊದಲಿದ್ದ ಹಾಗೆ ಜನರಿಗೆ ಸರಿಯಾಗಿ ಕೆಲಸವಾಗುತ್ತದೆ. ಇಲ್ಲದೇ ಹೋದರೆ ಇದರ ರಿಕಾರ್ಡ್ಸ್ ಎಲ್ಲಾ ನಷ್ಟವಾಗಿ ಜನಗಳಿಗೆ ಯಾವ ಕೆಲಸವೂ ಸರಿಯಾಗಿ ಆಗುವುದಿಲ್ಲ.

ಉದಾಹರಣೆಗೆ ಹೇಳುವುದಾದರೆ ಒಬ್ಬನಿಗೆ ೫೦ ರೂಪಾಯಿ ಬಿಲ್ಲು ಬಾಕಿ ಇತ್ತು. ಅವನಿಂದ ೫ ರೂಪಾಯಿಯನ್ನು ಲೆಡ್ಜರ್‌ಕ್ಲಾರ್ಕ್‌ಗೆ ಕೊಟ್ಟು ಅವನಿಂದ 'ನೊ ಅರಿಯರ್ಸ್' ಎಂದು ಮಾಡಿದ್ದಾರೆ ಹೇಗೆಂದರೆ ಆಡಿಟ್ ಆಗಿ ಟಿಕ್ ಮಾಡಿದಮೇಲೆ ೫ ರೂಪಾಯಿ ಪಕ್ಕ ಸೊನ್ನೆ ಹಾಕಿ 'ನೊ ಅರಿಯರ್ಸ್' ಎಂದು ಮಾಡಿದ್ದಾರೆ. ಒಂದು ನಿದರ್ಶನ ಇದನ್ನು ಯಾರು ಮಾಡಿದರೋ ಅವರ ಸಂಬಂಧಪಟ್ಟವರಿಂದಲೇ ತಿಳಿಯಿತು. ಬಿಲ್ಸ್ ಕಳುಹಿಸುವಾಗ ಟಿಕ್ ಮಾಡಿಲ್ಲ. ಆಡಿಟರ್ ಬಂದು ಆಡಿಟ್ ಮಾಡಿದ ಮೇಲೆ ಅಲ್ಲಿಯ ಅಕೌಂಟೆಂಟ್ಸ್ ಈರೀತಿ ಮಾಡಿದ್ದಾರೆ. ಈರೀತಿ ಎಲೆಕ್ಟ್ರಿಸಿಟಿ ಬೋರ್ಡ್‌ಗೆ ಲಕ್ಷಾಂತರ ರೂಪಾಯಿ ಸೇರಿ ಹೋಗಿ ಜನಗಳಿಗೆ ತೊಂದರೆಯಾಗುವುದಲ್ಲದೆ, ಸರ್ಕಾರಕ್ಕೂ ನಷ್ಟವಾಗುತ್ತಾ ಇದೆ. ಇವರು ಮಾಡತಕ್ಕಂಥ ಅಕ್ರಮ, ಅನ್ಯಾಯಗಳಿಗೆ ಜನಗಳ ಮೇಲೆ ತೆರಿಗೆ ಹೊರಿಸುವುದರಿಂದ ಇದರ ಬಗ್ಗೆ ಪೂರ್ಣವಾಗಿ ವಿಚಾರ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಇನ್ನು ಬೇಕಾದಷ್ಟು ಹೇಳುವುದು ಇದೆ. ಇದು ಮುಖ್ಯವಾದ ವಿಚಾರ ಆದುದರಿಂದ ಇವನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಕೊಡ ಬೇಕೆಂದು ಹೇಳುತ್ತೇನೆ.

Sri SIDDAVEERAPPA:– This is a very serious problem that has drawn the attention of the whole State and particularly the consumers. It has stirred the people and they really do not know what to do; they are perplexed and they are in a dazed condition. We do not know what happened next minute. In the circumstances suggest that this Electricity Board must be immediately suspended and the Chairman must also be kept under suspension and investigation started. Until and unless that is done, we say you also have a finger in the pie.

ಶ್ರೀ ಟಿ. ಆರ್ ಶಾಮಣ್ಣ :–ಸ್ವಾಮೀ, ಲಕ್ಷಾಂತರ ರೂಪಾಯಿಗಳಷ್ಟು ಹಣ ಸರ್ಕಾರಕ್ಕೆ ಬರುವುದು ಸೋರಿಹೋಗುತ್ತಿದೆ. ಇದರ ಬಗ್ಗೆ ತಕ್ಷಣ ಕಾರ್ಯಕ್ರಮ ತೆಗೆದುಕೊಳ್ಳಬೇಕು. ರಿಕಾರ್ಡುಗಳನ್ನು ನಾಶ ಮಾಡುತ್ತಿದ್ದಾರೆ. ಇದರ ಬಗ್ಗೆ ಇಲ್ಲಿ ಮಾತನಾಡಲು ತಾವು ಸ್ವಲ್ಪ ಅವಕಾಶ ಮಾಡಿಕೊಡಬೇಕು ಈ ಸೂಚನೆಯನ್ನು ನಾನು ಬೇಗನೆ ಕೊಡಬೇಕಾಗಿತ್ತು ಎಂದು ಅಧ್ಯಕ್ಷರು ಹೇಳಿದರು. ಆದರೆ ನಾನು ಊರಿಗೆ ಬಂದಿದ್ದೆ ಶನಿವಾರದ ದಿನ ನಿನ್ನೆತಾನೇ ನನಗೆ ಇದರ ಸಮಾಚಾರ ಪೂರ್ತಿ ಗೊತ್ತಾಯಿತು. ಆ ಕೂಡಲೇ ನಾನು ವಿವರಗಳನ್ನು ಬರೆದು ತಮಗೆ ಇಂದು ಹತ್ತು ಗಂಟೆಯೊಳಗೆ ಕೊಟ್ಟಿದ್ದೇನೆ. ಇದರ ಬಗ್ಗೆ ಇಲ್ಲಿ ಮಾತನಾಡುವಾಗ ನಾವು ಎಲ್ಲ ವಿವರಗಳನ್ನೂ ಹೇಳೋಣ ಎಂದರೆತಾವು ನಮಗೆ ಕೊಡುವ ಕಾಲಾವಕಾಶ ಕೇವಲ ಐದು ಅಥವಾ ಹತ್ತು ನಿಮಿಷಗಳಲ್ಲಿ ಮಾತ್ರ ಇಷ್ಟರಲ್ಲಿ ಈ ಒಂದರ ವಿಚಾರಗಳನ್ನು ಹೇಳುತ್ತಾ ಹೋದರೆ ನಮಗೆ 'ಇನ್ನು ಳಿಯುವ ಬೇರೆ ವಿಚಾರಗಳನ್ನು ಮಾತನಾಡಲು ಅವಕಾಶವೇ ಸಿಗುವುದಿಲ್ಲ. ಬೇರೆ ವಿಚಾರಗಳ ಜೊತೆಗೆ ಇದರ ವಿಚಾರವನ್ನೂ ಸೇರಿಸಿ ಮಾನ್ಯ ಮಂತ್ರಿಗಳು ಯಾವುದೋ ರೀತಿಯಲ್ಲಿ ಉತ್ತರ ಕೊಡುತ್ತಾರೆ. ಇದರಿಂದೇನೂ ಪ್ರಯೋಜನವಾಗುವುದಿಲ್ಲ.

Mr. SPEAKER :– The importance of this matter cannot be underestimated. The demands relating to that very same department are being discussed This pointcan also be rised in the course of the discussion. In fact the Hon Leader of the Congress(R) party Sri Siddaveerappa made a strong plea in support of the adjournment motion . There is also a specific rule in the Rules of procedure which says that whenever there is alternative opportunity available, it can be made use of Another thing I want to say is, this incident seems to have occurred three or four days back. I do not know what prevented the Hon. Member from bringing it earlier. I consider therefore, the matter is not one of such importance as to adjourn the normal work. I am sorry I cannot give consent the adjournment motion.

ಶ್ರೀ ಟಿ. ಆರ್. ಶಾಮಣ್ಣ :—ಸ್ವಾಮೀ. ಇದು ಬಹಳ ಮುಖ್ಯವಾದ ವಿಚಾರ ಲಕ್ಷಾಂತರ ರೂಪಾಯಿಗಳಷ್ಟು ಹಣ ಸರ್ಕಾರಕ್ಕೆ ನಷ್ಟವಾಗುತ್ತಿದೆ. ಇದರ ಬಗ್ಗೆ ಇಲ್ಲಿ ನಮಗೆ ಚರ್ಚೆ ಮಾಡಲು ತಾವು ಸಾಕಷ್ಟು ಅವಕಾಶ ಬೇಗನೇ ಮಾಡಿ ಕೊಡಲೇ ಬೇಕು.

Mr. SPEAKER:– I have already admitted a Call Attention Notice given by Sri Mallappa and it will be included the Agenda in the very near future. In the Circumstances, as I have already ruled I am unable to admit the motion

Sri. SIDDAVERAPPA:– This is not a subject which can be discussed a by Call Attension Notice because we know the limitations under that. So I am requesting you not to stick to certain rules this is an important matter wherein the entire State is involved the life and property of the consumers are involed in this. you must have read in the papers that the ex—Chief Engineer of Electricity Mr. Hayath and others have expressed their concern that the interests of the consumers should be the prime concern of the Electricity Board which they are not safeguarding. There was a time when there were gems of people working there; now only corrupt people are at the helm affairs.

Mr. SPEAKER: After having considered everything I have given my ruling.

Sri H. SIDDAVEERAPPA: We request you to allow at least a substantive motion and give two hours for discussion.

Mr. SPEAKER It the hon member gives a fresh notice I shall consider it.

2 *Matter Under Rule*: 312, *Regarding Demand made by the Students of th veterinary college*

ಶ್ರೀ ಪಿ ವೆಂಕಟಗಿರಿಯಪ್ಪ (ಕೋಲಾರ) : ಸ್ವಾಮೀ, ಕಳೆದ ತಿಂಗಳು ಐದನೇ ತಾರೀಕಿನಿಂದ ವಿಧಾನ ಸೌಧದ ಮುಂದೆ ವೆಟರ್ನರಿ ಕಾಲೇಜಿನ ವಿದ್ಯಾರ್ಥಿಗಳು ಮುಷ್ಕರ ನಡೆಸುತ್ತಿದ್ದಾರೆ. ಸರ್ಕಾರದವರು ಅವರ ನ್ಯಾಯವಾದ ಬೇಡಿಕೆಗಳೇನಿವೆ ಅವುಗಳನ್ನು ಈಡೇರಿಸುವುದಕ್ಕೆ ಪ್ರಯತ್ನ ಮಾಡದೇ ಇರುವುದರಿಂದ ಅವರು ಮುಷ್ಕರವನ್ನು ಹಾಗೆ ಮುಂದುವರಿಸುತ್ತಿದ್ದಾರೆ. ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳಿಗೆ ನಾನು ಹೇಳುವುದು ಬೇರೆ ರಾಜ್ಯಗಳಲ್ಲಿ ವೆಟರಿನರಿ ಗ್ರಾಜುಯೇಟರುಗಳಿಗೆ ಸಂಬಳ ಜಾಸ್ತಿ ಮಾಡಿರುವಾಗ ಎಂದರೆ ಅವರ ಗ್ರೇಡು ೩೫೦—೪೮೦ ರಂತೆ ಸಂಬಳ ಹೆಚ್ಚು ಮಾಡಿರುವಾಗ ನಮ್ಮ ರಾಜ್ಯದಲ್ಲಿ ೨೯೫ ರೂಪಯಿಗಳಿಗೇ ಇರಬೇಕು ಎಂದು ಹಠ ಹಿಡಿಯುವುದು ಸರಿಯಲ್ಲ. ಇದನ್ನು ಪರಿಶೀಲನೆ ಮಾಡಿ ತೀರ್ಮಾನ ಮಾಡಬೇಕು. ಇದರ ಬಗ್ಗೆ ಸಂಬಂಧಪಟ್ಟ ಮಂತ್ರಿಗಳಲ್ಲಿಗೆ ಶ್ರೀ ಗೋಪಾಲಗೌಡರು, ಶ್ರೀ ಎಂ ಎಸ್ ಕೃಷ್ಣನ ಮತ್ತು ನಾನು ಎಲ್ಲರೂ ಹೋಗಿ ಅವರಿಗೆ ನಮ್ಮ ರುಜು ಹಾಕಿರುವ ಒಂದು ಮನವಿಯನ್ನೂ ಕೊಟ್ಟು ಹೇಳಿದಾಗ ಅವರು ಉತ್ತರ ಕೊಡುವಾಗ ಸಮರ್ಪಕವಾಗಿ ಕನ್‌ಸಿಡರು ಮಾಡುತ್ತೇವೆ ಮತ್ತು ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತೇವೆ ಮತ್ತು ಇದನ್ನು ಬಡ್ಜೆಟ್ಟು ಅಧಿವೇಶನವಾದ ಮೇಲೆ ತೀರ್ಮಾನ ಮಾಡುತ್ತೇವೆ ಎಂದು ಈ ವಿದ್ಯಾರ್ಥಿಗಳಿಗೆ ಸರಕಾರದವರು ಆಶ್ವಾಸನೆ ಕೊಟ್ಟರು ಮತ್ತು ವಿದ್ಯಾರ್ಥಿಗಳು ಕಾಲೇಜುಗಳಿಗೆ ವಾಪಸು ಹೋಗಬೇಕು ಎಂದು ಅವರನ್ನೂ ಒತ್ತಾಯ ಮಾಡಿದರು. ಆದರೆ ಇದೇ ತಿಂಗಳು ೧೦ನೇ ತಾರೀಖು ಮಾನ್ಯ ಮುಖ್ಯ ಮಂತ್ರಿಗಳು ಲೆಜಿಸ್ಲೇಟೀವ್ ಕೌನ್ಸಿಲ್‌ನಲ್ಲಿ ಕಾಲ್‌ಅಟೆನ್‌ಷನ್ ಬಗ್ಗೆ ಉತ್ತರ ಕೊಡುವಾಗ ಈ ರೀತಿ ಹೇಳಿಕೆ ಕೊಟ್ಟಿದ್ದಾರೆ:

> There is absolutely no chanoe whatsoever of the state Government revising the pay scales of Veterinary Assistrnt Surgeons as demanded by the students of the Veterinary College who are currently on strike.

ಆದರೆ ಇದಕ್ಕೆ ಸಂಬಂಧಪಟ್ಟ ಇಲಾಖಾ ಮಂತ್ರಿಗಳು ಇದೇ ತಿಂಗಳು ೯ನೇ ತಾರೀಖಿನ ದಿನ ನಾವು ಈ ಸಭೆಯಲ್ಲಿ ಕೊಟ್ಟಿದ್ದ ಕಾಲ್ ನೋಟಿಸಿಗೆ ಈ ರೀತಿಯಾಗಿ ಹೇಳಿಕೆ ಕೊಟ್ಟಿದ್ದಾರೆ

> I Would leke to assure the House that consistent with the financial resources of the State, the State Government would give utmost sympthetic consideration to the request of veterinary college who are representing on behalf of the Veterinary graduates of the Department. I hope with this assurance they will call of the agitation and the students will attend the college. Government would consider similar issues and come to a decision after the budget session is over.

ಇಲ್ಲಿ ಸಂಬಂಧಪಟ್ಟ ಮಂತ್ರಿಗಳು ಕೊಡುವ ಹೇಳಿಕೆ ಒಂದು ರೀತಿಯಾಗಿದೆ ಮತ್ತು ಮುಖ್ಯ ಮಂತ್ರಿಗಳು ಕೊಡುತ್ತಿರುವ ಹೇಳಿಕೆ ಒಂದು ರೀತಿಯಾಗಿದೆ. ನ್ಯಾಯವಾಗಿ ಇದರಲ್ಲಿ ಯಾವುದುಸರಿ ಎನ್ನುವುದೇ ಗೊತ್ತಾಗುತ್ತಿಲ್ಲ. ಈ ವಿಷಯದಲ್ಲಿ ಸರ್ಕಾರದ ಧೋರಣೆ ಏನು ಎನ್ನುವುದು ಸರಿಯಾಗಿ ಗೊತ್ತಾಗುತ್ತಿಲ್ಲ ಇದಕ್ಕಾಗಿ ಇಲ್ಲಿ ಮುಷ್ಕರ ಹೂಡಿರುವ ವಿದ್ಯಾರ್ಥಿಗಳು ಸರ್ಕಾರದಿಂದ ಸರಿಯಾದ ಭರವಸೆ ಬರುವವರೆಗೂ ಮುಷ್ಕರ ಮುಂದುವರಿಸುತ್ತೇವೆ ಎಂದು ಹೇಳುತ್ತಿದ್ದಾರೆ. ಇದರ ವಿಷಯದಲ್ಲಿ ಸರಕಾರದ ಧೋರಣೆ ಏನೇ ಆಗಲಿ

ಇವರು ಆರು ತಿಂಗಳು ಬೇಕಾದರೂ ಮುಷ್ಕರ ಮಾಡಲಿ ನಾವು ಏನೂ ಮಾಡುವುದಿಲ್ಲ ಎಂದು ಸರಕಾರದವರು ಹೇಳುತ್ತಾರೆಯೆ? ಇಲ್ಲವೇ ಸಂಬಂಧಪಟ್ಟ ಮಂತ್ರಿಗಳು ಇವೆಲ್ಲಾ ವಿಚಾರಗಳನ್ನೂ ಪರಿಶೀಲನೆ ಮಾಡಲು ಎಲ್ಲ ವಿಚಾರಗಳನ್ನೂ ಗಮನಿಸಿದ್ದಿಟ್ಟುಕೊಂಡು ಮಾಡುತ್ತಾರೆಯೇ ಎನ್ನುವುದರ ಬಗ್ಗೆ ಇಲ್ಲಿ ಕ್ಲಾರಿಫೈ ಮಾಡಬೇಕೆಂದು ತಮ್ಮ ಮೂಲಕ ಸರಕಾರದವರನ್ನು ಕೇಳುತ್ತೇನೆ.

Sri G. B. SHANKAR RAO.— (Minister for the Veterinary and Animal Husbandry.

Actually there is no contradiction between what the Hon. chief Minister stated and what I have stated on the floor of this House. The demand of the Veterinary Graduates is that they should be given the benefit of pay scale that has been awarded to the Medical Graduates. So far as the pay scales are concerned, they have been recommended by the pay Commission. We thought that it was not possible to give the pay scale of Medical Graduates. The Veterinary Graduates met me and the Hon. Chief Minister and demanded the same pay scales of Medical Graduates. In addition to that they made some other demands. We said we shall consider their demands sympathetically except the higher pay scales. Finally we told them that we will consider other demands and come to a decision after the Budget Session. There is no difference between what I have said and what the Hon. Chief Minister said in the matter.

2-30 P. M.

Sri AZEEZ SAIT.—It is very clear from the statement read by Sri Venkatagiriyappa that there is some difference between what the Hon. Minister has stated in this House and what the Hon. Chief Minister has stated in the other House. I do not understand why the Minister has not understood this difference. There is a clear cut deviation in the statement of the Hon. Minister for Veterinary Services from what the Hon. Chief Minister has stated in the other House. The Hon. Minister for Animal Husbandry is misusing his power and going back on his statement just to please the Hon. Chief Minister. This is a fit case to be referred to the Privilege Committee.

Sri S. SIVAPPA.—The Hon. Minister says that he has assured the delegation that the Government would consider the demands after the Budget Session. Shall we take it as an assurance on behalf of the Government that the Government would take up this question and give a sympathetic consideration for all the demands after the Budget Session. You have already given a call to stop the strike. May I once again request the Government to give a call to the students to call off the strike with this assurance.

Sri G. B. SHANKAR RAO.—The Hon. Leader of the Opposition is stating that the Government should consider the entire issue and to give an assurance to call off the strike. I have to make one thing clear.

(Sri G. B. SHANKAR RAO)

The Veterinary Graduates will have the benefit of new scales the Govern ment have sanctioned. There is a difference between the pay scale of Agricultural Graduates and these Veterinary Graduates. So far as the demands of these Graduates are concerned, the Government will sympathetically consider consistent with the financial position of the State, and we will consider them after the Budget Session;

Sri P. VENKATAGIRIYAPPA.—I am satisfied (Strike by some NGO's met the Legislator's Home)

ಶ್ರೀ ಬಿ. ಗಂಗಣ್ಣ —ಸ್ವಾಮಿ, ಎನ್. ಜಿ. ಓ. ಸಂಘದ ವತಿಯಿಂದ ಕೆಲವು ಎನ್. ಜಿ. ಒ. ಗಳು ನಮ್ಮ ಲೆಜಿಸ್ಲೇಟರ್ ಹೋಂ ಮುಂದುಗಡೆ ಸ್ಟ್ರೈಕ್ ಮಾಡುತ್ತಿದ್ದಾರೆ. ಇದರಿಂದ ನಮಗೆ ನಾನಾ ತರಹ ತೊಂದರೆಗಳು ಬರಬಹುದು. ಅದನ್ನು ಅವಾಯ್ಡ್ ಮಾಡುವುದಕ್ಕೆ ತಕ್ಕ ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ಅರಿಕೆ ಮಾಡುತ್ತಿದ್ದೇನೆ.

Mr. SPEAKER.—I assure the House that nobody will be allowed to disturb the Hon. Members.

Sri M. S. KRISHNAN:—I request the Chair to kindly direct the office to concerned to deliver the letters and telegrams addressed to the members in time. For instance some telegrams and letters addressed to my Vidhana Soudha Addrers are not being delivered to me. A very important telegram dated 4th March 1970 by the Secretary of the Communist Party, Hubli, has not been delivered to me. That telegram contained the attrocities committed in Hubli. It reads like this.

Mr. SPEAKER.—The Hon. member need not read the contents.

Sri M. S. KRISHNAN.—Similarly, another letter sent by a gentleman rom Bijapur was not delivered to me in time.

Mr. SPEAKER.—The point is that the Hon. member is getting telegrams sent to him in time !

Sri M. S. KRISHNAN.—I went to know whether any discrimination is made even with regard to the telegrams sent to us ?

Sri AZEEZ SAIT.—Sir, now-a-days I feel that this Government is a Government of agitation, strikes, and hunger strikes, because nothing is solved unless there is agitation and cry. We do not know what course should be adopted. People are on hunger-strike before the Legislators Home. Do you want me to send all of them to your house ?

Mr. SPEAKER.—With regard to the point raised by the Hon. member Sri Krishnan, I do not know where the mistake lies If there is any mistake with my Secretariat, I shall look into it. If the mistake lies with the Postal authorities, the Hon. member my seek remedy with the Postal authorities.

With regard to the point raised by the Hon. member Sri Az ez Sait I wish to inform the House that people go on strike at their own risk and for their own benefit. As far as members are concerned, protection will be given to all Hon. Members.

Sri H. N. NANJE GOWDA.– Sir, the Chair can also pull up the Postal authorities if there is delay on their part with regard to the delivery of telegrams to Members.

Personal explanation by the Minister for Finance Planning and youth Welfare.

†Sri RAMAKRISHNA HEGDE (Minister for Finance Planing and youth welfore):—

Sir, my attention was drawn to certain allegation made by the Hon Member Sri N. Huchmasthy Gowda during the course of his speech last Friday. I was not present when he made the speech, and I could not attend the Session the next day on account of my preoccupation in certain meeting. Therefore, I take this first opportunity to submit to you that the allegation made by the Hon. Member is entirely baseless.

Sri H. N. NANJE GOWDA.—Sir, I rise to a Point of order. I do not know whether the Hon. Minister is making a personal explanation.

Mr. SPEAKER.—He is permitted to make a personal explanation !

Sri H. N. NANJE GOWDA.—The comments were made by Sri Huchmasthy Gowda during the course of general discussion. It was well within the jurisdiction and scope of the Minister concerned or the Government to be present on that day, note down the points and make a personal explanation. If this House is to wait for the pleasure of the Ministers, it amount to dereliction of duty on their part. It would not be proper to hear such personal explanation and therefore he need not be allowed to make a pers nal explanation now, and we are not prepared to hear him.

Mr. SPEAKER.—There is no point of order, The Hon Minister may please continue.

Sri RAMAKRISHNA HEGDE.—Sir, I wanted to just submit to you that the allegation made by the Hon. Member is absolutely baseless. I do not have any financial interest in the said company nor any member of my family. I wish the Hon. Member had taken a little trouble to verify the veracity of his statement when he made such a statement on the Floor of this House. I might inform the Hon. Member that the particular company has not issued even its prospectus, and if he has some knowledge of the working of the company unless the

(Sri RAMAKRISHNA HEGDE)

prospectus is issued no shares are sold and no shares are sold to any public. It is only the promoters of this company that have so far contributed to the share capital. Under these circumstances, it is absolutely untrue to say that I have some interest in this company. If the Hon. Member is not satisfied, I have here signed a Transfer Deed : it says :—

> "I hereby transfer whatever the interest I have by way of shares or in any other manner in Mangalore Fertilizer Factory to Sri N. Huchmasthy Gowda, M. L. A., as a gift."

Sri H. SIDDAVEERAPPA.—Sir, I rise to a point of Order. Hon. Finance Minister is a veryintelligent man, I know I am really sorry that even the elementary principle of executing a Transfer Deed under a Registered Deed has not been followed by him. It is a mere scrap of paper ; it has no value. He has only transferred a scrap of paper.

Sri RAMAKRISHNA HEGDE —Sir, I am prepared to take my friend Sri Siddaveerappa to the Sub-Registrar's office and make him the witness for the attestation.

ಶ್ರೀ ಎಸ್. ಬಂಗಾರಪ್ಪ.—ಸ್ವಾಮಿ, ಮಾನ್ಯ ಮಂತ್ರಿಗಳು ಶ್ರೀಮಾನ್ ಹುಚ್ಚಮಾಸ್ತಿಗೌಡರನ್ನು ಮಾತ್ರ ಅಡಾಪ್ಟ್ ಮಾಡಿಕೊಳ್ಳುತ್ತಿದ್ದಾರೆ. ನಮ್ಮನ್ನೂ ಏತಕ್ಕೆ ಅವರು ಅಡಾಪ್ಟ್ ಮಾಡಿಕೊಳ್ಳಬಾರದು.

Mr. SPEAKER —The Hon. Minister may transfer the entire thing in the name of the Hon. members.

Sri M. S. KRISHNAN.—Sir, are we to consider that Chief Minister and the Finance Minister have fallen in love with Sri Huchmasthy Gowda ?

†ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಅಧ್ಯಕ್ಷರೇ, ನನಗೆ ಮೊನ್ನೆ ಮಾನ್ಯ ಮುಖ್ಯ ಮಂತ್ರಿಗಳು ಮತ್ತು ಈ ದಿವಸ ಮಾನ್ಯ ಹಣಕಾಸಿನ ಸಚಿವರು ಇಬ್ಬರೂ ನನಗೆ ಅವರ ಬಹಳ ದೊಡ್ಡ ಆಸ್ತಿಯನ್ನು ಕೊಡುವುದಾಗಿ ಹೇಳಿದ್ದಾರೆ. ನಾನು ಅದನ್ನು ಬಹಳ ಸಂತೋಷದಿಂದ ಒಪ್ಪಿಕೊಂಡಿದ್ದೇನೆ. ಇದು ಅಷ್ಟೊಂದು ಸುಲಭದಲ್ಲಿ ಆಪಾದನೆಯಿಂದ ಕಳಚಿಕೊಂಡು ಹೋಗುವುದಕ್ಕಾಗುವುದಿಲ್ಲ. ಇಲ್ಲಿ ನಡೆದಿರತಕ್ಕ ವಿಚಾರಗಳನ್ನು ನಾನು ಸ್ವಲ್ಪ ಹೇಳಬೇಕಾಗುತ್ತದೆ. ಮಾನ್ಯ ಮಂತ್ರಿಗಳು ಅವರ ಹೆಸರಿನಲ್ಲಿರತಕ್ಕ ಆ ಆಸ್ತಿ ನನಗೆ ಬರೆದುಕೊಡುತ್ತೇನೆಂದು ಹೇಳಿದ ಮಾತ್ರಕ್ಕೆ ನಾನು ಹೇಳುವುದನ್ನು ಬಿಡುವುದಕ್ಕಾಗುವುದಿಲ್ಲ. ಒಬ್ಬ ಸಾಮಾನ್ಯ ಪ್ರಜೆ ಒಂದು ಕಂಪನಿಯಲ್ಲಿ ಷೇರ್ ತೆಗೆದುಕೊಂಡರೆ ಆಥವಾ ಏನಾದರೂ ಆದರಲ್ಲಿ ಆಸಕ್ತಿ ವಹಿಸಿದ್ದರೆ ಆದನ್ನು ಈ ಸಭೆಯಲ್ಲಿ ಕೇಳತಕ್ಕಂಥ ಅಗತ್ಯ ಇರಲಿಲ್ಲ. ಮುಖ್ಯ ಮಂತ್ರಿಗಳು ಒಬ ರು ಮತ್ತು ಇನ್ನೊಬ್ಬರು ಮಂತ್ರಿಗಳು ಇವರು ಇಬ್ಬರ ಮೇಲೆ ನಾನು ಕೆಲವು ಆಪಾದನೆಗಳನ್ನು ಮಾಡಿದ್ದೇನೆ, ನಾನು ನನಗೆ ತಿಳಿದಿರತಕ್ಕ ವಿಷಯಗಳನ್ನು ಸಭೆಯಮುಂದೆ ತಿಳಿಸಿದ್ದೇನೆ. ಮಾನ್ಯ ಮುಖ್ಯ ಮಂತಿಗಳಾಗಲೀ ಆಥವಾ ಮಾನ್ಯ ಹಣಕಾಸಿನ ಮಂತ್ರಿಗಳಾಗಲೀ, ಇಂತಿಂಥಾ ಕಂಪನಿಗಳಲ್ಲಿ, ಇಂತಿಂಥಾ ಉದ್ಯಮದಲ್ಲಿ ಆಸಕ್ತಿಯನ್ನು ವಹಿಸಿದ್ದಾರೆ ಎಂದು ಹೇಳುವುದಕ್ಕೆ ಈ ಸಭೆಯ ಮಾನ್ಯ ಸದಸ್ಯರಿಗೆ ಅಧಿಕಾರ ಇದೆ. ಆವರು ಮಂತ್ರಿಗಳಾಗಿರುವುದರಿಂದ ಅವರ ಮೇಲೆ ಅನುಮಾನಬಂದಾಗ ಅದನ್ನು ಈ ಸಭೆಯ ಮುಂದೆ ಇಡತಕ್ಕದು ಅಗತ್ಯ ಮತ್ತು ಅದು ನನ್ನ ಕರ್ತವ್ಯ.

ಅಧ್ಯಕ್ಷರು.—ಈಗ ಕಾಟ್ರವರ್ಸಿ ಏನಿತ್ತು ಅದು ಮುಗಿಯಿತು. ಆದ್ದರಿಂದ ಮಾನ್ಯ ಸದಸ್ಯರು ಈ ವಿಚಾರವನ್ನು ಇಲ್ಲಿಗೇ ನಿಲ್ಲಿಸುವುದು ಒಳ್ಳೆಯದು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸ್ವಾಮಿ, ನಾನು ಮಾಡಿರತಕ್ಕ ಅಪಾದನೆಗಳಿಗೆ ಮಾನ್ಯ ಸಚಿವರು ಗಳು ಉತ್ತರ ಕೊಡಬೇಕಾಗುತ್ತದೆ. ಇದೇ ರೀತಿಯ ಅಪಾದನೆ ಹಿಂದೆ ಒಂದಾವರ್ತಿ ಪಂಜಾಬಿನ ಮುಖ್ಯ ಮಂತ್ರಿ ಕೈರಾನ್ ಮೇಲೆಯೂ ಬಂದಿತ್ತು; ಮತ್ತು ವಿಚಾರಣೆ ನಡೆಯಿತು. ಅದೇ ರೀತಿಯ ಅಪಾದನೆ ಇಲ್ಲಿರತಕ್ಕ ಮಂತ್ರಿಯವರ ಮೇಲೆ, ಅಥವಾ ಕೇಂದ್ರದಲ್ಲಿರತಕ್ಕ ಮಂತ್ರಿಯವರ ಮೇಲೆಯೂ ಬರಬಹುದು. ಈ ರೀತಿ ಬಂದಾಗ ವಿಚಾರಣೆ ಮಾಡಬೇಕಾಗುತ್ತದೆ. ಹಿಂದೆ ಇಲ್ಲಿ ಇದ್ದಂತಹ ಮುಖ್ಯ ಮಂತ್ರಿಯವರ ಮೇಲೆಯೂ ಅಪಾದನೆ ಬಂದಿತ್ತು. ಆಗ ಆಗಿದ್ದ ಪ್ರಧಾನಿಯವರಲ್ಲಿ ದೂರು ಹೋಯಿತು. ಅದಕ್ಕೆ ಪ್ರಧಾನಿಯವರು ಇದರಲ್ಲಿ ಬಲವಾದ ಅಪಾದನೆಗಳು ಇಲ್ಲವೆಂದು ಬಿಟ್ಟು ಬಿಟ್ಟರು. ಆಗ ಕೇಂದ್ರದಲ್ಲೂ, ರಾಜ್ಯದಲ್ಲೂ ಒಂದೇ ಪಕ್ಷದ ಸರ್ಕಾರ ಇದ್ದುದರಿಂದ ಆ ತೀರ್ಮಾನದ ಬಗ್ಗೆ ಅನುಮಾನ ಪಡುವುದಕ್ಕೆ ಅವಕಾಶ ಇದೆ. ನಾವೆಲ್ಲರೂ ಸಾರ್ವಜನಿಕ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದೇವೆ. ಸಾರ್ವಜನಿಕ ಕ್ಷೇತ್ರ ಕಲುಷಿತವಾಗಿದೆ ಎಂಬುದನ್ನು ನಾವೆಲ್ಲರೂ ಆರಿತಿದ್ದೇವೆ. ಅದರಿಂದ ಮುಕ್ತಿಯಾಗುವುದಕ್ಕೆ ಒಂದು ಮಾರ್ಗವನ್ನು ಕಂಡು ಹಿಡಿಯಬೇಕು. ನಾನು ಹಿಂದೆಯೂ ಹೇಳಿದ್ದೆ. ಒಂದು ಲೋಕಪಾಲ್ ಅಥವಾ ಲೋಕ ಆಯುಕ್ತ ಇದಕ್ಕೆ ಮಾಡದಿದ್ದರೆ, ಮಾಡಿದಂತಹ ಅಪಾದನೆಗಳಿಂದ ಮುಕ್ತರಾಗಲು ಆಗುವುದಿಲ್ಲ; ಎಂದು. ಈ ಮಲಬಾರ್ ಕೆಮಿಕಲ್ಸ್ ಅಂಡ್ ಫರ್ಟಿಲೈಸರ್ಸ್,—ಇದಕ್ಕೆ ಡಿಸೆಂಬರ್ ೧೯೬೬ನೇ ಇಸವಿಯಲ್ಲಿ ಕೇಂದ್ರ ಸರ್ಕಾರದಪರು ಲೈಸೆನ್ಸ್ ಕೊಟ್ಟಿದ್ದರು. ಆಗ ಮೆಸರ್ಸ್ ಇಂಟರ್‌ನ್ಯಾಷನಲ್ ಡೆವಲಪ್‌ಮೆಂಟ್-ಇನ್‌ವೆಸ್ಟ್‌ಮೆಂಟ್ ಕಂಪೆನಿ ಆಫ್ ನಸಾವ ಅಂಡ್ ಭಾಮಾ, ಇದರ ಕೊಲ್ಕಾಬರೇಟರ್ಸ್ ಆಗಿದ್ದರು. ಆ ಸಮಯದಲ್ಲಿ ಈ ಕಂಪೆನಿಯ ಷೇರ್ ಬಂಡವಾಳ ೫೨ ಕೋಟಿ ೫೦ ಲಕ್ಷ ರೂಪಾಯಿ ಇರಬೇಕೆಂದು ಇತ್ತು. ಮೈಸೂರು ಸರ್ಕಾರ ಅದಕ್ಕೆ ಎರಡು ಕೋಟಿ ಕೊಡುವುದಕ್ಕೆ ಒಪ್ಪಿಕೊಂಡಿದ್ದರು. ದುಗ್ಗಾಲ್ ಎಂಟರ್‌ಪ್ರೈಸೆರ್ಸ್ ಇದರ ಪ್ರೊಮೋಟರ್ಸ್ ಆಗಿದ್ದರು. ಅವರ ಯೋಗ್ಯತೆ ಏನೆಂಬುದನ್ನು ನೋಡದೆ, ಇದಕ್ಕೆ ೨೦ ಲಕ್ಷ ರೂಪಾಯಿಯನ್ನು ಸರ್ಕಾರ ದಿಂದ ಕೊಟ್ಟುಬಿಟ್ಟರು.

Mr. SPEAKER.—The Hon. Member may please conclude.

Sri H. SIDDAVEERAPPA.—Sir, having permitted do not try to interfere in this matter. Should you not permit him to say atleast what he wants to say?

Mr. SPEAKER.—The Hon. Member is not speaking on the relevant point.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಆ ಸಮಯದಲ್ಲಿ ದುಗಾಲ್ ಎಂಟರ್‌ಪ್ರೈಸ್‌ಗೆ ೨೦ ಲಕ್ಷ ರೂಪಾಯಿ ಆತುರಾತುರವಾಗಿ ಕೊಟ್ಟಿದ್ದಾರೆ. ಆ ಸಮಯದಲ್ಲಿ ಕೈಗಾರಿಕಾ ಮಂತ್ರಿಯಾಗಿದ್ದ ರಾಮಕೃಷ್ಣ ಹೆಗಡೆಯವರು ಯುರೋಪಿನಲ್ಲಿ ಪ್ರವಾಸ ಮಾಡಿದಾಗ ಟಿಕೆಟ್ ಫೇರ್ ತೆಗೆದುಕೊಂಡಿದ್ದಾರೆ. ಅವರು ಇಂಟರ್‌ನ್ಯಾಷನಲ್ ಡೆವಲಪ್‌ಮೆಂಟ್ ಇನ್‌ವೆಸ್ಟ್‌ಮೆಂಟ್ ಕಂಪೆನಿಯವರ ವಿಮಾನದಲ್ಲಿ ಪ್ರಯಾಣ ಮಾಡಿದ್ದಾರೆ. ಅವರು ಆ ಲಾಭ ಪಡೆದ ಪ್ರತಿಫಲವಾಗಿ, ಅವರ ಯೋಗ್ಯತೆ ಏನೆಂಬುದನ್ನು ತಿಳಿಯದೆ ಮೈಸೂರು ಸರ್ಕಾರದ ೨೦ ಲಕ್ಷ ರೂಪಾಯಿಯನ್ನು ಅವರಿಗೆ ಕೊಟ್ಟು ಹಾಳು ಮಾಡಿದ್ದಾರೆ. ಇದಕ್ಕೆ ಕಾರಣ ಯಾರು?

ಶ್ರೀ ಬಿ. ಗಂಗಣ್ಣ.—On a point of order, Sri. ಮಾನ್ಯ ಹುಚ್ಚಮಾಸ್ತಿಗೌಡರು ಹಿಂದೆ ಮಾಡಿದ ಅಲಿಗೇಷನ್ನಿನಲ್ಲಿ ಅವರಿಗೆ ಆ ಕಂಪೆನಿಯಲ್ಲಿ ಆಸಕ್ತಿ ಇದೆ, ಮುಂತಾದುದನ್ನು ವ್ಯಕ್ತಪಡಿಸಿದ್ದಾರೆ. ಆದರೆ ಈಗ ಹೇಳುತ್ತಾರೆ, ಅವರು ವಿದೇಶಗಳಲ್ಲಿ ಪ್ರವಾಸ ಮಾಡಿದಾಗ ಅವರಿಂದ ಇನ್‌ಡೈರೆಕ್ಟ್ ಲಾಭ ಪಡೆದುಕೊಂಡಿದ್ದಾರೆಂಬುದನ್ನು ಹೇಳಿದ್ದಾರೆ. ಆದ್ದರಿಂದ ಅದನ್ನು ರುಜುವಾತು ಪಡಿಸಲು ಇವರ ಹತ್ತಿರ ದಾಖಲುಗಳು ಏನಾದರೂ ಇದೆಯೇ, ಎಂಬುದನ್ನು ಕೇಳುತ್ತೇನೆ.

Mr. SPEAKER.—I uphold the point of order raised by Hon. Member Sri B. Ganganna. The only question is about the allegation that the

(MR. SPEAKER)

Hon. Minister for Finance Sri Ramakrishna Hegde had a big share in the Company. The Hon. Member Sri Hutchmasti Gowda is raising another point alleging that the Hon. Minister Sri Ramakrishna Hegde travelled in a plane etc., which is not relevant. This allegation was not made earlier. This House cannot afford to indulge in dialogues. I therefore uphold the point of order and request the Hon. Member Sri N. Hutchmasti Gowda to confine himself to the relevant point.

Sri RAMAKRISHNA HEGDE.—Sir, to the extent the Hon. Member has made further charges I must be given an opportunity to make a personal explanation. The Hon. Member is telling a lie.

Sri H. M. CHANNABASAPPA.—I rise to a point of order. When the Hon. Member Sri Hutchmasti Gowda has not yielded, how can the Chair permit the Hon. Finance Minister to speak?

Sri K. PUTTASWAMY.—The Hon. Member should say under what rule he is raising a point of order?

Sri H. M. CHANNABASAPPA.—If the Hon. Minister does not know the rules, I will teach him, Sir, my point is that the Hon. Chair has ruled many a time that unless the Hon. member who is speaking yields, no other member is allowed to speak. The Hon. member Sri Hutchmasti Gowda did not yield and still Sri Ramakrishna Hegde is remitted to complete his statement.

3-00 P. M.

MR. SPEAKER.—I am very glad that a very senior Member like Mr. H. M. Channabasappa is raising this point of order. He has referred to a very good principle, namely that when a member is speaking he should not be inter upted by another member unless the member, speaking yields. It is a very good principle. I fully subscribe to it. I only feel that the Hon Member himself should follow this salutary principle.

The other point is, how I permitted the Hon Minister for Finance to Complete his statement I did not permit him. Before I could ascertain whether the Member speaking would yield, the whole thing was over in a matter of seconds. Therefore, there was no question of permission and every thing is in order I only request the Hon Members to do the whole business in a dignified manner. Let us utilise the time in the best possible way and I request Sri N. H. Gowda to confine himself to the point raised. Let there be no diversion There are other Hon Members who want to make their observations.

Sri M. S. KRISHNAN.—I rise to a point of order Sir The Hon Minister while speaking just now in answer to Sri N. Huchamasti Gowda, said that it was an absolute LIE. I would like to know whether it is parliamentary or unparliamentary. If it is unparliamentary, it must be expunged.

MR. SPEAKER.—Whether a word is parliamentary or unparliamentary has to be read in the context in which it is used. Here perhaps the Hon Minister must have used that word in order to describe what was said by another member. I do not think it can be considered unparliamentary.

Sri B. P. GANGADHAR.—Sir, time and again you have held in this very House that the word LIE is unparliamentary and it should not be used in this House. I request you to kindly see that the ruling is revised.

MR. SPEAKER.—It the Hon Member convinces me, will revise my uling.

† ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇದು ಅಷ್ಟಕ್ಕೇ ನಿಲ್ಲಲಿಲ್ಲ. ಅಮೇರಿಕನ್ ಕೊಲ್ಯಾಬೊರೇಟರ್ಸ್ ಒಲನೇ ಇಸವಿಯಲ್ಲಿ ಹೊರಟುಹೋದರು. ಆಮೇಲೆ ಜಪಾನಿನಲ್ಲಿ ಒಂದು ಕಂಪನಿಯವರನ್ನು ಕೊಲ್ಯಾಬೊರೇಟರನ್ನಾಗಿ ಮಾಡಬೇಕೆಂದು ಪ್ರಯತ್ನ ನಡೆಯಿತು. ಹಿಂದೆ ಮುಖ್ಯಮಂತ್ರಿಯಾಗಿದ್ದಂಥ ಮತ್ತು ಆಗಿದ್ದಂಥ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀಮಾನ್ ನಿಜಲಿಂಗಪ್ಪನವರು ಡಿಪ್ಲೊಮ್ಯಾಟಿಕ್ ಪಾಸ್ ಪೋರ್ಟನ್ನು ಉಪಯೋಗಿಸಿಕೊಂಡು ಜಪಾನಿನಲ್ಲಿ ಅದರ ಪ್ರಯತ್ನ ನಡೆಸಿದರು. ಆ ಸಂದರ್ಭದಲ್ಲಿ ಮಲಬಾರ್ ಕೆಮಿಕಲ್ಸ್ ಆಂಡ್ ಫರ್ಟಿಲೈಜರ್ಸ್ ಕಾರ್ಖಾನೆಯಲ್ಲಿ ಕೆಲಸಮಾಡಿದಂಥ ಮಾನ್ಯ ಶ್ರೀ ಗುಟ್ಟಾಳ್ ಎಂಬುವರು ಒಬ್ಬರು ಪಬ್ಲಿಕ್ ರಿಲೇಷನ್ ಆಫೀಸರ್ ಆಗಿದ್ದರು. ಅವರ ಬಗ್ಗೆ ಪಾರ್ಲಿಮೆಂಟಿನಲ್ಲಿಯೂ ಇದರ ಬಗ್ಗೆ ಪ್ರಶ್ನೆಗಳಾಗಿದುವು. ಹೀಗಾಗಿ ಆಲ್ಲಿ ೨೦ ಲಕ್ಷ ರೂಪಾಯಿಗಳವರೆಗೆ ನಷ್ಟಮಾಡುವುದಕ್ಕೆ ಕಾರಣ ಯಾರು ಏನೋ ಇದರಲ್ಲಿ ಇವರಿಗೆ ಈ ವಿಷಯದಲ್ಲಿ ಆಸಕ್ತಿ ಇರಬೇಕು ಎಂದು ನಮಗೆ ಅನುಮಾನವಿದೆ. ಈ ೨೦ ಲಕ್ಷ ರೂಪಾಯಿಗಳ ನಷ್ಟಕ್ಕೆ ಯಾರ್ಯಾರು ಕಾರಣರು ಎಂಬುದನ್ನು ವಿಚಾರಣೆ ಮಾಡಬೇಕು. ಹಾಗೇನು ಆಗಿಲ್ಲವೆಂದು ಹೇಳಬೇಕಾದರೆ ಅವರು ಹೊರಗಡೆ ಬಂದು ಹೇಳಲಿ. ಲೋಕಪಾಲ ಮತ್ತು ಲೋಕಾಯುಕ್ತ ನೇಮಕಕ್ಕೆ ಸಂಬಂಧಪಟ್ಟ ಕಾನೂನೂ ಜಾರಿಗೆ ತಂದಿಲ್ಲ ಪಬ್ಲಿಕ್ ಎಂಕ್ವೈರೀಸ್ ಆಕ್ಟ್ ಕೂಡ ಈ ಸಭೆಯಲ್ಲಿ ಪಾಸಾಗಿ ಜಾರಿಗೆ ಬರಲಿಲ್ಲ ಅವು ಇದ್ದಿದ್ದರೆ ವಿಚಾರಣೆ ಮಾಡಬಹುದಾಗ ಕಂಡ ಇದಕೆ ಸಾರ್ವಜನಿಕ ವಿಚಾರಣೆ ಬಿಟ್ಟು ಬೇರೆ ಮಾರ್ಗವಿಲ್ಲ ಇವರ ಮೇಲೆ ಆಪಾದನೆ ಖಂಡಿತವಾಗಿದೆಯೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

‡ ಶ್ರೀ ರಾಮಕೃಷ್ಣ ಹೆಗಡೆ :—ಮಾನ್ಯ ಅಧ್ಯಕ್ಷರೇ, ನಾನು ಪುನಃ ಮಾನ್ಯ ಸದಸ್ಯರಿಗೆ ತಮ್ಮ ಮೂಲಕ ಭಿನ್ನೈಸುತ್ತೇನೆ ಆಪರು ಜವಾಬ್ದಾರಿಸ್ಥಾನದಿಂದ ಮಾತನಾಡುವಾಗ ಅವರ ಬಾಯಿಯಲ್ಲಿ ಹೀಗೆ ಬೇಜವಾಬ್ದಾರಿ ಮಾತು ಬರಕೂಡದು. ಯಾವುದೇ ಒಂದು ವಿಚಾರದಲ್ಲಿ ಮಾನ್ಯಸದಸ್ಯರಿಗೆ ಸಂಗತಿಗಳೇ ನೆಂಬುದು ಗೊತ್ತಿಲ್ಲವೋ ಮತ್ತು ಯಾವುದರ ಸಂಪೂರ್ಣ ಜ್ಞಾನವಿಲ್ಲವೋ, ಅಂಥ ವಿಚಾರಗಳ ಬಗ್ಗೆ ಅವರಿಗೆ ಬಾಯಿಗೆ ಬಂದ ಹಾಗೆ ಇಲ್ಲಿ ಮಾತನಾಡುವುದಕ್ಕೆ ಒಂದು ಪ್ರಿವಿಲೇಜ್ ಇದೆಯೆಂದು ಬೇರೆಯವರ ಮೇಲೆ ಮನಸ್ಸಿಗೆ ಬಂದಹಾಗೆ ಆರೋಪ ಮಾಡುವುದು ಖಂಡಿತವಾಗಿ ಸರಿಯಲ್ಲ. ನನಗೆ ಎಲ್ಲೆಲ್ಲಿಯೂ ಒಂದು ಡಿಪ್ಯುಟೇಷನ್ ಇದೆ. ಅವರಿಗೆ ಈ ರೆಪ್ಯುಟೇಷನ್ ಅನ್ನುವುದು ಏನಿದೆಯೋ ಅದು ನನಗೆ ಗೊತ್ತಿಲ್ಲ ನನಗಿರತಕ್ಕ ಈ ರೆಪ್ಯುಟೇಷನ್ ವಿಚಾರದಲ್ಲಿ ಅವರು ಒಂದು ಕಳಂಕ ಬರುವಂತೆ ಏನಾದರೂ ಮಾತನಾಡಿದರೆ ಇವತ್ತು ಈ ಸ್ಥಾನದಲ್ಲಿರುವುದಕ್ಕೆ ನಾನು ನಾಲಾಯಕ್. ಪ್ರಧಾನಮಂತ್ರಿಗಳಿಗೆ ಬೇಕಾದರೆ ಅವರು ಬರೆಯಲು, ತಿಳಿದುಕೊಳ್ಳಿ. ಫಾರಿನ್‌ಗೆ ಹೋದಾಗ ಖಾಸಗೀ ಕಂಪನಿ ಅಥವಾ ಆ ಕಂಪನಿಯವರ ವಿಮಾನವನ್ನು ಉಪಯೋಗಿಸಿದ್ದರೆ, ಫಾರಿನ್ ಎಕ್ಸ್‌ಚೇಂಜ್ ವಿಷಯದಲ್ಲಿ ಅನ್ಯಾಯವಾಗಿ ಮೋಸಮಾಡಿ ರೂಲ್ಸ್‌ಗೆ ವಿರೋಧವಾಗಿ ಯಾವುದೇ ರೀತಿ ಅದನ್ನು ನಾನು ಪಡೆದುಕೊಂಡಿದ್ದರೆ, ಅದನ್ನು ತನಿಖೆ

(ಶ್ರೀ ರಾಮಕೃಷ್ಣ ಹೆಗ್ಗಡೆ)

ಮಾಡಿಸಲಿ, ಆದರಲ್ಲಿ ಸತ್ಯಾಂಶವಿದೆಯೆಂದು ಹೇಳಿದರೆ ನನ್ನ ಹುದ್ದೆಗೆ ರಾಜೀನಾಮೆ ಕೊಡುತ್ತೇನೆ, ಈ ಸ್ಥಾನವನ್ನೂ ಬಿಟ್ಟು ಹೋಗುತ್ತೇನೆ. ಅವನ್ನು ಬಿಟ್ಟು ಯಾರ ಮೇಲೋ ಸೇಡು ತೀರಿಸಿಕೊಳ್ಳುವುದ ಕ್ಕೋಸ್ಕರ ಯಾರದೋ ತೇಜೋವಧೆಯನ್ನು ಮಾಡುವುದು ಅಷ್ಟು ಸರಿಯಾದುದಲ್ಲ. ನಾನು ಫಾರಿನ್‌ಗೆ ಹೋದಾಗ ಇಂಡಸ್ಟ್ರಿಮಿನಿಸ್ಟರ್ ಆಗಿರಲಿಲ್ಲ. ಜಪಾನಿಗೆ ಹೋದಾಗಲೂ ನಾನು ಇಂಡಸ್ಟ್ರಿಮಿನಿಸ್ಟರ್ ಆಗಿರಲಿಲ್ಲ. ಕೇವಲ ಅಲ್ಪ ಕಾಲದವರೆಗೆ ಇಂಡಸ್ಟ್ರಿಮಿನಿಸ್ಟರ್ ಆಗಿದ್ದೆ. ಆಗ ಯಾವ ತರಹ ನಿರ್ಣಯವೂ ಆಗಲಿಲ್ಲ. ಮಾನ್ಯ ಸದಸ್ಯರು ಹೇಳಿದರು ೨೦ ಲಕ್ಷ ರೂಪಾಯಿಗಳನ್ನು ಕೊಟಿ ದ್ದಾರೆಂದು. ನನ್ನ ತಿಳುವಳಿಕೆಯ ಪ್ರಕಾರ ೨೦ ಲಕ್ಷ ರೂಪಾಯಿಗಳನ್ನು ಪೂರಾ ಕೊಟ್ಟಿಲ್ಲ. ಲ್ಯಾಂಡ್ ಅಕ್ವಿಸಿಷನ್ ಬಗ್ಗೆ ಹಣ ಉಪಯೋಗಿಸಬೇಕೆಂದು ಸ್ವಲ್ಪ ತೆಗೆಮಕೊಂಡಿದ್ದಾರೆ. ಆ ಹಣವನ್ನು ನಮ್ಮ ಮೈಸೂರು ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಕಾರ್ಪೊರೇಷನ್ನಿನಲ್ಲಿಟ್ಟಿದ್ದರು. ಅದು ಇನ್ನೂ ರಿಲೀಜ್ ಆಗಿದೆಯೋ ಇಲ್ಲವೋ ಗೊತ್ತಿಲ್ಲ. ಅಂತೂ ೨೦ ಲಕ್ಷ ರೂಪಾಯಿಗಳನ್ನು ಕೊಟ್ಟಿಲ್ಲ. ಮಾನ್ಯ ಶ್ರೀ ಬನ್ನಬಸಪ್ಪನವರಿಗೆ ಸ್ವಲ್ಪ ವಾದರೂ ಈ ವಿಷಯ ಗೊತ್ತಿದೆ ಎಂಬುದಾಗಿ ನಾನು ಹೇಳುತ್ತೇನೆ.

ಶ್ರೀ ಎಚ್. ಸಿದ್ಧವೀರಪ್ಪ :—ಅವರಿಗೆ ನೇಗಿಲು ಹಿಡಿಯುವುದು ಒಂದೇ ಗೊತ್ತು.

ಶ್ರೀ ರಾಮಕೃಷ್ಣ ಹೆಗ್ಗಡೆ :—ಯಾವುದೇ ಒಂದು ಕಂಪನಿ ಎಲ್ಲಿಯವರೆಗೆ ತನ್ನ ಸಂಸ್ಥೆಯ ಪ್ರಾಸ್ಪೆಕ್ಟಸ್‌ನ್ನು ಹೊರಡಿಸುವುದಿಲ್ಲವೋ ಅಲ್ಲಿಯವರೆಗೆ ಅವರಿಗೆ ಸಾರ್ವಜನಿಕ ಷೇರ್ ಸಿಕ್ಕುವುದಿಲ್ಲ.

ಶ್ರೀ ಹೆಚ್. ಸಿದ್ಧವೀರಪ್ಪ :—ಸರ್ಕಾರ ಎಷ್ಟು ಹಣವನ್ನು ಹಾಕಿದೆ.?

ಶ್ರೀ ರಾಮಕೃಷ್ಣ ಹೆಗ್ಗಡೆ :—ಅಷ್ಟು ನಿರ್ಧಾರವಾಗಿ ಹೇಳುವುದಕ್ಕಾಗುವುದಿಲ್ಲ. ಪುರುವಿನಲ್ಲಿ ಕೊಟ್ಟದ್ದು ೫ ಲಕ್ಷ ರೂಪಾಯಿಗಳು ಕಂಪನಿ ವ್ಯವಹಾರ ನಡೆಸಿಕೊಂಡು ಹೋಗುವುದಕ್ಕೆ ಕೊಟ್ಟಿದ್ದು ಒಂದೆರೆಡು ಲಕ್ಷ ಮಾತ್ರ ಬಾಕಿ ಹಣವನ್ನು ಲ್ಯಾಂಡ ಅಕ್ವೆಜಿಷನ್ ಸಲುವಾಗಿ ಉಪಯೋಗಿಸಬೇಕೆಂದು ಕೊಟ್ಟಿದೆ.

ಶ್ರೀ ಹೆಚ್. ಎಂ. ಚನ್ನಬಸಪ್ಪ :—ಮೈಸೂರು ಸರ್ಕಾರಕ್ಕೆ ಇಂಟರಸ್ಟ್ ಇಲ್ಲದ ಮೇಲೆ ಅವರಿಗೆ ಏತಕ್ಕೆ ಕೊಟ್ಟಿರಿ?

ಶ್ರೀ ರಾಮಕೃಷ್ಣ ಹೆಗ್ಗಡೆ :—ಮೈಸೂರು ಸರ್ಕಾರದ ಮಂತ್ರಿಯಾಗಿ ನನಗೆ ತುಂಬ ಇಂಟರೆಸ್ಟ್ ಇದೆ. ಕಂಪನಿಗೆ ಸಂಬಂಧಪಟ್ಟ ಯಾವುದೇ ವಿಚಾರವಾಗಲಿ ಒಬ್ಬ ಮಂತ್ರಿಯಾಗಿ ನಾನು ತೀರ್ಮಾನ ಮಾಡುವುದಿಲ್ಲ. ಅದನ್ನು ಕ್ಯಾಬಿನೆಟ್ ಸೇರಿಕೊಂಡು ಒಟ್ಟು ತೀರ್ಮಾನ ಮಾಡುವುದು.

ಶ್ರೀ ಹೆಚ್. ಸಿದ್ಧವೀರಪ್ಪ :—ಕ್ಯಾಬಿನೆಟ್ ತೀರ್ಮಾನ ಮಾಡಿದ್ದರೆ, ಎಲ್ಲರೂ ತಪ್ಪಿತಸ್ಥರೇ.

ಶ್ರೀ ರಾಮಕೃಷ್ಣ ಹೆಗ್ಗಡೆ :—ಮಾನ್ಯ ಸದಸ್ಯರಿಗೆ ಪುನಃ ಕೇಳಿಕೊಳ್ಳುತ್ತೇನೆ, ಅವರ ಮನಸ್ಸಿನಲ್ಲಿ ಸಂದೇಹ ಇದ್ದರೆ, ಪರದೇಶಕ್ಕೆ ಹೋದಾಗ ಅವರ ಹತ್ತಿರ ವಿಮಾನ ತೆಗೆದುಕೊಂಡು ಹಾರಾಟಮಾಡಿದ್ದಾಗಲೀ, ಅವರಿಂದ ದುಡ್ಡು ತೆಗೆದುಕೊಂಡು ವಿಲಾಸ ಮಾಡಿದ್ದಾಗಲಿ ಇವರಿಗೆ ಗೊತ್ತಿದ್ದರೆ, ಈವತ್ತೇ ಕೇಂದ್ರ ಸರ್ಕಾರದ ಹೋಂ ಮಿನಿಷ್ಟರಿಗಾಗಲೀ, ಪ್ರಧಾನ ಮಂತ್ರಿಗಳಿಗಾಗಲಿ ಬರೆಯಿರಿ ನಮಗೆ ಹೀಗೆ ಗೊತ್ತಾಗಿದೆ ಇವರು ಹೀಗೆ ಮಾಡಿದ್ದಾರೆ ಎಂದು ತಿಳಿದು ಬಂದಿದೆ, ದಯವಿಟ್ಟು ಸಿ.ಐ.ಬಿ. ಯವರಿಂದ ತನಿಖೆ ನಡೆಸಿ '' ಎಂದು ಕೇಳಲಿ ಸಿ.ಐ.ಬಿ. ಯವರಿಂದ ತನಿಖೆ ಮಾಡಿ, ಇದು ನಿಜವಾದಲ್ಲಿ, ನಾನು ಈ ಸ್ಥಾನದಲ್ಲಿ ಇರುವುದಕ್ಕೆ ಲಾಯಕ್ಕಲ್ಲ ಎಂದು ಖಂಡಿತವಾಗಿ ಹೇಳುತ್ತೇನೆ.

BUDGET ESTIMATES FOR 1970-71-DEMANDS FOR GRANTS-DEMAND Nos. 6, 29, 30, 30A, 30B, 31. 31A, 32, 43, 45, 46, 47, 48, 50, 50A, DEBATE (Contd)

† ಶ್ರೀ ಬಿ. ಎಲ್. ನಾರಾಯಣ ಸ್ವಾಮಿ (ಶ್ರೀನಿವಾಸ ಪುರ).

(ಶ್ರೀ ಬಿ. ಎಲ್. ನಾರಾಯಣಸ್ವಾಮಿ)

ಸನ್‌ಮಾನ್ಯ ಅಧ್ಯಕ್ಷರೇ, ನಮ್ಮ ದೇಶದಲ್ಲಿ ೧೯ ಸಾವಿರ ೬೫೫ ಮೈಲಿ ಹಳ್ಳಿ ರಸ್ತೆಗಳು ಇವೆ. ಕೋಲಾರ ಜಿಲ್ಲೆ ಬಗ್ಗೆ ಹೇಳುವುದಾದರೆ ಅನೇಕ ಗ್ರಾಮಗಳಿಗೆ ರಸ್ತೆಗಳಲ್ಲಿ. ಇರತಕ್ಕ ರಸ್ತೆಗಳೂ ಸಹ ವಾಹನ ಸಂಚಾರಕ್ಕೆ ಅನುಕೂಲವಾಗಿಲ್ಲ. ರಸ್ತೆಗಳನು , ಮಾಡಿಸಿದ ಲಾಗಾಯ್ತು ಇದುವರೆಗೆ ಸಾಲಾಬಾದು ಕಾಮಗಾರಿ ಮಾಡಿಲ್ಲ. ಇಂತಹ ವಿಚಾರದಲ್ಲಿ ಇಲಾಖೆಯವರು ದಯವಿಟ್ಟು ಎಲ್ಲೆಲ್ಲಿ ರಸ್ತೆಗಳು, ಮೋರಿಗಳು, ಕಾಲುವೆಗಳು ಇತ್ಯಾದಿಗಳನ್ನು ಕಟ್ಟಬೇಕಾಗಿವೆಯೋ ಅಂಥ ಕೆಲಸಕ್ಕೆ ಆದ್ಯತೆ ಕೊಟ್ಟು ಆ ಕೆಲಸಗಳನ್ನು ಮಾಡಿಸಿ ಕೊಡಬೇಕೆಂದು ಸರ್ಕಾರಕ್ಕೆ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈಗ ಇರತಕ್ಕ ಪದ್ಧತಿಯಲ್ಲಿ ಒಂದು ತಾಲ್ಲೂಕಿನಲ್ಲಿ ೫೦–೬೦ ಮೋರಿಗಳು ಆಗಬೇಕಾಗಿದ್ದರೆ ಅಲ್ಲಿಗೆ ನೆಪ ಮಾತ್ರಕ್ಕೆ ಒಂದೆರೆಡು ಮೋರಿಗಳಿಗೆ ಹಣವನ್ನು ಅಲಾಟಮೆಂಟ್ ಮಾಡುತ್ತಿರುವುದರಿಂದ ಅಲ್ಲಿನ ಅಧಿಕಾರಿಗಳು ನಮಗೆ ಬಂದಿರುವುದೇ ಕಡಿಮೆ; ಹತ್ತು ಸಾವಿರ ಬಂದಿದೆ ಐದು ಸಾವಿರ ಬಂದಿದೆ; ಎಂದು ಹೇಳುತ್ತಾರೆ. ಇದು ಸರಿಯಾದದ್ದು ಅಲ್ಲ. ೨೦ ವರ್ಷಗಳಿಂದಲೂ ರಸ್ತೆಗಳು ನಾದುರಸ್ತಿ ಸ್ಥಿತಿಯಲ್ಲಿ ಇರತಕ್ಕದ್ದು ಹಾಗೆ ಮುಂದುವರಿಯುವುದು ಎನ್ನುವುದು ಅಮಾನುಷವಾದದ್ದು ದಯವಿಟ್ಟು ಇದರ ಕಡೆ ಹೆಚ್ಚಿನ ಗಮನ ಕೊಡಬೇಕೆಂದು ಸೂಚಿಸುತ್ತೇನೆ, ಇಷ್ಟೇ ಅಲ್ಲದೆ ಇನ್ನು ಪಿ.ಡಬ್ಲ್ಯೂ.ಡಿ, ಇಲಾಖೆಯವರು, ಅನೇಕ ಡಿಪ್ಟ್ರಿಕ್ಟ್ ಬೋರ್ಡುಗಳ ಮತ್ತು ಇತರ ರಸ್ತೆಗಳನ್ನು ತಮ್ಮ ಇಲಾಖೆಗೆ ತೆಗೆದುಕೊಳ್ಳತಕ್ಕ ವಿಚಾರದಲ್ಲಿ ಇಂಟರ್ ಸ್ಟೇಟ್ ರೋಡುಗಳಿಗೆ ಆದ್ಯತೆ ಕೊಡಬೇಕು. ಕೋಲಾರ ಜಿಲ್ಲೆಯ ಪಕ್ಕದಲ್ಲಿ ಆಂಧ್ರ ನಾಡಿದೆ. ಅಲ್ಲಿ ದಿವ್ಯನಾದ ರಸ್ತೆಗಳನ್ನು ಮಾಡಿದ್ದಾರೆ. ಆ ರಸ್ತೆಗಳ ಮುಖಾಂತರ ನಮ್ಮ ರಾಜ್ಯದೊಳಕ್ಕೆ ಬರತಕ್ಕ ಪ್ರಯಾಣಿಕರ ಮನಸ್ಸಿನಲ್ಲಿ ಇಲ್ಲಿ ನಮ್ಮ ರಸ್ತೆಗಳನ್ನು ನೋಡಿದ ಕೂಡಲೇ ಅವರ ಭಾವನೆ ಬದಲಾವಣೆ ಆಗುತ್ತದೆ ಆಗ ಮೈಸೂರು ಸರ್ಕಾರವನ್ನು ಹೀಯಾಳಿಸುತ್ತಾರೆ. ಅಂತಹ ಪರಿಸ್ಥಿತಿ ಆಗಬಾರದು. ಇಂಟರ್ ಸ್ಟೇಟ್ ರಸ್ತೆಗೆ ಲಿಂಕಾಗುವ ರಸ್ತೆಗಳಿಗೆ ಆದ್ಯತೆ ಕೊಟ್ಟು ಕನಿಷ್ಟಪಕ್ಷ ಒಂದು ವರ್ಷಕ್ಕೆ ನಮ್ಮ ರಾಜ್ಯದಲ್ಲಿ ಒಂದು ಸಾವಿರ ಮೈಲಿಗಳಿಗೆ ಕಡಿಮೆ ಇಲ್ಲದೆ ಪಿಡಬ್ಲ್ಯೂಡಿ., ಇಲಾಖೆಯವರು ಆ ರಸ್ತೆಗಳನ್ನು ತಮ್ಮ ಆಡಳಿತಕ್ಕೆ ತೆಗೆದುಕೊಳ್ಳಬೇಕು ಎಂದು ಸೂಚಿಸುತ್ತೇನೆ. ಶ್ರೀನಿವಾಸಪುರ ಒಂದೇ ತಾಲ್ಲೂಕಿನಲ್ಲಿ ೧೫೫ ಮೈಲಿಗಳಷ್ಟು ಲಿಂಕ್ ರೋಡ್ ಇದೆ. ಮೂರು ವರ್ಷಗಳಾದರೂ ಕೂಡ ಈ ಕೆಲಸಗಳಿಗೆ ಮಂಜೂರಾತಿ ಕೊಟ್ಟಿಲ್ಲಿ ಮಾನ್ಯ ಸಚಿವರು ಈ ಕಡೆ ಗಮನಕೊಟ್ಟು ಮಾಡಿಸಬೇಕೆಂದು ಪ್ರಾರ್ಥನೆ ಮಾಡುತ್ತೇನೆ. ಕೆಲಸದ ವಿಚಾರದಲ್ಲಿ ಮೊನ್ನೆ ಅರಿಕೆಮಾಡಿಕೊಂಡ ವ್ಯವಸ್ಥಿತವಾದ ರೀತಿಯಲ್ಲಿ ಮಂಜೂರಾಗುತ್ತಾ ಇಲ್ಲ. ಹಿಂದೆ ಎಸ್ಟಿಮೇಟ್ ಆದ ಕೆಲಸಗಳೆಲ್ಲಾ ಹಾಗೇ ಹಣವಿಲ್ಲದೆ ಉಳಿದುಕೊಂಡಿದ್ದರೂ ಮುಂದೆ ಎಸ್ಟಿಮೇಟಾದ ಕೆಲಸಗಳಿಗೆ ಹಣ ಸ್ಯಾಂಕ್ಷನ್ ಆಗುತ್ತದೆ. ಇದು ಸರಿಯಾದದು ಅಲ್ಲ. ಎಂಎಸ್‌ಸಿಬಿ., ಯವರು ತಮ್ಮ ಹೊಸಪದ್ಧತಿ ಪ್ರಕಾರ ತಾಲ್ಲೂಕು ಬೋರ್ಡಿನ ವ್ಯಾಪ್ತಿ ಆಗಬೇಕಾದಂಥ ಇರಿಗೇಷನ್ ಪಂಪ್ಸ್ ವಿಚಾರದಲ್ಲಿ ಜನಗಳ ಅಭಿಪ್ರಾಯ ತೆಗೆದುಕೊಂಡು ಸಾಂಕ್ಷನ್ ಮಾಡುವ ಯೋಚನೆ ಮಾಡಿದಹಾಗೆ ಕಾಣುತ್ತದೆ. ಪಿಡಬ್ಲ್ಯೂಡಿ. ಯವರೂ ಕೂಡ ಇದೇ ರೀತಿ ಮಾಡಿದರೆ ಹಣ ಸದುಪಯೋಗವಾಗುತ್ತದೆ. ಅವ್ಯವಸ್ಥೆ ತಪ್ಪಿ ಎಲ್ಲೆಲ್ಲಿ ಕೆಲಸಗಳು ಆಗಬೇಕೋ ಅಲ್ಲಿ ಕೆಲಸಗಳು ಆಗುವುದಕ್ಕೆ ಸಾಧ್ಯವಾಗುತ್ತದೆ. ದಯವಿಟ್ಟು ಈ ಪದ್ಧತಿಯನ್ನು ಜಾರಿಗೆ ತರಬೇಕೆಂದು ಸೂಚನೆ ಮಾಡುತ್ತೇನೆ. ಮೈನರ್ ಇರಿಗೇಷನ್ ವಿಷಯ ಕೆಲವು ದಿವಸಗಳ ಹಿಂದೆ ಕೃಷ್ಣ, ಕಾವೇರಿ, ಗೋದಾವರಿ ನದಿಗಳ ವಿಷಯವನ್ನು ಇಲ್ಲಿ ಚರ್ಚಿಸಿದ್ದೇವೆ. ಕೋಲಾರ ಜಿಲ್ಲೆಯಲ್ಲಿ ಕೃಷ್ಣನೂ ಇಲ್ಲ, ಕಾವೇರಿನೂ ಇಲ್ಲ. ಅಲ್ಲಿ ಇರತಕ್ಕದ್ದು ಆಕಾಶದಿಂದ ಬರುವ ಮಳೆರಾಯನ ನೀರಿಗೆ ಕರೆಕಟ್ಟಿಕೊಂಡು ಜೀವನ ಮಾಡಬೇಕಾಗಿದೆ. ಕೋಲಾರ ಜಿಲ್ಲೆಯಲ್ಲಿ ಹೆಚ್ಚು ಕೆರೆಗಳನು ಕಟ್ಟಲು ಸಾಕಷ್ಟು ಅವಕಾಶ ಇವೆ. ಚಿಂತಾಮಣಿ, ಗೌರಿಬಿದನೂರುನಲ್ಲಿ ಹೆಚ್ಚಿನ ನೀರಿನ ಸೌಕರ್ಯ ಇದೆ. ಹೀಗೆ ಎಲ್ಲೆಲ್ಲಿ ಸಾಧ್ಯವೋ ಅಲ್ಲಿ ಕರೆಗಳನ್ನು ಕಟ್ಟಲು ಸಾಕಷ್ಟು ಹಣವನ್ನು ಕೊಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ. ಶ್ರೀನಿವಾಸಪುರ ತಾಲ್ಲೂಕಿನಲ್ಲಿ ನೀರಾವರಿ ಅಂದರೆ ನಮ್ಮ ತಾಲ್ಲೂಕಿನಲ್ಲಿ ಪ್ರದೇಶ ಬಹಳ ಕಡಿಮೆ ಬಾಗೇಪಲ್ಲಿ ತಾಲ್ಲೂಕಾದರು ಕೊಂಚ ಉತ್ತಮ. ಇಲ್ಲಿ ದೊಡ್ಡ ದೊಡ್ಡ ಕೆರೆ ಕಟ್ಟಲಿಕ್ಕೆ ಸಾಧ ವಿಲ್ಲ. ಸಣ್ಣ ಸಣ್ಣ ಕೆರೆಗಳನ್ನಿ ಕಟ್ಟಿದರೆ ಬಹಳ ಒಳ್ಳೆಯದು ರೈತರು ನೀರಾವರಿ ವ್ಯವಸಾಯ ಮಾಡುವುದಕ್ಕೆ ಬಹಳ ಆಶ ಪಡುತ್ತಾರೆ ರೈತಾಪಿ ವರ್ಗದ ಜನರೂ ಯಾವತ್ತೂ ಸಾಲಗಾರರುಗೇ ಇರುತ್ತಾರೆ. ಇದು ಹಿಂದಿನಿಂದಲೂ ನಡೆದು ಬಂದಿದೆ. ಸರ್ಕಾರದವರು ಲಿಫ್ಟ್ ಇರಿಗೇಷನ್ ಸ್ಕೀಂ ಎಂದು ಅದನ್ನು ಹೆಸರಿಗೆ ಮಾತ್ರ ಇಟ್ಟುಕೊಂಡಿದ್ದಾರೆ. ದಯವಿಟ್ಟು ಅದನ್ನು ಕಾರ್ಯಗತಗೊಳಿಸಬೇಕೆಂದು ಹೇಳುತ್ತೇನೆ. ನನ್ನ ಸಲಹೆ ಆದರೂ ಇಷ್ಟೇ, ತಮಗೆ ಬೇಕಾದಷ್ಟು ರಿಗ್ಸ್ ಸಪ್ಲೈ ಆಗಿದೆ. ಅವುಗಳ ಸಹಾಯದಿಂದ ಒಂದೇ ದಿವಸದಲ್ಲಿ ಒಂದು ಬಾವಿಯನ್ನು ತೆಗೆಯುವ ಶಕ್ತಿ ಇದೆ. ಮೈದಾನ ಪ್ರದೇಶದಲ್ಲಿ ಈ ರಿಗ್ಸ್‌ನಿಂದ ಬಾವಿಗಳನ್ನು ತೆಗೆಸಬಹುದು. ಸರ್ಕಾರದವರು ಹೀಗೆ ಬಾವಿಗಳನ್ನು ತೆಗೆಸಿ ೫೦ ಎಕರೆಗೆ ನೂರು ಎಕರೆಗೆ ನೀರನ್ನು ಸಪ್ಲೈ ಮಾಡಿ ಬೆಟರ್‌ಮೆಂಟ್ ಲೆವಿ ಹಾಕಲೀ ರೈತರು ಸಂತೋಷವಾಗಿ ಕೊಡುತ್ತಾರೆ ನೀರಿನ ಸೌಕರ್ಯ ಮಾಡುತ್ತೇವೆ ಎಂದು ಹೇಳಿ ರೈತರಿಗೆ ಸಾಲ ಕೊಟ್ಟು, ಪುನಃ ನೀವೇ ಮಾಡಿಕೊಳ್ಳಿ ಎಂದು ಹೇಳಿದರೆ ಕಷ್ಟವಾಗುತ್ತದೆ. ಈಗ ರಿಗ್ ಕೊಡುತ್ತಾ ಇದ್ದಾರೆ. ಬೋರ್ ಪಲ್ ಕೊಡುತ್ತಾ ಇದ್ದಾರೆ. ಆದರೆ ಅನೇಕ ಕಡೆ ಬೋರ ವಲ್ ಫೇಲ್ ಆಗಿದೆ.

(ಶ್ರೀ ಬಿ. ಎಲ್. ನಾರಾಯಣಸ್ವಾಮಿ)

ಕೆಲವು ಕಡೆ ಅಲ್ಪಸ್ವಲ್ಪ ನೀರು ಬರುತ್ತದೆ. ಕೆಲವು ಕಡೆ ನೀರು ಬರುವುದೇ ಇಲ್ಲ. ಅಂತಹ ಸಂದರ್ಭದಲ್ಲಿ ಭಾವಿ ಖರ್ಚನ್ನು ರೈತರೇ ವಹಿಸಬೇಕೆಂದು ಬಹಳ ಕಷ್ಟವಾಗುತ್ತದೆ. ರೈತರು ತಮಗೆ ಬರತಕ್ಕ ಅವಕಾಶಗಳನ್ನು ಉಪಯೋಗಿಸಿಕೊಳ್ಳಲು ಮುಂದೆ ಬರುತ್ತಾ ಇಲ್ಲ. ಕಲ್ಲುಕಟ್ಟಿಡದ ಬಾವಿ ಮಾಡಿಸಿದರೆ ಮಳೆಗಾಲದಲ್ಲಿ ನೀರು ಇರುತ್ತದೆ ಆಷ್ಟಾದರೆ ಸಾಕು ಎಂದು ಅದರ ಕಡೆ ಗಮನ ಕೊಡುತ್ತಿದ್ದಾರೆಯೋ ಹೊರತು ಬೋರ್ ವೆಲ್ ಕಡೆ ಗಮನ ಕೊಡುತ್ತಾ ಇಲ್ಲ. ಸರ್ಕಾರದ ಜೀಯಲಾಜಿಕಲ್ ಡಿಪಾರ್ಟ್‌ಮೆಂಟ್ ಇದೆ. ಎಲ್ಲೆಲ್ಲಿ ಸಿಕ್ಕುತ್ತದೆ ಎಂದು ಕಂಡುಹಿಡಿಯಬಹುದು. ನೀವೇ ಬಾವಿ ತೆಗೆಸಿ ಕಂದಾಯ ಹಾಕಿ ಬೆಟರ್‌ಮೆಂಟ್ ಟಾಕ್ಸ್ ಹಾಕಿದರೆ ರೈತರು ಸಂತೋಷವಾಗಿ ಕೊಡುತ್ತಾರೆ. ದಯವಿಟ್ಟು ಈ ವಿಷಯವನ್ನು ಪರಿಶೀಲನೆ ಮಾಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ. ಇನ್ನೊಂದು ಮುಖ್ಯ ವಿಚಾರ. ಕಾವೇರಿ ನದಿ ನೀರಿನ ಬಗ್ಗೆ ೧೯೭೪ರ ಅಗ್ರಿಮೆಂಟ್ ವಿಚಾರ ಬಹಳವಾಗಿ ಚರ್ಚೆಯಾಯಿತು. ೧೯೭೪ರಲ್ಲಿ ಆಗಿದ್ದ ಮದರಾಸು ಸರ್ಕಾರಕ್ಕೂ ಮೈಸೂರು ಸರ್ಕಾರಕ್ಕೂ ಪಾಲಾರ ನದಿ ನೀರನ್ನು ಉಪಯೋಗಿಸುವ ವಿಚಾರದಲ್ಲಿ ಚರ್ಚೆ ನಡೆದು ಆ ದಿನ ಅವರು ಒಂದು ತೀರ್ಮಾನಕ್ಕೆ ಬಂದಿದ್ದಾರೆ. ನಮ್ಮ ದೇಶದಲ್ಲಿಯೇ ಹುಟ್ಟಿ ನಮ್ಮ ದೇಶದಲ್ಲಿಯೇ ಹರಿಯತಕ್ಕ ಅನೇಕ ಉಪ ನದಿಗಳ ನೀರನ್ನು ಮದರಾಸು ಸರ್ಕಾರದವರು ಉಪಯೋಗಿಸಿಕೊಳ್ಳುತ್ತಿದ್ದಾರೆ. ಬಿಟ್ಟುಕೊಡುವುದೂ ಇಲ್ಲ. ಪಾಲಾರ ನದಿ ಪ್ರಶ್ನೆ ಕಷ್ಟವಾಗಿದೆ. ಈ ವಿಷಯ ಅನೇಕಸಾರಿ ಸರ್ಕಾರದ ಗಮನಕ್ಕೂ ಬಂದಿದೆ ದಯವಿಟ್ಟು ಈಗಲೂ ಕೂಡ ಈ ವಿಚಾರದಲ್ಲಿ ಪರಿಶೀಲನೆ ಮಾಡಿ ಸೌಕರ್ಯ ಒದಗಿಸಿಕೊಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ. ಇನ್ನು ವಿದ್ಯುಚ್ಛಕ್ತಿ ವಿಷಯ. ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಒಂದು ವಿಚಾರ ಮಾತ್ರ ಹೇಳುತ್ತೇನೆ. ವಿದ್ಯುಚ್ಛಕ್ತಿಯನ್ನು ಉಪಯೋಗಿಸುವವನಿಗೆ ಎಲ್ಲಾ ಬಾಬಿನ್‌ಲ್ಲಿಯೂ ತೆರಿಗೆ ಜಾಸ್ತಿ ಹಾಕುತ್ತಾ ಇದ್ದೀರಿ. ಇದರ ಬಗ್ಗೆ ಟಾರೀಫ್ ಕಮಿಷನ್ ವರದಿ ಕೊಟ್ಟಿದ್ದಾರೆ ಎಂದು ಹೇಳಿದರು ವರದಿ ಇನ್ನೂ ತಯಾರಾಗಿಲ್ಲ. ಯಾಕೆ ಆಗಿಲ್ಲ ಎನ್ನುವುದು ಆ ಪರಮೇಶ್ವರನೇ ಬಲ್ಲ. ಪರರಾಷ್ಟ್ರದಲ್ಲಿ ಕಂದಾಯ ಹಾಕಿದ್ದಾರೆ ಅಲ್ಲಿ ತೆರಿಗೆ ಹೆಚ್ಚಾಗಿ ವಸೂಲು ಮಾಡುತ್ತಾರೆ ನಮ್ಮ ದೇಶದಲ್ಲಿ ಬಹಳ ಕಡಿಮೆ ಎಂದು ಎಂ.ಎಸ್.ಸಿ.ಬಿ., ಯವರು ಅಂಕಿ ಅಂಶಗಳನ್ನು ಒದಗಿಸಿದ್ದಾರೆ. ಆದರೆ ನಾನು ಹೇಳುತ್ತೇನೆ ಮೊದಲು ಹೆಚ್ಚು ಇತ್ತು ಅದನ್ನು ಈಗ ಕಡಿಮೆ ಮಾಡಬೇಕಾಗಿದೆ. ಬರತಕ್ಕ ವರಮಾನ ಪೂರ್ತಿಯಾಗಿ ಬರುತ್ತಾ ಇಲ್ಲ. ಮನೆಯಲ್ಲಿ ಕಳ್ಳರ ಕಾಟ ಜಾಸ್ತಿಯಾಗಿದೆ. ಮೊನ್ನೆ ನಡೆದ ಬೆಂಕಿ ಪ್ರಕರಣ ತಮಗೆ ಗೊತ್ತಿದೆ ನಮಗೆ ಎಲ್ಲಾ ವಿಷಯಗಳು ಗೊತ್ತಿದೆ, ಇಲಾಖೆಯವರು ಏನೋ ಅಂಕಿ ಅಂಶಗಳನ್ನು ಒದಗಿಸಿದ್ದಾರೆ. ಆದರ ಬರತಕ್ಕ ಹಣವನ್ನು ಪೋಲಾಗದ ರೀತಿಯಲ್ಲಿ ಜಮಾ ಮಾಡಿಕೊಂಡಲ್ಲಿ ಹೆಚ್ಚಿನ ತೆರಿಗೆಯನ್ನು ಹಾಕುವುದಕ್ಕೆ ಅವಕಾಶ ಇರುವುದಿಲ್ಲ. ದಯವಿಟ್ಟು ಇನ್ನು ಹೆಚ್ಚಿನ ತೆರಿಗೆಯನ್ನು ಹಾಕಬಾರದೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಚೇರ್ಮನ್‌ರು ಬಹಳ ಅನುಭವವುಳ್ಳವರು, ಒಳ್ಳೆಯವರು, ದಕ್ಷತೆಯಿಂದ ಕೆಲಸ ಮಾಡಬೇಕೆಂಬ ಆಸೆ ಅವರಿಗೆ ಇದೆ. ಆದರೆ ಈ ರೀತಿ ಕಳ್ಳತನ ಹೆಚ್ಚಾಗುತ್ತಿರುವುದರಿಂದ ಈ ಕಷ್ಟ ಪರಿಸ್ಥಿತಿ ಬಂದಿದೆ! ಚೀಫ್ ಇಂಜಿನಿಯರ್ ಉತ್ತಮರು. ಅವರು ತಾನೆ ಏನು ಮಾಡುತ್ತಾರೆ ಪಾಪ? ಪ್ರಜಾಪ್ರಭುತ್ವ ಇಲ್ಲಿ ಜಾರಿಗೆ ಬಂದಿದೆ. ಇದನ್ನು ಹೋಗಲಾಡಿಸಿ ಸ್ವಲ್ಪಕಾಲ ಡಿಕ್ಟೇಟರ್ಸ್ ಆಡಳಿತ ಬಂದರೆ ಇದೆಲ್ಲಾ ಸರಿಹೋಗುತ್ತದೆ ಎಂದು ಮನವಿ ಮಾಡಿಕೊಳ್ಳುತ್ತೇನೆ.

ರೂರಲ್ ಎಕೆಕ್ಟ್ರಿಫಿಕೇಷನ್ ಕಾರ್ಪೊರೇಷನ್‌ನಿಂದ ನಮ್ಮ ಸಂಸ್ಥಾನಕ್ಕೆ ಅವಶ್ಯಕ ಇದ್ದಷ್ಟು ಸಹಾಯ ಪಡೆಯಬೇಕೆಂದು ಪ್ರಾರ್ಥಿಸುತ್ತೇನೆ.

ಕಾಳಿ ನದಿ ಯೋಜನೆಗೆ ಕೇಂದ್ರ ಸರ್ಕಾರದಿಂದ ಇನ್ನೂ ಕ್ಲಿಯರೆನ್ಸ್ ದೊರೆತಿಲ್ಲ. ಈ ಬಗ್ಗೆ ಹೆಚ್ಚಿನ ಮುತುವರ್ಜಿ ವಹಿಸಿ ಈ ಸೌಕರ್ಯ ಪಡೆದುಕೊಳ್ಳಬೇಕೆಂದು ಸೂಚನೆ ಮಾಡುತ್ತೇನೆ.

ಶ್ರೀಮತಿ ನಾಗಮ್ಮ (ಕಲ್ಕುಲ): — ಮಾನ್ಯ ಅಧ್ಯಕ್ಷರೇ ಈ ದಿವಸ ಪಿ. ಡಬ್ಲ್ಯೂ. ಡಿ. ಡಿಮ್ಯಾಂಡನ್ನು ಸಂಪೂರ್ಣವಾಗಿ ಆನಂದದಿಂದ ಸ್ವಾಗತಿಸುತ್ತೇನೆ ಪಿ.ಡಬ್ಲ್ಯೂ.ಡಿ. ಇಲಾಖೆ ಇನ್ನೂ ಚೆನ್ನಾಗಿ ಕೆಲಸ ಮಾಡಬೇಕೆಂದು ಸಲಹೆ ಮಾಡುತ್ತೇನೆ. ನಮ್ಮ ರೈತರ ಹಿತ ದೃಷ್ಟಿಯಲ್ಲಿ ಇನ್ನೂ ಮಾಡಬೇಕಾದ್ದು ಕೆಲಸ ಬೇಕಾದಷ್ಟು ಇದೆ. ಅನೇಕ ಕಡೆ ದೊಡ್ಡ ದೊಡ್ಡ ರಸ್ತೆಗಳು ಇನ್ನೂ ಆಗಿಲ್ಲ, ಕೆರೆಗಳೂ ಆಗಿಲ್ಲ ಅವುಗಳನ್ನು ಇನ್ನೂ ಹೆಚ್ಚಿನ ವೇಗದಲ್ಲಿ ಮಾಡಬೇಕೆಂದು ಸರ್ಕಾರದವರನ್ನು ಒತ್ತಾಯ ಪಡಿಸುತ್ತೇನೆ.

ರಾಯಚೂರು ಜಿಲ್ಲೆ ಬಹಳ ಹಿಂದುಳಿದ ಭಾಗ, ಅಲ್ಲಿಗೆ ಇತ್ತೀಚೆಗೆ ನೀರು ಬಂದಿದೆ ಅಂತ ಹೇಳಿ ಆ ಪ್ರದೇಶ ಮುಂದುವರಿದದ್ದು ಅಂತ ಎಲ್ಲರೂ ತೋರಿಸುತ್ತಾ ಇರುವ ಹಾಗೆ ಕಾಣುತ್ತದೆ. ಆದರೆ ಅಲ್ಲಿ

ಪಿ.ಡಬ್ಲ್ಯೂ.ಡಿ ಕ್ವಾರ್ಟರ್ಸ್ ಒಂದೂ ಇಲ್ಲ. ಯಾರಾದರೂ ಒಬ್ಬರು ಆಫೀಸರು ಅಲ್ಲಿಗೆ ವರ್ಗವಾಗಿ ಬಂದರೆ ಅವರು ಇರುವದಕ್ಕೆ ಒಂದು ರೂಮು ಇಲ್ಲ, ಇದನ್ನು ನೋಡಿದರೆ ಇದು ನಮ್ಮ ಗೌರವಕ್ಕೆ ಕಡಿಮೆಯೇನೋ ಎಂದು ಅನಿಸುತ್ತದೆ. ಆದ್ದರಿಂದ ಮಾನ್ಯ ಪಿ.ಡಬ್ಲ್ಯೂ.ಡಿ. ಮಿನಿಸ್ಟರವರಲ್ಲಿ ಅಲ್ಲಿಗೆ ಬೇಕಾದ ಕ್ವಾರ್ಟರ್ಸ್ ಗಳನ್ನು ಕಟ್ಟಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಪಿ.ಡಬ್ಲ್ಯೂ.ಡಿ ಇಲಾಖೆಯವರು ಸಾಕಾದಷ್ಟು ಕೆಲಸ ಮಾಡಿದ್ದಾರೆ. ಇನ್ನೂ ಆಗಬೇಕಾದ್ದು ಬಹಳ ವಾಗಿದೆಎಂದು ಮನವಿ ಮಾಡಿಕೊಳ್ಳುತ್ತೇನೆ. ನೀರಾವರಿ ವ್ಯವಸಾಯವನ್ನು ತೆಗೆದುಕೊಂಡರೆ ರಾಯಚೂರು ಜಿಲ್ಲೆಯ ಮೂರು ತಾಲ್ಲೂಕುಗಳಿಗೆ ನೀರು ಬಂದಿದೆ, ಇನ್ನೂ ೬ ತಾಲ್ಲೂಕುಗಳಿಗೆ ನೀರು ಕೊಡಬೇಕು; ಸರ್ವೆ ಮಾಡಿದ್ದಾರೆ, ಇದುವರೆಗೆ ಎರಡೂವರೆ–ಮೂರು ಲಕ್ಷ ಎಕರೆಗೆ ನೀರು ಬಂದಿದೆ, ಇನ್ನೂ ಮೂರು ಲಕ್ಷ ಎಕರೆಗೆ ಕೊಡಬೇಕಾಗಿದೆ. ಕೆಂಪು ಭೂಮಿ ಇದ್ದಲ್ಲಿ ನೀರು ಕೊಡಬೇಕೆಂದು ನೀರಾವರಿ ಇಲಾಖೆಯವರಿಗೆ ಹೇಳುತ್ತೇನೆ. ಲೋಕಲೈಸೇಷನ್ ಆಗಿ ಇಷ್ಟೋ ದಿವಸ ಆಯಿತು. ಸಂಪೂರ್ಣವಾಗಿ ನೀರನ್ನು ನಮ್ಮ ರೈತರು ಇನ್ನೂ ತೆಗೆದುಕೊಂಡಿಲ್ಲ. ಹೀಗಾಗಿ ಒಬ್ಬರೂ ಹೊಟ್ಟೆತುಂಬಾ ಊಟಮಾಡಿದರೆ, ಒಬ್ಬರು ಉಪವಾಸ ಮಲಗುತ್ತಾರೆ. ಪರಿಸ್ಥಿತಿ ಹೀಗೆ ಇದೆ. ಲೋಕಲೈಸೇಷನ್ ಮಾಡಿದ್ದು ಒಂದು ರೀತಿಯಲ್ಲಿ ತಪ್ಪು ಅಂದರೂ ತಪ್ಪಾಗಲಿಕ್ಕಿಲ್ಲ. ಏಕೆಂದರೆ ಅಚ್ಚುಕಟ್ಟು ಜಾಸ್ತಿಯಾಗಿ ನೀರು ಕಡಿಮೆ ಆಯಿತು ಅಂತ ತೋರಿಸಿ ಕೊಟ್ಟು, ಕೆಳಗೆ ಇದ್ದವನಿಗೆ ನೀರು ಇಲ್ಲದಂತೆ ಮಾಡುತ್ತಾರೆ. ಸಾವಿರ ಎಕರೆ ಅಚ್ಚುಕಟ್ಟು ಇದ್ದರೆ ಅವರೇಜ್ ೫೦-೬೦ ಎಕರೆ ಅಂತ ಲೆಕ್ಕ ಹಾಕುತ್ತಾರೆ. ಇದು ತಪ್ಪು ಅಂತ ಪದೇ ಪದೇ ಹೇಳಿದ್ದೇನೆ. ಇದು ನಿಜವೇ ಅಲ್ಲವೇ ಎಂಬುದನ್ನು ಸಂಬಂಧಪಟ್ಟ ಅಧಿಕಾರಿಗಳು ಮತ್ತು ಮಾನ್ಯ ಮಂತ್ರಿಗಳು ಪರಿಶೀಲನ ಮಾಡಿಸಿ ತಿಳಿದುಕೊಳ್ಳಬೇಕು.

ದೇವದುರ್ಗ, ರಾಯಚೂರು, ಲಿಂಗಸೂಗೂರು ಇವೆಲ್ಲಾ ನೀರು ಬರುವ ಪ್ರದೇಶದಲ್ಲಿ ಇವೆ, ಎಂದು ಮೊದಲೇ ಸರ್ವೆ ಮಾಡಿ ಆಳತೆ ಮಾಡಿದ್ದನ್ನು ಈಗಲೂ ತೋರಿಸುತ್ತೇನೆ. ಸರ್ವೆಯನ್ನು ಹಿಂದೆ ಹೈದರಾಬಾದು ಸರ್ಕಾರದವರು ಮಾಡಿದ್ದರು. ಚೆನ್ನಬಸಪ್ಪನವರು ನಮ್ಮ ರೈತರಿಗೆ ಮೋಸಮಾಡಿ ಅದನ್ನು ಆಂಧ್ರಕ್ಕೆ ಬಿಟ್ಟುಕೊಟ್ಟಿದ್ದಾರೆ. ಕಾಗದ ಪತ್ರಗಳನ್ನು ಉಲ್ಟಾಪಲ್ಟಿ ಮಾಡಿದ್ದಾರೆ. ನಮಗೆ ಏನೂ ನೀರು ಸಿಕ್ಕದ ಹಾಗೆ ಮಾಡಿದ್ದಾರೆ. ಅದರ ಸಲುವಾಗಿ ಬಹಳ ತೊಂದರೆಯಾಗಿದೆ. ಆದಷ್ಟೂ ನಮ್ಮ ಕೆಂಪು ಭೂಮಿಗೆ ನೀರನ್ನು ಒದಗಿಸಿ ಕೊಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ. ಲೋಕಲೈಜೇಷನ್ ಮಾಡಿದ ಮೇಲೆ ಯಾವ ರೈತರೇ ಆಗಲಿ ಒಬ್ಬೊಬ್ಬರಿಗೆ ಎಷ್ಟು ನೀರು ಕೊಡಬೇಕೋ ಅಷ್ಟು ಕೊಡಬೇಕೆಂದು ಹೇಳುತ್ತೇನೆ ಎಲೆಕ್ಟ್ರಿಟಿ ವಿಷಯದಲ್ಲಿ ಇನ್ನೂ ಮಾಡಬೇಕಾದ ಕೆಲಸ ಬೇಕಾದಷ್ಟು ಇದೆ ಎಂದು ಮಾನ್ಯ ಮಂತ್ರಿಗಳಿಗೆ ಸಲಹೆ ಮಾಡಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ):—ಅಧ್ಯಕ್ಷರೇ, ಲೋಕೋಪಯೋಗಿ ಇಲಾಖೆಯ ಬೇಡಿಕೆಗಳು ನಮ್ಮ ಡಿಮ್ಯಾಂಡುಗಳ ಪೈಕಿ ಎಲ್ಲಾ ಬೇಡಿಕೆಗಳಿಗಿಂತಲೂ ಅತಿ ಹೆಚ್ಚಿನ ಹಣವನ್ನು ಕೇಳತಕ್ಕ ಬೇಡಿಕೆ. ಸುಮಾರು ೧೦೦ ಕೋಟಿ ರೂಪಾಯಿನ ಬೇಡಿಕೆಯನ್ನು ಇವತ್ತು ಈ ಸಭೆಯ ಮುಂದೆ ಇಟ್ಟಿದ್ದಾರೆ. ಈ ಇಲಾಖೆಗೆ ಅನೇಕರು ಅನೇಕ ರೀತಿಯ ಹೆಸರುಗಳನ್ನು ಇಟ್ಟಿದ್ದಾರೆ. ಕೆಲವರು ಇದನ್ನು ಪಬ್ಲಿಕ್ ವೇಸ್ಟ್ ಡಿಪಾರ್ಟ್‌ಮೆಂಟು ಅಂತ ಕರೆಯುತ್ತಾರೆ. ಕೆಲವರು ಇದನ್ನು "ಪಬ್ಲಿಕ್ ಎನಿಮಿ ನಂಬರ್ ಒನ್" ಅಂತ ಅನ್ನುತಾರೆ; ಇದನ್ನು ಕೆಲವರು ಪಬ್ಲಿಕ್ ಎನಿಮಿ ನಂಬರ್ ಒನ್ ಅಲ್ಲ ನಂಬರ್ ೨ ಅಂತ ಹೇಳುತ್ತಾರೆ. ಕನ್ನಡದಲ್ಲಿ ಇದಕ್ಕೆ ಭಾಷಾಂತರ ಎಂದರೆ ಲೋಕೋಪಯೋಗಿ ಇಲಾಖೆ, ಲೋಕಕ್ಕೆ ನಿಜವಾಗಿಯೂ ಉಪಯೋಗ ಮಾಡತಕ್ಕ ಇಲಾಖೆ. ಲೋಕಕ್ಕೆ ಉಪಕಾರ ಮಾಡತಕ್ಕ ಇಲಾಖೆ. ಇವತ್ತು ಇದು ಪಬ್ಲಿಕ್ ಎನಮಿ ನಂಬರ್ ೧ ಆಗಿದೆ. ಯಾವ ಒಳ್ಳೆಯ ಉದ್ದೇಶದಿಂದ ನೂರು ಕೋಟಿ ರೂಪಾಯಿಗಳನ್ನು ಕೊಡುತ್ತಾ ಇದ್ದೇವೆಯೋ ಅದನ್ನು ದುರುಪಯೋಗ ಮಾಡತಕ್ಕ ಅನಿಷ್ಟಕಾರಕ ಕೆಲಸ ಮಾಡಿದ್ದರಿಂದ ಇವತ್ತು ದೇಶದಲ್ಲಿ ಇದನ್ನು ಪಬ್ಲಿಕ್ ವೇಸ್ಟ್ ಡಿಪಾರ್ಟ್‌ಮೆಂಟ್ ಅಂತ ಕರೆಯುವ ಮಟ್ಟಕ್ಕೆ ಬಂದಿದೆ. ಈ ಇಲಾಖೆಯಲ್ಲಿ ಖರ್ಚು ಮಾಡಿರತಕ್ಕ ಹಣ ಸರಿಯಾಗಿ ಉಪಯೋಗವಾಗಿದ್ದ ಪಕ್ಷದಲ್ಲಿ ಇವತ್ತು ದೇಶದಲ್ಲಿ ಭೂಸ್ವರ್ಗವಾಗಿ ನಿರ್ಮಾಣವಾಗಬೇಕಾಗಿತ್ತು. ಆದಕ್ಕೆ ಬದಲಾಗಿ ನರಕ ಈ ಇಲಾಖೆಯಿಂದ ನಿರ್ಮಾಣ-

3-30 P. M.

ವಾಗಿದೆ. ಹಣ ಎಲ್ಲಿ ಹೋಯಿತು ? ನೂರು ಕೋಟಿ ರೂಪಾಯಿ ಈ ವರ್ಷ ಕೊಡುತ್ತಿದ್ದೇವೆ, ಪ್ರತಿ ವರ್ಷ ೭೦ ಕೋಟಿ ೮೦ ಕೋಟಿ ಹೀಗೆ ಹೇರಳವಾಗಿ ಹಣ ಕೊಟ್ಟಿದ್ದೇವೆ. ಇಷ್ಟು ಕೊಟ್ಟಿರುವಾಗ ಆದರಿಂದ ಮಾಡಿರುವ ಆಸ್ತಿ ಎಷ್ಟಿದೆ? ಅದರಿಂದ ಪ್ರತಿಫಲವೆಷ್ಟು ಬರುತ್ತಿದೆ ಎಂಬುದನ್ನು ಯೋಚನೆ ಮಾಡಬೇಕು. ಲೋಕೋಪಯೋಗಿ ಇಲಾಖೆಯ ಆಸ್ತಿಪಾಸ್ತಿ ನಿರೂಪಣೆ ಮಾಡಿರುವ ಪ್ರಕಾರ ಕ್ಯಾಪಿಟಲ್ ಇನ್‌ವೆಸ್ಟ್-

(ಶ್ರೀ ಎಸ್. ಶಿವಪ್ಪ)

ಮೆಂಟ್ ಅನ್ ಇರಿಗೇಷನ್ ಪ್ರಾಜೆಕ್ಟ್ಸ ೧೮೭೪ ಕೋಟಿ, ನಾನ್ ಕಮರ್ಷಿಯಲ್ ೧೧೬ ಕೋಟಿ, ಹರಕು ಮುರಕು ರಸ್ತೆ ಕಟ್ಟಡ ಮುಂತಾದ್ದು ಸೇರಿ ಲೋಕೋಪಯೋಗಿ ಇಲಾಖೆಯದು ೯೯ ಕೋಟಿ ಅಂದರೆ ಸುಮಾರು ೪೨೮ ಕೋಟಿ ರೂಪಾಯಿಗಳ ಆಸ್ತಿ ಇದೆ ಎಂದು ಹೇಳುತ್ತಿದೆ. ಇದರಲ್ಲಿ ಅರ್ಧ ಆಗಿರುವ ಯೋಜನೆಗಳು, ಸುಣ್ಣ ಹೊಡೆಯದೆ ಬಿರುಕಲು ಬಿಟ್ಟಿರುವ ಕಟ್ಟಡಗಳು ಮತ್ತು ರಸ್ತೆಗಳು ಮುಂತಾದ್ದೆಲ್ಲಾ ಸೇರಿ ಇಷ್ಟು ಆಸ್ತಿ ಮಾಡಿದ್ದೇವೆಂದು ಹೇಳುವರು. ಮೈನರ್, ಮೇಜರ್ ಮತ್ತು ಮೀಡಿಯಂ ಇರಿಗೇಷನ್ ಕಟ್ಟಡಗಳು, ರಸ್ತೆಗಳು, ಎದ್ಯುಚ್ಛಕ್ತಿ ಯೋಜನೆಗಳು ಮುಂತಾದುವೆಲ್ಲಾ ಈ ಆಸ್ತಿಯಲ್ಲಿ ಸೇರಿವೆ. ಸರ್ಕಾರದವರು ಇಷ್ಟು ಹಣ ಖರ್ಚು ಮಾಡುತ್ತಿದ್ದಾರೆ, ಇದರಲ್ಲಿ ಎಷ್ಟು ಭಾಗ ಕೆಲಸಕ್ಕೆ ವಿನಿಯೋಗವಾಗಿದೆ ಎಂಬುದನ್ನು ನಾನೀಗ ಪ್ರಶ್ನೆಮಾಡಬೇಕಾಗಿದೆ. ಇಂದು ಒಂದು ಕೋಟಿ ರೂಪಾಯಿ ಅಂದಾಜು ಮಾಡಿದರೆ ಅದರಲ್ಲಿ ಕಂಟ್ರಾಕ್ಟರುಗಳಿಗೆ ಹೋಗುವುದು, ಇಂಜಿನಿಯರುಗಳು ಲಂಚ ತೆಗೆದುಕೊಳ್ಳುವುದು ವಗೈರೆ ಎಲ್ಲಾ ಹೋಗಿ ಮಣ್ಣಿಗೆ ಬೀಳುವುದನ್ನು ಲೆಕ್ಕ ಹಾಕಿದರೆ ರೂಪಾಯಿಗೆ ನಾಲ್ಕಾಣೆ ಆದರೆ ಹೆಚ್ಚು. ಸೇತುವೆ ಕಟ್ಟಿದರೆ ೩ ತಿಂಗಳಲ್ಲಿ ಮುರಿದು ಬೀಳುವುದು, ಬಂಗಲೆ ಕಟ್ಟಿದರೆ ತಿಂಗಳು-ಎರಡು ತಿಂಗಳಲ್ಲಿ ಬಿದ್ದು ಹೋಗುವುದು, ಅನೇಕ ಕಟ್ಟಡಗಳಲ್ಲಿ ಬಿರುಕು ಬಿಟ್ಟಿದೆ, ಮಳೆ ಬಂದಾಗ ಕೊಡೆ ಹಿಡಿಯಬೇಕಾದ ಪರಿಸ್ಥಿತಿ ಕೆಲವು ಕಟ್ಟಡಗಳಲ್ಲಿದೆ. ಆಸ್ಪತ್ರೆಗೆ ಹೋದರೆ ಮಳೆ ಬಂದಾಗ ಒಳಗಡೆ ಇದ್ದರೂ ಕೊಡೆ ಹಿಡಿಯಬೇಕು. ಇಂಥ ಕಟ್ಟಡ ವಗೈರೆ ಸೇರಿ ೯೯ ಕೋಟಿ ರೂಪಾಯಿ ಆಸ್ತಿ ಇದೆ ಎಂದು ಹೇಳುವರು.

ಈ ರೀತಿ ಅಪವ್ಯಯ ನಡೆಯುವುದು ಸರಿಯೇ? ಹಣವನ್ನು ಸರಿಯಾಗಿ ಖರ್ಚುಮಾಡುವ ಶಕ್ತಿ ರಾಜ್ಯದಲ್ಲಿದೆಯೇ ಎಂದು ಪ್ರಶ್ನೆ ಮಾಡಬೇಕಾಗಿದೆ. ಇಷ್ಟು ಖರ್ಚು ಮಾಡಿದರೂ ಯಾವ ಪ್ರಾಜೆಕ್ಟೂ ಪೂರ್ಣವಾಗಿಲ್ಲ. ಮೈಸೂರು ದೇಶವನ್ನು ಟೂರಿಸ್ಟ್ ಪ್ಯಾರಡೈಸ್ ಎಂದು ಹೇಳುವರು. ಈ ದೇಶದಲ್ಲಿ ಪ್ರವಾಸಿಗಳಿಗೆ ಒಳ್ಳೆಯ ರಸ್ತೆಯಿದೆಯೇ? ಅನೇಕರು ಇದನ್ನು ನೋಡಿ ಬೈದಿದ್ದಾರೆ, ಕಾರು ಸರಿಯಾಗಿ ಹೋಗುವುದಕ್ಕೇ ಕೆಲವು ಕಡೆ ಯೋಗ್ಯವಾದ ರಸ್ತೆಯಿಲ್ಲ. ಬೇಲೂರು, ಶ್ರವಣಬೆಳಗೊಳ ಮುಂತಾದ ಸ್ಥಳಗಳನ್ನು ನೋಡುವುದಕ್ಕೇ ಹೋಗಬಾರದು ಎಂದು ಅಲ್ಲಿಗೆ ಹೋಗಿ ಬಂದವರು ಹೇಳುತ್ತಾರೆ. ಅಧ್ಯಯ ರಸ್ತೆಗಳ ಪರಿಸ್ಥಿತಿ ಹಾಗಿದೆ. ೬೫೦೦ ಮೈಲಿಗಳಷ್ಟು ಒಳ್ಳೆಯ ರಸ್ತೆ ನಮ್ಮ ರಾಜ್ಯದಲ್ಲಿ ಇದೆ ಎಂದು ಯಾರೋ ಹೇಳಿದರು. ಮಿರ್ಜಾರವರು ಹಿಂದೆ ದಿವಾನರಾಗಿದ್ದರು, ಅವರ ಕಾಲದಲ್ಲಿ ದೇಶದ ಆದಾಯ ಕೇವಲ ಒಂದೆರಡು ಕೋಟಿ ಮಾತ್ರ ಇತ್ತು. ಆದರೆ ಅವರು ಮಾಡಿಸಿರುವ ಸಿಮೆಂಟ್ ರಸ್ತೆಗಳು ಈಗಲೂ ಇವೆ. ಬೆಂಗಳೂರಿನಿಂದ ನಾಗಮಂಗಲದವರೆಗೆ ಮಾಡಿಸಿರುವ ಸಿಮೆಂಟ್ ಕಾಂಕ್ರೀಟ್ ರಸ್ತೆ ಈಗಲೂ ಕೂಡ ಚೆನ್ನಾಗಿದೆ. ಅದೇ ನೀವು ಮಾಡಿಸಿರುವ ರಸ್ತೆಗಳು ಅಲ್ಲಲ್ಲಿ ಕೊರಕಲು ಬಿದ್ದಿವೆ. ಒಳ್ಳೆಯ ರಸ್ತೆಗಳನ್ನು ಹಿಂದಿನವರು ಮಾಡಿಸಿದಂತೆ ಮಾಡಿಸುವ ಶಕ್ತಿ ನಿಮಗಿಲ್ಲ.

ಇನ್ನು ನೀರಾವರಿ ಯೋಜನೆಗಳಿಗೆ ಬರುತ್ತೇನೆ. ಕಾವೇರಿ ನೀರನ್ನು ಉಪಯೋಗಿಸಿಕೊಳ್ಳಲು ಇರುವ ಅವಧಿ ೧೯೨೪ಕ್ಕೆ ಮುಗಿಯುವುದು. ಅಷ್ಟರೊಳಗೆ ನಮಗೆ ಅವಕಾಶ ವಿರುವಷ್ಟು ನೀರನ್ನು ಉಪಯೋಗಿಸಬೇಕು. ನಮ್ಮ ದೇಶದಲ್ಲಿ ಕಾಂಗ್ರೆಸ್ ಆಡಳಿತ ಬಂದು ೨೨ ವರ್ಷವಾಯ್ತು. ಅಲ್ಲಿಂದೀಚೆಗೆ ಕಾವೇರಿಗೆ ಸಂಬಂಧಪಟ್ಟ ಯಾವ ಯೋಜನೆಯನ್ನೂ ಪೂರ್ತಿಯಾಗಿ ಮಾಡಿಲ್ಲ. ಇನ್ನು ಕೇವಲ ನಾಲ್ಕು ವರ್ಷ ಅವಕಾಶವಿದೆ, ವಿಶ್ವಪ್ರಯತ್ನ ಮಾಡುತ್ತಿದ್ದಾರೆ. ತಮ್ಮ ನೀರನ್ನು ಉಪಯೋಗಿಸಬಾರದೆಂದು ಮದ್ರಾಸು ಸರಕಾರದವರಾಗಲೇ ಅರ್ಜಿ ಹಾಕಿದ್ದಾರೆ. ಕಪಿನಿ ಯೋಜನೆ ವಿಚಾರದಲ್ಲಿ ಕೇರಳದವರು ಅದನ್ನು ಮಾಡಬಾರದೆಂದು ಹೇಳುತ್ತಿದ್ದಾರೆ. ಇಷ್ಟು ತಕರಾರುಗಳ ಮಧ್ಯೆ ಯೋಜನೆಗಳನ್ನು ಮಾಡುವ ಶಕ್ತಿ ನಿಮಗಿದೆಯೇ? ಇಂದು ಮೈಸೂರಿಗೆ ದೊಡ್ಡ ಹೊಡೆತ ಬೀಳುವ ಪರಿಸ್ಥಿತಿಯಿದೆ. ಮೊನ್ನೆ ದೆಹಲಿಗೆ ನಾನು ಹೋಗಿದ್ದಾಗ ಬೇರೆ ಕೆಲಸಕ್ಕೆ ಹೋಗಿದ್ದರೂ ಕೂಡ ಕಾವೇರಿ ನೀರಿನ ವಿಚಾರವನ್ನು ಪ್ರಧಾನಿಗಳ ಹತ್ತಿರ ಪ್ರಸ್ತಾಪ ಮಾಡಿದೆ. ಹಂಚಿಕೆಯಲ್ಲಿ ಆಗಿರುವ ಅನ್ಯಾಯದ ಬಗ್ಗೆ ಕೇಂದ್ರದ ಧೋರಣೆಯೇನೆಂದು ಕೇಳಿದೆ. ನಮ್ಮ ರಾಜ್ಯಕ್ಕೆ ೨೪ರ ಒಪ್ಪಂದದ ಪ್ರಕಾರ ಮೂರು ರೀತಿಯಲ್ಲಿ ಅನ್ಯಾಯವಾಗಿದೆ, ಒಪ್ಪಂದವಾದಾಗ ಮದ್ರಾಸು ಪ್ರಬಲವಾದ ರಾಜ್ಯವಾಗಿತ್ತು, ಅದು ಬ್ರಿಟೀಷರ ಆಳ್ವಿಕೆಯಲ್ಲಿತ್ತು. ಅದು ಆಗ ಪ್ರಿನ್ಸ್‌ಲಿಸ್ಟೇಟ್ ಆಗಿತ್ತು. ಆದುದರಿಂದ ಅವರಿಗೆ ಅನುಕೂಲವಾಗಿ ಒಪ್ಪಂದವಾಯ್ತು, ನಮಗೆ ಅನ್ಯಾಯಮಾಡಿ ಕೈಹಿಡಿದು ರಾಜಹಾಕಿಸಿದರು. ಹೀಗಿರುವಾಗ ಸರಿಯಾದ ಒಪ್ಪಂದವೆಲ್ಲಾಗಿದೆ? ಆದ್ದರಿಂದ ಮೈಸೂರಿಗೆ ಸಹಾಯವಾಗುವುದಿಲ್ಲ ಎಂದು ಐದು ನಿಮಿಷದಲ್ಲಿ ಮುಖ್ಯವಾದ ಲೋಪದೋಷವನ್ನು ಹೇಳಿದೆ. ೨೪ರ ಒಪ್ಪಂದದ ಪ್ರಕಾರ ಮೈಸೂರು ೪೫ ಟಿ ಎಂ ಸಿ ಎಫ್‌ಟಿ ಉಪಯೋಗಿಸಿಕೊಳ್ಳಬಹುದು ಎಂದು ಒಂದು ಪ್ಯಾರಾದಲ್ಲಿದೆ, ಇನ್ನೊಂದು ಪ್ಯಾರಾದಲ್ಲಿ ಕೃಷ್ಣರಾಜಸಾಗರದಿಂದ ಇಷ್ಟು ನೀರು ಬಿಡಬೇಕು ಎಂದಿದೆ. ಒಂದಕ್ಕೊಂದು ಸಮಂಜಸವಾಗಿಲ್ಲ. ಒಂದು ಕಡೆ ೪೫ ಟಿ ಎಂ ಸಿ ಎಫ್‌ಟಿ ಉಪಯೋಗಿಸಿ ಕೊಳ್ಳಬಹುದೆಂದು ಹೇಳಿದರೆ

ಇನ್ನೊಂದು ಕಡೆ ಅದನ್ನು ಉಪಯೋಗಿಸಿಕೊಳ್ಳಲು ಸಾಧ್ಯವಿಲ್ಲದ ಪರಿಸ್ಥಿತಿದೆ. ಇಂಥ ಒಪ್ಪಂದವಾಗಿದೆ. ಹೀಗಿರುವಾಗ ಅದನ್ನು ಕಟ್ಟುನಿಟ್ಟಾಗಿ ಆಚರಣೆಗೆ ತನ್ನಿ ಎಂದು ಹೇಳಲು ಕೇಂದ್ರ ಸರಕಾರಕ್ಕೆ ಅಧಿಕಾರ ವಿದೆಯೇ ಎಂದು ಪ್ರಧಾನಿಗಳನ್ನು ಕೇಳಿದೆ. ಮತ್ತೊಂದು ಮೈಸೂರು ಕೃಷ್ಣ ನದಿ ನೀರಿನ ಹಂಚಿಕೆ ಬಗ್ಗೆ ಆರು ವರ್ಷದಿಂದ ಪ್ರೊಟೆಸ್ಟ್ ಮಾಡಿದ್ದೆ, ನಾಗಾರ್ಜುನಸಾಗರ ಕಟ್ಟಬಾರದು ಎಂದು ಪ್ರತಿಭಟಿಸಿದ್ದೆ. ಕೇಂದ್ರದಲ್ಲಿರುವ ಮಂತ್ರಿಗಳು ಅದನ್ನು ಕಂಡರೂ ಕಾಣದಂತೆ ನಾಗಾರ್ಜುನಸಾಗರ ಪೂರ್ಣವಾಗುವವರೆಗೆ ಸುಮ್ಮನಿದ್ದು ಈಗ ಪಂಚಾಯಿತಿಗೆ ಆ ವಿಚಾರವನ್ನು ಒಪ್ಪಿಸಿದ್ದಾರೆ. ಕೆ. ಎಲ್. ರಾಯರು ಹೀಗೆ ಮಾಡಿದ್ದಾರೆ. ಆನೇ ಅವರು ಇಂದು ಮೈಸೂರು ಸರಕಾರಕ್ಕೆ ಕಾಗದ ಬರೆದು ನೀವು ಕಾವೇರಿ ನೀರಿನ ಒಪ್ಪಂದವನ್ನು ಮುರಿದಿದ್ದೀರಿ, ಕಾವೇರಿಗೆ ಸಂಬಂಧಪಟ್ಟ ಯಾವ ಯೋಜನೆಯನ್ನೂ ಮಾಡಬಾರದು ಎಂದು ತಿಳಿಸಿದ್ದಾರೆ. ಹೀಗಿರುವಾಗ ಪ್ರಧಾನಿಯಾಗಿ ನಿಮ್ಮ ಅಭಿಪ್ರಾಯವೇನು ಎಂದು ಮೈಸೂರಿನ ಪ್ರಜೆಯಾಗಿ ನಾನು ಕೇಳಿದೆ. ಇಂಥ ಕಟ್ಟಾಜ್ಞೆ ಮಾಡಿದ್ದಾರೆ. ಏನು ಮಾಡಬೇಕು, ಜನರಿಗೆ ನ್ಯಾಯವನ್ನು ಹೇಗೆ ಒದಗಿಸುವಿರಿ? ಆ ಬಗ್ಗೆ ಭರವಸೆ ಕೊಡಿ ಎಂದು ಕೇಳಿದಾಗ ನಿಜವಾಗಿಯೂ ಅನ್ಯಾಯವಾಗಿದೆ ಎಂದು ನೀವು ಹೇಳುವುದರಿಂದ ಈ ವಿಚಾರವನ್ನು ಪರೀಕ್ಷೆ ಮಾಡಬೇಕಾಗಿದೆ, ಸಂಬಂಧಪಟ್ಟ ಕಾಗದಪತ್ರ ನನ್ನ ಹತ್ತಿರ ಇಲ್ಲ ನಿಮ್ಮ ಪಾದ ಸಮರ್ಥನೀಯವಾಗಿದೆ; ಏಕೆ ಅವರು ಹಾಗೆ ಮಾಡಿದರು ಎಂದು ಹೇಳಿದರು, ಮತ್ತೆ ಹೇಳಿದೆ, ಇಂದು ನಮ್ಮ ಕಡೆಗೆ ೨೫ರ ಒಪ್ಪಂದವಾದಮೇಲೆ ಕೆಲವು ಪ್ರದೇಶಗಳು ಮೈಸೂರಿಗೆ ಬಂದಿವೆ, ಕೊಳ್ಳೆಗಾಲ, ಕೊಡಗು ನಮಗೆ ಸೇರಿವೆ. ಆದುದರಿಂದ ನಮಗೆ ಹೆಚ್ಚು ಅವಕಾಶವಿದೆ, ಕಾವೇರಿ ವ್ಯಾಲಿಯಲ್ಲಿರುವ ಇತರ ಪ್ರದೇಶಗಳು ನಮಗೆ ಹೊಸದಾಗಿ ಸೇರಿರುವುದರಿಂದ ನಮಗೆ ಹೆಚ್ಚು ಕಾವೇರಿ ನೀರು ಬರಬೇಕಾಗಿದೆ, ಆ ಕಾರಣದಿಂದ ೨೫ರ ಒಪ್ಪಂದವನ್ನು ಕಿತ್ತು ಹಾಕಬೇಕು, ಮೈಸೂರಿಗೆ ಹೆಚ್ಚು ಅವಕಾಶ ಕೊಡಬೇಕು ಎಂದು, ಅದಕ್ಕೆ ಪ್ರಧಾನಿಗಳು ನಿಜವಾಗಿ ಅನ್ಯಾಯವಾಗಿದೆ ಎಂಬುದು ನನ್ನ ಮನಸ್ಸಿಗೆ ಗೊತ್ತಾಗುತ್ತಿದೆ, ಆದರ ಬಗ್ಗೆ ವಾದವನ್ನು ಸರಿಯಾಗಿ ಮಾಡಿ ಎಂದು ಹೇಳಿದರು ನಮ್ಮ ಹಕ್ಕನ್ನು ಪಡೆಯಲು ಸರಿಯಾದ ವಾದಮಾಡಲು ಪ್ರಯತ್ನಿಸಬೇಕು. ಇದೇ ಸಮಯದಲ್ಲಿ ಮದ್ರಾಸಿನ ಪ್ರತಿನಿಧಿಗಳನ್ನು ಭೇಟಿಮಾಡಿದೆ, ಡಿ ಎಂ ಕೆ ಪ್ರತಿನಿಧಿಗಳನ್ನು ಕಂಡು ಮೈಸೂರು ಮತ್ತು ಮದ್ರಾಸಿಗೆ ಒಳ್ಳೆಯ ಬಾಂಧವ್ಯವಿದೆ, ತಮಿಳು ನಾಡು ಮತ್ತು ಕನ್ನಡಿಗರು ಹೊಂದಿಕೊಂಡಿದ್ದಾರೆ, ಆದರೆ ಕಾವೇರಿ ಸಮಸ್ಯೆಯಿದೆ, ಅದು ಒಂದು ರಾಜ್ಯದಲ್ಲಿ ಹುಟ್ಟುವದು, ಇನ್ನೊಂದು ರಾಜ್ಯದಲ್ಲಿ ಹರಿಯುವುದು, ಹೀಗಿರುವಾಗ ಪೈಮನಸ್ಯಕ್ಕೆ ಎಡೆಯಿರಬಾರದು ಎಂದು ಮದ್ರಾಸಿನ ಮುಖ್ಯ ಮಂತ್ರಿಗಳಾದ ಕರುಣಾನಿಧಿಯವರಿಗೆ ಹೇಳಿದೆ. ಇಂದು ಮೂರು ನಾಲ್ಕು ಲಕ್ಷ ಎಕರೆಗಳಿಗಾಗಿ ಅಣೆಕಟ್ಟು ಕಟ್ಟಲು ಅಡಿಮಾಡುವುದು ಯೋಗ್ಯವಲ್ಲ ಎಂದು ಹೇಳಬೇಕು. ಇಬ್ಬರು ಮುಖ್ಯ ಮಂತ್ರಿಗಳೂ ಕುಳಿತು ಯೋಚನೆ ಮಾಡತಕ್ಕ ವಿಚಾರವಿದು. ಕೇಂದ್ರಕ್ಕೆ ಹೋಗುವುದಕ್ಕೆ ಮುಂದೆ ಈ ವಿಚಾರದಲ್ಲಿ ಮೈಸೂರು ಸರ್ಕಾರ ತನ್ನ ಸಾಮರ್ಥ್ಯದಿಂದ ಮದ್ರಾಸ್ ಮುಖ್ಯ ಮಂತ್ರಿಗಳ ಜೊತೆಯಲ್ಲಿ ಹಾಗೂ ಕೇಂದ್ರದಲ್ಲಿ ಕೂಡ ಸಾಮರ್ಥ್ಯದಿಂದ ವಾದ ಮಾಡಿದರೆ ಖಂಡಿತವಾಗಿ ನ್ಯಾಯ ದೊರಕುತ್ತದೆ ಎಂದು ನಾನು ಅಧ್ಯಕ್ಷರ ಮುಖಾಂತರ ಸರ್ಕಾರಕ್ಕೆ ತಿಳಿಸಲು ಇಷ್ಟಪಡುತ್ತೇನೆ. ಈ ವಿಚಾರದಲ್ಲಿ ನಾವು ಕಳೆದ ಎರಡು ದಶಕಗಳಿಂದ ಏನೊಂದು ಸಾಧನೆ ಮಾಡಿದ್ದೇವೆ, ಆ ಸಾಧನೆ ಏನೇನೂ ಸಾಲದು. ನಮ್ಮ ಮೈಸೂರು ರಾಜ್ಯ ನೀರಾವರಿಯಲ್ಲಿ ಇಷ್ಟೊಂದು ಹಿಂದೆ ಬಿದ್ದಿರುವುದಕ್ಕೆ ಕಾರಣ ನಮ್ಮ ಪ್ರಯತ್ನ ಅತ್ಯಲ್ಪ. ಇಡೀ ಇಂಡಿಯಾ ದೇಶದಲ್ಲಿ ಅತ್ಯಲ್ಪ ನೀರಾವರಿ ಪ್ರದೇಶವನ್ನು ಹೊಂದಿರತಕ್ಕ ರಾಜ್ಯವೆಂದರೆ ಮೈಸೂರು ರಾಜ್ಯ. ಕೇವಲ ೯ ಪರ್ಸೆಂಟ್ ಮಾತ್ರ ನೀರಾವರಿ ಪ್ರದೇಶವನ್ನು ಹೊಂದಿರುವುದು. ನಮ್ಮ ನೀರನ್ನು ನಾವು ಉಪಯೋಗಿಸಿಕೊಳ್ಳುವ ಶಕ್ತಿ ನಮಗೆ ಸಾಕಷ್ಟು ಇಲ್ಲದೆ ಇರುವುದು ಶೋಚನೀಯವಾದುದು ಎಂದು ನಾನು ವಿಷಾದದಿಂದ ಅಧ್ಯಕ್ಷರ ಮುಖಾಂತರ ಸರ್ಕಾರಕ್ಕೆ ಹೇಳಬೇಕಾಗಿದೆ.

ಮೈಸೂರು ದೇಶದಲ್ಲಿ ಬಹಳ ದುಃಖದಾಯಕವಾದ ವಿಚಾರವೆಂದರೆ, ಮೈಸೂರು ಸರ್ಕಾರ ಅಪಾರವಾದ ಹಣವನ್ನು ಪೆಚ್ಚ ಮಾಡಿ ನೀರಾವರಿ ಇತ್ಯಾದಿ ಯೋಜನೆಗಳನ್ನು ತೆಗೆದುಕೊಳ್ಳಲು ಎಷ್ಟೊಂದು ಹಣವನ್ನು ಖರ್ಚು ಮಾಡುತ್ತಿದೆಯೋ, ಅದೇ ರೀತಿ ಇಂಜಿನಿಯರುಗಳ ಶಿಕ್ಷಣ, ಇಂಜಿನಿಯರಿಂಗ್ ಕಾಲೇಜುಗಳ ಏರ್ಪಾಡು ಮಾಡುವುದರ ಮೂಲಕ ಸಹಸ್ರಾರು ಇಂಜಿನಿಯರುಗಳನ್ನು ನಿರ್ಮಾಣ ಮಾಡಿದೆ. ಪಾಲಿಟೆಕ್ನಿಕ್‌ನಿಂದ ಐದಾರು ಸಾವಿರ ಅಭ್ಯರ್ಥಿಗಳು ಪಾಸಾಗಿ ಇಂಜಿನಿಯರಿಂಗ್ ಡಿಪ್ಲೊಮಾದಾರರಾಗಿದ್ದಾರೆ. ಇವರ ಶಕ್ತಿಯನ್ನು ಉಪಯೋಗಿಸತಕ್ಕ ಚೈತನ್ಯ ನಮ್ಮ ರಾಜ್ಯಕ್ಕೆ ಇಲ್ಲ. ಕೋಟಿಗಟ್ಟಲೆ ಹಣ ಖರ್ಚು ಮಾಡಿ ಇಂಜಿನಿಯರಿಂಗ್ ಕಾಲೇಜುಗಳನ್ನು ಮಾಡಿ ಇಂಜಿನಿಯರುಗಳನ್ನು ತರಬೇತಿ ಮಾಡಲಾಗಿದೆ. ಈ ಪೊತ್ತು ಅವರಿಗೆ ಉದ್ಯೋಗವಿಲ್ಲ. ಅವರ ಜ್ಞಾನ ಸಂಪತ್ತನ್ನು ಪಡೆಯತಕ್ಕ ಶಕ್ತಿ ಸರ್ಕಾರಕ್ಕೆ ಇಲ್ಲ. ಒಂದುಕಡೆ ಈ ರಾಜ್ಯ ಎಷ್ಟು ಅಭಿವೃದ್ಧಿಯಾಗಬೇಕಾಗಿತ್ತೊ ಅಷ್ಟು ಆಗಿಲ್ಲ ಎಂದು ಹೇಳುವಾಗ, ಅದನ್ನು ಅಭಿವೃದ್ಧಿ ಮಾಡುವುದಕ್ಕೆ ತಯಾರಾಗಿರತಕ್ಕ ಯುವಕ ಇಂಜಿಯರ್ ಪದವೀಧರರು ಈ ದೇಶದಲ್ಲಿ ಸಜ್ಜಾಗಿ ನಿಂತಿದ್ದಾರೆ. ಅವರನ್ನು ಉಪಯೋಗಿಸಿಕೊಂಡು ಕೆಲಸ ಮಾಡತಕ್ಕ ಶಕ್ತಿ ಸರ್ಕಾರಕ್ಕೆ ಇಲ್ಲ. ನೂರು ಕೋಟಿ ರೂಪಾಯಿ

(ಶ್ರೀ ಎಸ್. ಶಿವಪ್ಪ)

ಖರ್ಚು ಮಾಡತಕ್ಕ ಯೋಜನೆಗಳಿರುವಾಗ, ನಮ್ಮಲ್ಲಿರುವ ನಿರುದ್ಯೋಗಿ ಇಂಜಿನಿಯರುಗಳಿಗೆ ಕೆಲಸ ಕೊಡುವುದಕ್ಕೆ ಸಾಧ್ಯವಿಲ್ಲವೇ ಎಂದು ಕೇಳುತ್ತೇನೆ.? ಇವತ್ತು ದೊಡ್ಡ ಕಂಟ್ರಾಕ್ಟರುಗಳು ಹತ್ತಾರು ಕೋಟಿ ರೂಪಾಯಿ ಕೆಲಸ ಮಾಡುವುದಕ್ಕೆ ತಮಗೆ ಬೇಕಾದ ಜನರನ್ನು ಇಟ್ಟುಕೊಂಡು ಕೆಲಸಮಾಡುತ್ತಾರೆ. ಸರ್ಕಾರ, ಏನು ಕೆಲಸ ಬಂದರೂ ಕಂಟ್ರಾಕ್ಟ್ ಎಂದು ಕಂಟ್ರಾಕ್ಟರಿಗೆ ಕೊಡುವಾಗ ಸರ್ಕಾರದ ಸಿಬ್ಬಂದಿ ಇಷ್ಟೊಂದು ಏಕೆ ಇರಬೇಕು.? ಇಷ್ಟೊಂದು ದೊಡ್ಡ ಸಿಬ್ಬಂದಿ, ಇಷ್ಟು ಜನ ಚೀಫ್ ಇಂಜಿನಿಯರುಗಳು ಮತ್ತು ಅವರ ಸಹಾಯಕರು ಇರತಕ್ಕ ಇಲಾಖೆ, ತನ್ನ ಇಲಾಖೆಯ ಮುಖಾಂತರ ಕೆಲಸ ಮಾಡಿಸುವುದಕ್ಕೆ ಏಕೆ ಪ್ರಯತ್ನ ಮಾಡಲಿಲ್ಲ? ಮಾನ್ಯ ಚನ್ನಬಸಪ್ಪನವರು ಮಂತ್ರಿಗಳಾಗಿದ್ದ ಕಾಲದಲ್ಲಿ ಕಂಟ್ರಾಕ್ಟರನ್ನು ಎ, ಬಿ, ಸಿ, ಇತ್ಯಾದಿ ವಿಂಗಡಿಸಿದರು. ಶರಾವತಿ ಮೊದಲಾದ ಯೋಜನೆಗಳಿಗೆ 'ಎ' ದರ್ಜೆ ಕಂಟ್ರಾಕ್ಟರೇ ಬರಬೇಕು. 'ಬಿ' ದರ್ಜೆ ಕಂಟ್ರಾಕ್ಟರು ಬರುವ ಹಾಗಿಲ್ಲ ಎಂದು ಹೇಳಿದ್ದರು ಕಂಟ್ರಾಕ್ಟರುಗಳ ವರ್ಗವನ್ನು ಏಕೆ ಸೃಷ್ಟಿಮಾಡುತ್ತಿದ್ದೀರಿ ಎಂದು ನಾನು ಆವಾಗಲೂ ಹೇಳಿದೆ, ಈಗಲೂ ಹೇಳುತ್ತಾ ಇದ್ದೇನೆ. ವಿದ್ಯಾವಂತ ನಿರುದ್ಯೋಗಿ ಇಂಜಿನಿಯರುಗಳಿದ್ದರೂ ಅವರಿಗೆ ಯಾವ ದೊಡ್ಡ ಕೆಲಸಗಳನ್ನೂ ಕೊಡುವುದಿಲ್ಲ. ಯಾವನು ಅವಿದ್ಯಾವಂತನಾಗಿದ್ದಾನೆ, ಯಾರು ಜೇಬು ತುಂಬ ದುಡ್ಡು ಕೊಡುತ್ತಾನೆ ಅವನಿಗೆ ಕಂಟ್ರಾಕ್ಟ್ ಕೊಡುತ್ತಾರೆ. ಪದವೀಧರರಾದ ಇಂಜಿನಿಯರುಗಳು ಕಂಟ್ರಾಕ್ಟ್‌ಗೆ ಅರ್ಜಿ ಹಾಕಿದರೂ ಕಂಟ್ರಾಕ್ಟ್ ಸಿಕ್ಕುವುದಿಲ್ಲ. ವಿದ್ಯಾವಂತ ಇಂಜಿನಿಯರಾದವನು ಇಷ್ಟು ಕೆಲಸ ಮಾಡಿದ್ದೇನೆ, ಇಷ್ಟು ದುಡ್ಡು ಕೊಡಿ ಎಂದು ಕೇಳುತ್ತಾನೆ. ಅವರಿಂದ ಜೇಬಿಗೆ ಹಣ ಬರುವುದಿಲ್ಲವೆಂದು ಅವನಿಗೆ ಕಂಟ್ರಾಕ್ಟ್ ಕೊಡುತ್ತಿಲ್ಲ. ಈ ಕಾರಣದಿಂದ ಅವರೆಲ್ಲ ಬೀದಿ ಬಿಕಾರಿಗಳಾಗಿದ್ದಾರೆ. 'ಎ' ವರ್ಗವ ಕಂಟ್ರಾಕ್ಟರುಗಳೆಂದು ಮಾಡಿರುವುದರಿಂದ ದೊಡ್ಡ ದೊಡ್ಡ ಕೆಲಸಗಳಿಗೆ ಅವರನ್ನು ಬಿಟ್ಟು ಬೇರೆಯವರು ಬರುವ ಹಾಗೆಯೇ ಇಲ್ಲ. ದೊಡ್ಡ ದೊಡ್ಡ ಕಂಟ್ರಾಕ್ಟರುಗಳು ಕೆಲವರೇ ಕೆಲಸ ಹಂಚಿಕೊಳ್ಳುವ ಹಾಗೆ ಮಾಡಿದ್ದಾರೆ. ಅವರಿಗೂ ಮಂತ್ರಿಗಳಿಗೂ ನೇರವಾದ ವ್ಯವಹಾರವಿದೆ.

ಶ್ರೀ ಬಿ.ರಾಚಯ್ಯ:-ಮಾನ್ಯ ಚನ್ನಬಸಪ್ಪನವರು ಇದ್ದಾಗ ಕಂಟ್ರಾಕ್ಟರುಗಳ ವರ್ಗೀಕರಣಮಾಡಿದರು. ಈಗ ನಿರುದ್ಯೋಗಿ ಇಂಜಿನಿಯರಿಂಗ್ ಪದವೀಧರರು ಕಂಟ್ರಾಕ್ಟ್ ತೆಗೆದುಕೊಳ್ಳಬೇಕಾದರೆ ಎನ್‌ರೊಲ್‌ಮೆಂಟ್ ಸರ್ಟಿಫಿಕೇಟ್ ಮತ್ತು ಸಾಲ್‌ವೆನ್ಸಿ ಸರ್ಟಿಫಿಕೇಟ್ ಕೊಡಬೇಕಾಗಿಲ್ಲ. ಹಾಗೆಯೇ ಕಂಟ್ರಾಕ್ಟ್ ಕೊಡಬೇಕೆಂದು ಈ ಸರ್ಕಾರ ಆಜ್ಞೆ ಮಾಡಿದೆ.

ಶ್ರೀ ಆರ್. ದಯಾನಂದ ಸಾಗರ್:—ಒಂದು ಕೋಟಿ, ಎರಡು ಕೋಟಿ ರೂಪಾಯಿ ವೆಚ್ಚದ ಕೆಲಸಗಳನ್ನು ವಿದ್ಯಾವಂತ ನಿರುದ್ಯೋಗಿ ಇಂಜಿನಿಯರುಗಳಿಗೆ ಸಾಲ್‌ವೆನ್ಸಿ ಸರ್ಟಿಫಿಕೇಟ್ ವಗೈರೆ ಇಲ್ಲದೆ ಕೊಡುತ್ತೀರಾ?

ಬಿ. ರಾಚಯ್ಯ: ಈಗ ಸಾಲ್‌ವೆನ್ಸಿ ಸರ್ಟಿಫಿಕೇಟ್ ಕೊಡಬೇಕಾಗಿಲ್ಲ. ಮತ್ತೆ ಕಂಟ್ರಾಕ್ಟ್ ಕಾರ್ಪೊರೇಷನ್ ಎಂದು ಮಾಡಿದಾಗ ಅವರಲ್ಲಿ ಅನೇಕ ಜನಗಳಿಗೆ ಕೆಲಸ ಸಿಕ್ಕುತ್ತದೆ.

ಶ್ರೀ ಎಸ್, ಶಿವಪ್ಪ: ವ್ಯವಸಾಯ ಸಚಿವರು ಲೋಕೋಪಯೋಗಿ ಇಲಾಖೆಯ ಪರವಾಗಿ ಉತ್ತರ ಕೊಟ್ಟರು. ಆಜ್ಞೆ ಏನು ಮಾಡಿದ್ದಾರೆ ಎನ್ನುವುದು ಕಾಗದದ ಮೇಲಿದೆ. ಎಷ್ಟು ಕೆಲಸಗಳು ಈ ರಾಜ್ಯದಲ್ಲಿ ಕಂಟ್ರಾಕ್ಟರ್ ಮೂಲಕ ನಡೆಯುತ್ತಿವೆ, ಪದವೀಧರರಿಗೆ ಎಷ್ಟು ಕೆಲಸಗಳನ್ನು ಕೊಟ್ಟಿದ್ದಾರೆ ಎನ್ನುವ ಅಂಕಿ ಅಂಶಗಳನ್ನು ಉತ್ತರ ಕೊಡುವಾಗ ತಿಳಿಸಿದರೆ ಸರ್ಕಾರ ಮಾಡುವುದು ಸರಿ ಎಂದು ಹೇಳುತ್ತೇನೆ.

ಬಡಪಾಯಿ ನಿರುದ್ಯೋಗಿ ಇಂಜಿನಿಯರಿಂಗ್ ಪದವೀಧರರಿಗೆ ಕೊಡತಕ್ಕ ಕೆಲಸವೆಲ್ಲ ಹತ್ತಿಪ್ಪತ್ತು ರೂಪಾಯಿ ಕೆಲಸ. ಒಬ್ಬರಿಗೆ ಕೊಡುವಂಥ ಕೆಲಸವನ್ನು ಪದವೀಧರರಿಗೆ ಕೊಡುತ್ತಾರೆ. ದೊಡ್ಡ ದೊಡ್ಡ ಕಂಟ್ರಾಕ್ಟುಗಳನ್ನು ಕೊಡುವುದಕ್ಕೆ ಬೇಕಾಗಿರುವುದು ಇಂಜಿನಿಯರಿಂಗ್ ವಿದ್ಯೆಯಲ್ಲ, ಅದಕ್ಕೆ ಬೇಕಾಗಿರುವ ವಿದ್ಯೆಯೇ ಬೇರೆ. ಮಂತ್ರಿಗಳ ಹತ್ತಿರ ಹೇಗೆ ವ್ಯವಹಾರ ಮಾಡಬೇಕು ಎಂಬುದು ಗೊತ್ತಿರಬೇಕು. ಅಂಥ ವ್ಯವಹಾರ ಜ್ಞಾನವಿರುವವರಿಗೆ ದೊಡ್ಡ ದೊಡ್ಡ ಕಂಟ್ರಾಕ್ಟುಗಳು ಸಿಕ್ಕುತ್ತವೆ. ಮಂತ್ರಿಗಳ ಹತ್ತಿರ ವ್ಯವಹಾರ ಮಾಡುವ ವಿದ್ಯೆ ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಗೊತ್ತಿರುವುದಿಲ್ಲ. ಅವನಿಗೆ ಕಾನ್ಷಸ್ಸ್ ಇರುತ್ತದೆ.

ಶ್ರೀ ಆರ್. ದಯಾನಂದ ಸಾಗರ್:—ಸೂಪರ್‌ವೈಸರ್‌ನಿಂದ ಹಿಡಿದು ಮೇಲ್ಪಟ್ಟವರೆಗೆ ಎಲ್ಲ ಮಟ್ಟಗಳಲ್ಲಿಯೂ ವ್ಯವಹಾರ ಮಾಡತಕ್ಕ ವಿದ್ಯೆ ಇರಬೇಕು.

ಶ್ರೀ ಎಸ್. ಶಿವಪ್ಪ:—ಒಬ್ಬ ಪದವೀಧರ ಕಂಟ್ರಾಕ್ಟರು ಬಂದ. ಏನು ಕೆಲಸ ಮಾಡುತ್ತಿದ್ದೆ, ಆ ಕೆಲಸದಲ್ಲಿ ಎಷ್ಟು ಉಳಿಸಿದೆ ಎಂದು ಕೇಳಿದ್ದಕ್ಕೆ ನನಗೆ ಉಳಿಸುವುದಕ್ಕಾಗಲಿಲ್ಲವೆಂದು ಹೇಳಿದ. ಹಣ ಉಳಿಸುವುದಕೆ ಮಾಡಬಾರದ ಕೆಲಸ ಮಾಡಬೇಕು. ಸಿಮೆಂಟ್ ಹಾಕುವ ಕಡೆ ಮಣ್ಣು ಹಾಕಬೇಕು, ಗಾರೆ ಹಾಕುವ ಕಡೆ ಮಣ್ಣು ಹಾಕಬೇಕು. ಅರ್ಧರ್ಧ ಕೆಲಸ ಮಾಡಿ ದುಡ್ಡು ಮಾಡಬೇಕು, ಇಂಜಿನಿಯರುಗಳಿಗೆ ಆಷ್ಟು ಕೊಡಬೇಕು, ಎಂದು ಹೇಳಿದ. ಅದ್ದರಿಂದ ಇಂಥವರಿಗೆ ಹೇಗೆ ಕಂಟ್ರಾಕ್ಟ್ ಕೆಲಸವನ್ನು ಕೊಡುತ್ತಾರೆ? ಕಂಟ್ರಾಕ್ಟ್ ಕೆಲಸ ಮಾಡುವವರು ಪದವೀಧರ ಕಂಟ್ರಾಕ್ಟರನನ್ನು ನಮ್ಮ ಪ್ರೊಫೆಷನ್ ಕೆಡಿಸುತ್ತಿದ್ದೀಯ, ಸತ್ಯವಂತನಾಗಿ ಕೆಲಸ ಮಾಡುವುದಕ್ಕೆ ಬಂದು ನಮ್ಮ ಪ್ರೊಫೆಷನ್ ಡಿಗ್ನಿಟಿ ಹಾಳು ಮಾಡುತ್ತಿದ್ದೀಯ ಎಂದು ಬಯ್ದರಂತೆ.ಈ ಹೊತ್ತು ಒಂದುಕೆಲಸಕ್ಕೆ ಟೆಂಡರ್ ಹಾಕಬೇಕಾದರೆ ಎಲ್ಲ ಲೆಕ್ಕ ಹಾಕುತ್ತಾರೆ,ಕೆಲಸಕ್ಕೆ ಎಷ್ಟಾಗುತ್ತದೆ, ಸೂಪರ್‌ವೈಜರಿನಿಂದ ಹಿಡಿದು ಮೇಲ್ಮಟ್ಟದವರೆಗೆ ಹಂಚುವುದಕ್ಕೆ ಎಷ್ಟಾಗುತ್ತದೆ ಎಂಬುದಾಗಿ ಮಾಸ್ಟರ್ ಹಿರಣ್ಯಯ್ಯ ಅವರ ನಾಟಕದಲ್ಲಿ ಹೇಳುವ ಹಾಗೆ ಪ್ರತಿಯೊಂದಕ್ಕೂ ಇಷ್ಟು ಕೊಡಬೇಕು ಎಂದು ಬೋರ್ಡ್ ಹಾಕಿದರೆ ಬಹಳ ಚೆನ್ನಾಗಿರುತ್ತದೆ. ಯಾವುದೇ ಪ್ರಾಜೆಕ್ಟ್ ಮಂಜೂರಾಗಬೇಕಾಗಿದ್ದರೂ ಕೂಡ ಕಂಟ್ರಾಕ್ಟರು ಇಂಜಿನಿಯರ ಹತ್ತಿರ ಹೋಗಿ, ಕೆಲಸ ಮಾಡಿಸಿಕೊಂಡು ಬರುತ್ತಾರೆ. ಈ ಹೊತ್ತು ಆಗಿರುವಂಥ ಪ್ರಾಜೆಕ್ಟ್‌ಗಳಲ್ಲಿ ಅರ್ಧ ಪೊಲಿಟಿಕಲ್ ಪ್ರಾಜೆಕ್ಟ್‌ಗಳು. ನೀರಿಲ್ಲದೆ ಇರುವ ಕಡೆ ಕೆರೆ ಕಟ್ಟುತ್ತಾರೆ. ತಮಗೆ ಬೇಕಾದವರಿಗೆ ಕಂಟ್ರಾಕ್ಟ್ ಸಿಕ್ಕಬೇಕು ಎಂದು ಕೊಡುತ್ತಾರೆ. ಶ್ರೀ ಶಾಸ್ತ್ರಿಗಳು ಹೇಳುತ್ತಿದ್ದರು. ಚಿಕ್ಕಪುಗಳೂರಿನಲ್ಲಿ ಯಾರಿಗೋ ಒಬ್ಬ ದೊಡ್ಡವರಿಗೆ ಕಂಟ್ರಾಕ್ಟ್ ಕೊಡುವುದಕ್ಕೆ ೨೫ ಲಕ್ಷ ರೂಪಾಯಿ ಪ್ರಾಜೆಕ್ಟ್ ಕೆಲಸ ಮಾಡಿಸಿದರಂತೆ, ಅಲ್ಲಿ ನೀರು ಇಲ್ಲ. ಮಣ್ಣು ಹಾಕಿ ಕಟ್ಟೆ ಹಾಕಿದ್ದಾರಷ್ಟೆ. ಇಂಥ ಪ್ರಾಜೆಕ್ಟ್‌ಗಳು ಎಷ್ಟೊಂದು ಇವೆ? ಸರ್ಕಾರದ ಲೆಕ್ಕದ ಪ್ರಕಾರ ೫೦ ಕೋಟಿ ರೂಪಾಯಿ ಆಸ್ತಿ ಇದೆ ಎಂದು ಹೇಳುತ್ತಾರೆ. ಈ ಪ್ರಾಜೆಕ್ಟ್‌ಗಳಿಂದ ಎಷ್ಟು ಲಾಭ ಬರುತ್ತಿದೆ ಎಂದು ನಾನು ಕೇಳುತ್ತಿದ್ದೇನೆ. ಲಾಭ ಬರುವುದು ಹಾಗಿರಲಿ, ಮಾಡಿರುವ ಸಾಲಕ್ಕೆ ೨೭ ಕೋಟಿ ರೂಪಾಯಿ ಬಡ್ಡಿ ಪ್ರತಿ ವರ್ಷ ಕೊಡಬೇಕಾಗಿದೆ, ಬಡ್ಡಿ ಮತ್ತು ಸಾಲವನ್ನು ತೀರಿಸುವುದಕ್ಕೆ ವರ್ಷಂಪ್ರತಿ ೯೦ ಕೋಟಿ ರೂಪಾಯಿ ಕೊಡುತ್ತಿದ್ದೇವೆ. ನಮಗೆ ಇರತಕ್ಕ ಆಸ್ತಿಯಲ್ಲಿ ನಮ್ಮ ಸಾಲತೀರಿಸುವುದಕ್ಕೆ, ಮತ್ತು ಬಡ್ಡಿ ಕೊಡುವುದಕ್ಕೆ ಆಗಿದೆ.

ಇನ್ನು ನೀರಾವರಿ ಯೋಜನೆಯ ಬಗ್ಗೆ ಮಾತನಾಡುವಾಗ ಇನ್ನೊಂದು ವಿಷಯ ಹೇಳುತ್ತೇನೆ. ಇರಿಗೇಷನ್ ಆಕ್ಟ್ ಎಂದು ಒಂದು ಕಾನೂನು ಮಾಡಿದ್ದಾರೆ. ಹಿಂದಕ್ಕೆ ಇದ್ದಂಥ ತರಿ ಕಂದಾಯ ವಜಾ ಮಾಡಿ ವಾಟರ್ ರೇಟ್ ಬೆಟರಮೆಂಟ ಲೇವಿಯನ್ನು ರೈತನ ಮೇಲೆ ವಿಧಿಸಿದ್ದಾರೆ. ಮೊದಲಿನಕ್ಕಿಂತ ಐದರಷ್ಟು ಕಂದಾಯ ಜಾಸ್ತಿಯಾಗಿದೆ, ಇಷ್ಟು ಹೊರೆ ರೈತನ ಮೇಲೆ ಹೊರಿಸಿದ್ದಾರೆ. ಇದು ಅನ್‌ಸೈಂಟಿಫಿಕ್ ಆಗಿದೆ. ಹಿಂದೆ ಇರತಕ್ಕಂಥ ತರಿ ಕಂದಾಯ ಮಾತ್ರ ಹಾಕಬೇಕು. ಈ ತೊಂದರೆ ನಿವಾರಣೆ ಮಾಡಲು ಇರಿಗೇಷನ್ ಆಕ್ಟ್‌ನ್ನು ರದ್ದು ಮಾಡಬೇಕು ಎಂದು ಹೇಳುತ್ತೇನೆ.

ಲೋಕೋಪಯೋಗಿ ಇಲಾಖೆಯಲ್ಲಿ ಯಾವ ರೀತಿ ಒಂದು ಪ್ರೊಜಕ್ಟು ಎಸ್ಟಿಮೇಟು ಆಗುತ್ತದೆಯೋ ಅಷ್ಟಕ್ಕೆ ಕೆಲಸ ಮಾಡಿರತಕ್ಕಂಥ ಒಂದು ಉದಾರಣೆ ತೋರಿಸಿದರೆ ನಾನು ಅವರಿಗೆ ನಮಸ್ಕಾರ ಹಾಕುತ್ತೇನೆ. ಮೊದಲು ಎಸ್ಟಿಮೇಟು ಮಾಡುತ್ತಾರೆ, ಆ ಮೇಲೆ ರೀ-ಎಸ್ಟಿಮೇಟು ಆಗುತ್ತದೆ. ರಿವಿಜನ್ ಆಫ್ ರೇಟಿಗಿ ಆಗುತ್ತದೆ, ಹೀಗೆ ೧೦ ಲಕ್ಷಕ್ಕೆ ಎಸ್ಟಿಮೇಟು ಆದುದು ೫೦ ಲಕ್ಷ ಇಲ್ಲವೆ ಒಂದು ಕೋಟಿಪರೆಗೆ ಅದು ಹೋಗುತ್ತದೆ. There is no planning. They do not know how to prepaer the estimate. Where is the storage to-day? ಯಾವ ಕೆಲಸವಾದರೂ ಅದಕ್ಕೆ ಸರಿಯಾದ ಎಸ್ಟಿಮೇಟು ಇಲ್ಲ. ಕಂಟ್ರಾಕ್ಟರನು ಹಣ ಪಡೆಯಬಹುದು. ಅವನು ಎಷ್ಟಕ್ಕೆ ಎಸ್ಟಿಮೇಟು ಕೊಡುತ್ತಾನೋ ಅಷ್ಟಕ್ಕೆ ಎಸ್ಟಿಮೇಟ್ ಪುಸ್ತಕ ವಿಮರ್ಶೆ-ಯಾಗುತ್ತದೆ. ಹೀಗೆ ಸರಕಾರದ ಖಜಾನೆಯಲ್ಲಿಯ ಹಣ ದುರುಪ ಯೋಗವಾಗುತ್ತಿದೆ. ಕಂಟ್ರಾಕ್ಟರನು ಸರಿಯಾದ ರೀತಿಯಲ್ಲಿ ಎಸ್ಟಿಮೆಂಟ ಹಾಕುವುದಿಲ್ಲ, ದಾರಿ ಒಡೆದು ಹೋಗಿ, ರಸ್ತೆ ಸರಿಯಾಗಿ ಇರುವುದಿಲ್ಲ. ನಾಲ್ಕನೇ ಒಂದು ಭಾಗ ಸೀಮೆಂಟ್ ಹಾಕುತ್ತಾನೆ. ಇವರ ಸ್ಪೋರ್ ಬೀದಿಯಲ್ಲಿಯೇ ಇರುತ್ತದೆ. ಬೀದಿಯಲ್ಲಿ ಎಲ್ಲಾ ಸಾಮಾನು ಬಿದ್ದಿರುತ್ತದೆ. ವಿದ್ಯುತ್ ಶಕ್ತಿ ಇಲಾಖೆಯ ಕೆಲಸ ನಡೆದಾಗ ತಾಮ್ರದ ತಂತಿ ತೆಗೆದು ಹಾಕಿದರು. ಒಂದು ಕೇಜಿಗೆ ೩೦ ರೂಪಾಯಿ ತಾಮ್ರದ ತಂತಿಯ ಬೆಲೆ ಇದೆ ಟಿನ್ ಗಟ್ಟಿಲೆ ತಾಮ್ರದ ತಂತಿ ಹೋಗಿದೆ. ಇವರ ಫಿಜಿಕಲ್ ಸ್ಟಾಫ್ ವೆರಿಫಿಕೇಷನ್ ಎಲ್ಲಿ ಇದೆ? ಲೆಕ್ಕ ಇಲ್ಲ ಪತ್ರ ಇಲ್ಲ. ಪಿ ಡಬ್ಲ್ಯೂ ಡಿ ಇಲಾಖೆಯ ಸಾಮಾನು ಬೀದಿಯಲ್ಲಿ ದೆ. ಒಂದು ನೂರು ಕೋಟಿರೂಪಾಯಿ ೫೦ ಕೋಟಿ ಅನ್ಯಥಾ ಮೆಚ್ಚಿ ಮಾಡುವ ಇಲಾಖೆಯಾಗಿದೆ. ಬಜೆಟ್ಟಿನಲ್ಲಿ ಒದಗಿಸಿರತಕ್ಕ ಹಣವನ್ನು ಸರಿಯಾಗಿ ಖರ್ಚು ಮಾಡಿದರೆ ಎರಡರಷ್ಟು ಕೆಲಸ ಮಾಡಲು ಸಾಧ್ಯವಾಗುತ್ತದೆ ಎಂದು ನಾನು ನಂಬಿದ್ದೇನೆ. ೧೦೦ ಕೋಟಿ ರೂಪಾಯಿ ಕೊಟ್ಟರೂ ಕೂಡ ಇದರಲ್ಲಿ ಬಹು ಭಾಗವನ್ನು ಕಂಟ್ರಾಕ್ಟರರು ಲಂಚದ ರೂಪದಲ್ಲಿ ಹಂಚುತ್ತಾರೆ. ಆದುದರಿಂದ ಜನ ಏನು ಅನ್ನುತ್ತಾರೆ ಅಂದರೆ ಇದು ಪಬ್ಲಿಕ್ ವರ್ಕ್ಸ್ ಡಿಪಾರ್ಟಮೆಂಟ್ ಅಲ್ಲ, ಪಬ್ಲಿಕ್ ಎನೆಮಿ ನಂಬರ್ ಒನ್ ಡಿಪಾರ್ಟಮೆಂಟ್,

(ಶ್ರೀ ಎಸ್. ಶಿವಪ್ಪ)

ಪಬ್ಲಿಕ್ ವೇಸ್ಟ್ ಡಿಪಾರ್ಟಮೆಂಟ್ ಎಂದು ಹೇಳುತ್ತಾರೆ. ಪಬ್ಲಿಕ್ ವರ್ಕ್ಸ್ ಡಿಪಾರ್ಟಮೆಂಟಿನಲ್ಲಿ ರಿಸರ್ಚ್ ಮಾಡುವ ಇಲಾಖೆ ಇಲ್ಲ. ರಸ್ತೆ ಹೇಗೆ ಮಾಡಬೇಕು ಎಂಬುದು ಇವರಿಗೆ ಗೊತ್ತಿಲ್ಲ. ಮೈಸೂರು ಬೆಂಗಳೂರು ರಸ್ತೆ ಹೇಗೆ ಮಾಡಿದ್ದಾರೆ ನೋಡಬಹುದು, ಹಳೇ ಕಂದಾಚಾರದ ರೀತಿಯಲ್ಲಿಯೇ ಕೆಲಸ ಮಾಡುತ್ತಾರೆ. ಇವತ್ತಿನ ನವೀನ ರೀತಿಯಲ್ಲಿ ಕೆಲಸ ಮಾಡತಕ್ಕಂಥ ಸಿಬ್ಬಂದಿ ಇಲ್ಲ. ಇವರಿಗೆ ನಾವು ಎಷ್ಟು ಬೈದರೂ ಗೊತ್ತಾಗುವುದಿಲ್ಲ. ಒಂದು ಸರಿಯಾದ ರೀತಿಯಲ್ಲಿ ವ್ಯವಸ್ಥೆ ಇಲ್ಲದೇ ಹೋದರೆ ನಾವು ಕೊಟ್ಟಂಥ ಹಣ ದುರ್ವಿನಿಯೋಗವಾಗುತ್ತದೆ ಎಂದು ಹೇಳುತ್ತೇನೆ. ೧೦೦ ಕೋಟಿಯಲ್ಲಿ ೭೦ ಕೋಟಿ ಕೆಲಸವಾಗುವುದಿಲ್ಲ ಮತ್ತು ಹಣ ದುರ್ವಿನಿಯೋಗವಾಗುತ್ತದೆ. ಈ ಕಾರಣಗಳಿಗೋಸ್ಕರ ಈ ಡಿಮ್ಯಾಂಡನ್ನು ವಿರೋಧ ಮಾಡಿ ನನ್ನ ಮಾತು ಮುಗಿಸುತ್ತೇನೆ.

†ಶ್ರೀ ಸದಾಶಿವಪ್ಪ ಪಾಟೀಲ (ದೇವದುರ್ಗ) : ಮಾನ್ಯ ಅಧ್ಯಕ್ಷರೇ, ಈ ದಿವಸ ಲೋಕೋಪಯೋಗಿ ಇಲಾಖೆಯ ಮಾನ್ಯ ಮಂತ್ರಿಗಳು ಮಂಡಿಸಿರುವ ಸುಮಾರು ಒಂದು ನೂರು ಕೋಟಿ ರೂಪಾಯಿ ಬೇಡಿಕೆಗೆ ನನ್ನ ಸೂಕ್ತ ಸಲಹೆಗಳನ್ನು ಕೂಡ ಬಯಸುತ್ತೇನೆ. ಅಭಿವೃದ್ಧಿ ದೃಷ್ಟಿಯಿಂದ ನನ್ನ ಜಿಲ್ಲೆಗೆ ಕೆಲಸ ಆಗಬೇಕು, ಬೇರೆ ಜಿಲ್ಲೆಗೆ ಆಗಕೂಡದು, ಹಳೇ ಮೈಸೂರಿನಲ್ಲಿ ಇದು ಹೆಚ್ಚಾಗಿದೆ, ಹೊಸ ಮೈಸೂರಿಗೆ ಕಡಿಮೆಯಾಗಿದೆ ಎಂಬ ಭಾವನೆಯಿಂದ ನಾನು ಮಾತನಾಡಲಿಕ್ಕೆ ತಯಾರಿಲ್ಲ. ಈ ಪಿ ಡಬ್ಲ್ಯೂ ಡಿ ಇಲಾಖೆಯಲ್ಲಿ, ಇನ್ನಿತರ ಖಾತೆಯಲ್ಲಿ ನಡೆಯತಕ್ಕಂಥ ಆಡಳಿತದಲ್ಲಿ ಅಧಿಕಾರಿಗಳ ಸೆಲೆಕ್ಷನ್ ಕೆಲಸದ ಬಗ್ಗೆ ನನ್ನ ಕೆಲವು ವಿಚಾರ ಹೇಳ ಬೇಕೆಂದು ಮಾಡಿದ್ದೇನೆ. ಒಂದು ಉದಾಹರಣೆ ಹೇಳಬೇಕಾದರೆ ನಾವು ಕೇಡರ್ ಅಂಡ್ ರಿಕ್ರೂಟ್‌ಮೆಂಟ್ ರೂಲ್ಸ್ ಮಾಡಿಕೊಂಡಿದ್ದೇವೆ. ಇದನ್ನು ಜಾರಿಗೆ ತರಲು ನಮ್ಮ ಸರಕಾರ ಪ್ರಯತ್ನ ಮಾಡಲಿಕ್ಕೆ ಹತ್ತಿದೆ. ಇದರಲ್ಲಿ ಸೆಕ್ರಟೇರಿಯೆಟ್ ಬಗ್ಗೆ ಕೇಡರ್ ಆಂಡ್ ರಿಕ್ರೂಟಮೆಂಟ್ ರೂಲ್ಸ್ ಎಂದು ಏನು ಮಾಡಿಕೊಂಡಿದ್ದಾರೋ ಆದಕ್ಕೆ ಬೇರೆ ಸೆಲೆಕ್ಷನ್ ಒಂದು ಇಟ್ಟು ಕೊಂಡಿದ್ದಾರೆ. ಈ ಉದಾಹರಣೆ ಏತಕ್ಕೆ ಹೇಳುತ್ತೇನೆ ಅಂದರೆ ಇವತ್ತಿನ ದಿವಸ ಎಷ್ಟೋ ಜನರಿಗೆ ಎಷ್ಟೋ ಇಂಜಿನಿಯರುಗಳಿಗೆ ಅನ್ಯಾಯವಾಗಿದೆ. ಇದಕ್ಕೆ ಹೊಣೆ ಯಾರು, ಇದನ್ನು ಹೇಗೆ ಸರಿಪಡಿಸಬೇಕು ಎಂದು ಮಾನ್ಯ ಮಂತ್ರಿಗಳಲ್ಲಿ ಕೇಳುತ್ತೇನೆ. ಏನು ಅನ್ಯಾಯ ವಾಗಿದೆ ಅಂದರೆ ೬೦೦ ಜ್ಯೂನಿಯರ್ ಎಂಜಿನಿಯರುಗಳನ್ನು ಲೋಕಲ್ ಕ್ಯಾಂಡಿಡೇಟ್ಸ್ ಎಂದು ಅಪಾಯಿಂಟ ಮೆಂಟ್ ಮಾಡಿಕೊಂಡ ಮೇಲೆ, ಈ ಅಪಾಯಿಂಟಮೆಂಟ್ ಮಾಡಲಿಕ್ಕೆ ಯಾರು ಅಧಿಕಾರ ಕೊಟ್ಟರು? ನಮಗೆ ೪೦೦ ಜನ ಜ್ಯೂನಿಯರ್ ಎಂಜಿನಿಯರುಗಳು ಬೇಕಾಗಿದೆ. ದಯವಿಟ್ಟು ಸೆಲೆಕ್ಟ್ ಮಾಡಬೇಕು ಎಂದು ಡಿಪಾರ್ಟುಮೆಂಟಿನಿಂದ ಪಬ್ಲಿಕ್ ಸರ್ವಿಸ್ ಕಮಿಷನ್ನಿಗೆ ಆದೇಶಹೋಯಿತು.

(Mr. Chairman Sri D. M. Siddaiah in the chair)

ಈ ದಿವಸ ನೀವು ಆದೇಶ ಕೊಡದೇನೇ ಹೇಗೆ ಆ ೬೦೦ ಜನರನ್ನು ಅಪಾಯಿಂಟ್ ಮಾಡಿಕೊಂಡರು ? ತಾವು ಅವರಿಗೆ ಹಾಗೆ ಯಾವುದನ್ನೂ ಕೇಳದೆ ಅಪಾಯಿಂಟ್ ಮಾಡಿಕೊಂಡು ಈಗ ೪೦೦ ಜನರು ಸಾಕು ಎಂದು ಹೇಳಿದರೆ ಇನ್ನುಳಿದ ಆ ೨೦೦ ಜನರ ಪರಿಸ್ಥಿತಿಯೇನಾಗಬೇಕು ? ಈಗೇನೋ ಸರ್ಕಾರದವರು ಒಂದು ಖಾಯಿದೆ ಮಾಡಿದ್ದಾರೆ. ಎಂದು ಹೇಳಲಾಗುತ್ತಿದೆಯಲ್ಲಾ ಆ ಪ್ರಕಾರ ಅವರಿಗೆಲ್ಲಾ ನಾಳೆ ಕಂಟ್ರಾಕ್ಟರ್ ಕೆಲಸವನ್ನು ಕೊಡಲಾಗುತ್ತದೆಯೇ ಅಥವಾ ಅವರಿಗೆ ಏಜ್ ಬಾರ್ ಆಗಿದ್ದರೆ ಅವರಿಗೆ ಹೇಗೆ ಕೆಲಸಗಳನ್ನು ಕೊಡುವುದಕ್ಕಾಗುತ್ತದೆ ಎನ್ನುವುದನ್ನೆಲ್ಲಾ ಮಾನ್ಯ ಮಂತ್ರಿಗಳು ಉತ್ತರ ಕೊಡತಕ್ಕ ಕಾಲದಲ್ಲಿ ದಯವಿಟ್ಟು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

4-00 P.M.

ಇನ್ನು ಸರ್ಕಾರದವರು ಮಾಡಿಕೊಂಡಿರತಕ್ಕ ಕೇಡರ್ ಅಂಡ್‌ರೆಕ್ರೂಟ್‌ಮೆಂಟ್ ರೂಲ್ಸ್‌ಗಳೇನಿವೆ ಅವುಗಳನ್ನು ಬಹಳ ಇಂಟೆಲಿಜಂಟಾಗಿರತಕ್ಕ ಜನರೇ ಸೇರಿ ಮಾಡಿದ್ದಾರೆ. ಇಲಾಖೆಯವರಿಗೆ ೫೦ ಜನ ಅಭ್ಯರ್ಥಿಗಳು ಬೇಕಾಗಿದ್ದರೆ ಅವರು ಪಿ.ಎಸ್.ಸಿ. ಅವರಿಗೆ ನಮಗೆ ೧೦೦ ಜನ ಕ್ಯಾಂಡಿಡೇಟುಗಳು ಬೇಕು ಸಲೆಕ್ಟ್‌ಮಾಡಿ ಕಳುಹಿಸಿ ಎಂದು ಹೇಳಿ, ಅವರು ಒಂದು ನೂರು ಜನರನ್ನು ಸೆಲೆಕ್ಟ್ ಮಾಡಿದ ನಂತರ, ಈ ಇಲಾಖೆಯ ಸೆಕ್ರೆಟೆರಿಗಳೋ ಅಥವಾ ಇಲಾಖೆಯ ಮುಖ್ಯ ಅಧಿಕಾರಿಗಳೋ ಯಾರೋ, ನಮಗೆ ಈಗ ಸದ್ಯಕ್ಕೆ ೫೦ ಜನರೇ ಸಾಕು ನಮಗೆ ೫೦ ಹೆಸರುಗಳನ್ನು ಮಾತ್ರ ಕಳುಹಿಸಿಕೊಡಿ ಎಂದು ಹೇಳಿದ ಕೂಡಲೆ ಆ ಪಿ.ಎಸ್.ಸಿ. ಅವರ ಅವರ ಲಿಸ್ಟಿನಲ್ಲಿರತಕ್ಕ ಬೆಸ್ಟ್ ಕ್ಯಾಂಡಿಡೇಟುಗಳನ್ನೇ ಕಳುಹಿಸುತ್ತಾರೇ ಇಂಥ ಒಂದು ಪದ್ಧತಿಯಲ್ಲಿ ಸರ್ಕಾರದವರೇನು ಹಿಂದುಳಿದ ವರ್ಗಕ್ಕೆ ಮತ್ತು ನಿಮ್ಮ ಪಂಗಡಗಳಿಗೆ ಮೀಸಲಾಗಿಡ

ತ್ತಾರೆ ಆ ಸ್ಥಾನಗಳಿಗೆ ಜನರು ಬರುವುದಕ್ಕೆ ಅವಕಾಶವಾಗುವುದಿಲ್ಲ. ಏಕೆಂದರೆ ಆ ೫೦ ಜನರೂ ವೆರಿಟ್ಟಿನಲ್ಲಿರತಕ್ಕವರು. ಇಂಥ ಒಂದು ಅಪಾಯವನ್ನು ತಪ್ಪಿಸುವುದಕ್ಕೆ ನಾನು ಒಂದು ಸಲಹೆ ಮಾಡುವುದೇನೆಂದರೆ ಸರ್ಕಾರಕ್ಕೆ ಎಷ್ಟು ಜನರ ಅಗತ್ಯವಿರುತ್ತದೋ ಅಥವಾ ಎಷ್ಟು ಜನರನ್ನು ಅವರು ಕೆಲಸಕ್ಕೆ ನೇಮಕ ಮಾಡಿಕೊಳ್ಳುತ್ತಾರೋ ಆ ಸಂಖ್ಯೆಗನುಗುಣವಾಗಿ ಎಷ್ಟು ಸ್ಥಾನಗಳನ್ನು ಹಿಂದುಳಿದ ವರ್ಗದವರಿಗೂ ಮತ್ತು ನಿಮ್ನ ಪಂಗಡದವರಿಗೂ ಮೀಸಲಾಗಿಡಬೇಕೋ ಅಷ್ಟನ್ನು ಇಟ್ಟು ಉಳಿದವನ್ನು ಬೇರೆ ಕ್ಯಾಂಡಿಡೇಟುಗಳಿಗೆ ಕೊಡಬಹುದೆಂದು ಹೇಳುತ್ತೇನೆ.

ಇನ್ನು ಕಳೆದೆರಡು ದಿನಗಳಿಂದ ನಮ್ಮ ವಿರೋಧ ಪಕ್ಷದ ನನ್ನ ಮಿತ್ರರು ನಮ್ಮ ಆಡಳಿತದ ಬಗ್ಗೆ ಕೆಲವು ಟೀಕೆಗಳನ್ನು ಮಾಡಿದ್ದಾರೆ. ಆದರೆ ಅವುಗಳಿಂದ ರಾಜ್ಯದ ಅಭಿವೃದ್ಧಿಯಾಗುವುದಿಲ್ಲ. ಅದಕ್ಕೆ ನನ್ನ ಮಿತ್ರರು ಯಾವ ಒಂದು ಉತ್ತಮ ಸಲಹೆಗಳನ್ನೂ ಮಾಡಿರುವುದಿಲ್ಲ. ರಾಜ್ಯದ ಹಿತದೃಷ್ಟಿಯನ್ನು ಸಾಧಿಸುವ ಜವಾಬ್ದಾರಿ ಕೇವಲ ಆಡಳಿತ ಪಕ್ಷದೊಬ್ಬರದೇ ಅಲ್ಲ. ಅದು ವಿರೋಧ ಪಕ್ಷಗಳ ಜವಾಬ್ದಾರಿಯೂ ಹೌದು. ನಾಳೆಯ ದಿನ ಹೊರಗಡೆ ನೀವು ಕೇವಲ ಟೀಕೆಗಳಲ್ಲೇ ಕಾಲ ಕಳೆದವರು, ನೀವೇನು ರಾಜ್ಯ ಸರ್ಕಾರಕ್ಕೆ ಸೂಕ್ತ ಸಲಹೆಗಳನ್ನು ನೀಡಿದಿರಿ ಎಂದು ಜನತೆ ಕೇಳಿದರೆ ಆಗ ಇಲ್ಲಿಗೆ ಸದಸ್ಯರಾಗಿ ಬಂದವರು ತಲೆ ತಗ್ಗಿಸಬೇಕಾಗುವುದು. ಆದರೆ ಇಲ್ಲಿ ನಡೆದಿರತಕ್ಕ ಟೀಕೆಗಳೆಲ್ಲಾ ಅತ್ಯವಾದವುಗಳೆಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ.

ಛೇರ್ಮನ್:—ಮಾನ್ಯ ಸದಸ್ಯರ ವೇಳೆ ಮುಗಿಯಿತು. ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಸದಾಶಿವಪ್ಪ ಪಾಟೀಲ್:—ನನಗೆ ಇನ್ನು ಏರಡು ನಿಮಿಷ ವೇಳೆಯನ್ನು ಕೊಡಿ. ಅಪ್ಪರ್ ಕೃಷ್ಣಾ ಆಣೆಕಟ್ಟಿನ ಕೆಲಸ ನಡೆಯುತ್ತಿದೆ. ಅಲ್ಲಿ (ಎ) ಕ್ಲಾಸ್ ಮತ್ತು (ಬಿ) ಕ್ಲಾಸ್ ಕಂಟ್ರಾಕ್ಟರುಗಳನ್ನು ಉದ್ಧಾರ ಮಾಡುತ್ತಿದ್ದೀರೆಂದು,.....

ಛೇರ್ಮನ್:—ಮಾನ್ಯ ಸದಸ್ಯರು ದಯವಿಟ್ಟು ಕುಳಿತುಕೊಳ್ಳಬೇಕು,.....

ಶ್ರೀ ಸದಾಶಿವಪ್ಪ ಪಾಟೀಲ್:—ಆ ವಿಚಾರದಲ್ಲಿ ನಾನು ಒಂದೇ ವಿಷಯ ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಛೇರ್ಮನ್:—ಹಾಗಾದರೆ ಮಾನ್ಯ ಸದಸ್ಯರು ಕುಳಿತುಕೊಳ್ಳುವುದಿಲ್ಲವೇ ?

ಶ್ರೀ ಸದಾಶಿವಪ್ಪ ಪಾಟೀಲ್:—ಹಾಗಾದರೆ ನನ್ನದು ಒಂದು ಪಾಯಿಂಟಾಫ್ ಆರ್ಡರ್ ಇದೆ. ಅದೇನೆಂದರೆ ಈ ಸಭೆಯಲ್ಲಿ ಒಬ್ಬ ಸದಸ್ಯರಿಗೆ ಅಧ್ಯಕ್ಷರು ಇಷ್ಟಪಟ್ಟರೆ ಅರ್ಧಗಂಟೆ ಬೇಕಾದರೂ ವೇಳೆಯನ್ನು ಕೊಡಬಹುದು, ಇನ್ನು ಕೆಲವರಿಗೆ ೧೦ ನಿಮಿಷದಲ್ಲೆ ಭಾಷಣ ಮುಗಿಸಿ ಎನ್ನುವುದಕ್ಕೆ ಯಾವ ರೂಲ್ಸ್ ಇದೆ ಎಂಬುದನ್ನು ದಯವಿಟ್ಟು ತಿಳಿಸಬೇಕು.

ಛೇರ್ಮನ್:—ನಿಮ್ಮ ಪಾರ್ಟಿಯ ವಿಪ್ ೧೦ ಜನರ ಹೆಸರನ್ನು ಕೊಟ್ಟು ಆ ಹತ್ತು ಜನ ಸದಸ್ಯರಿಗೂ ತಲಾ ಅರ್ಧದು ನಿಮಿಷಗಳ ಕಾಲಾವಕಾಶವನ್ನು ಕೊಡಬೇಕೆಂದು ತಿಳಿಸಿದ್ದಾರೆ. ಆ ಪ್ರಕಾರ ತಮಗೆ ಮಾತನಾಡುವುದಕ್ಕೆ ಇದ್ದ ೫ ನಿಮಿಷದ ಅವಕಾಶಕ್ಕೆ ಬದಲು ೧೦ ನಿಮಿಷದ ಮೇಲೆ ತೆಗೆದುಕೊಂಡಿದ್ದೀರಿ. ೪-೩೦ಕ್ಕೆ ಮಂತ್ರಿಗಳು ಉತ್ತರ ಕೊಡುವುದಕ್ಕೆ ಅವಕಾಶ ಮಾಡಿಕೊಡಲಾಗಿದೆ. ಇನ್ನೂ ೩-೪ ಜನರು ಸದಸ್ಯರು ಮಾತನಾಡುವವರಿದ್ದಾರೆ. ಆದ್ದರಿಂದ ನಿಮಗೆ ಇನ್ನು ಅವಕಾಶವಿಲ್ಲ.

ಈಗ ಶ್ರೀ ಚಂದ್ರಕಾಂತ್ ಅವರು ತಮ್ಮ ಭಾಷಣವನ್ನು ಪ್ರಾರಂಭಮಾಡಬಹದೆಂದು ಹೇಳುತ್ತೇನೆ.

†SRI G. CHADRAKANTH (Bidar):—Mr. Chairman, Sir, while opposing the Demands placed before this House, I would like to offer certain suggestions. We are going to spend considerable amount over this Department; we have been spending huge amounts he itherto and when we look at the end of the year, I am really very much pained to see that the results are absolutely nil. The amount that we have spent has resulted in a waste. I would like to give concrete instances

(Sri G. CHANDRAKANTH)

one by one. We have been speaking here and what we speak is going on record and the records are building, but the suggestions given by us are neither considered nor looked into. Therefore we are a bit reluctant to make any suggestions and we feel that we are wasting our precious time and precious money of the people. Therefore, Sir, within the allotted time I would like to say a few words with concrete instances. I would also like to bring to your notice the way in which precious public money is being wasted in this department.

In regard to a bridge that has been undertaken to be constructed in Bidar District which is estimated to cost about Rs 25 lakhs, the work has been entrusted to one Lakshmi Chand Bhalchand who has not at all taken up any bridge construction works previously. No doubt, he is a big contractor, but he has so far not taken up any work of constructing bridges, as far as I know. Just because he is in the good books of the Ministers, he has been entrusted with this work. At one time, he had constructed a small bridge which all of a sudden fell down and the reasons he gave was that because of the rain, lightning and thunder, etc., it fell down and he has claimed compensation for the same to the tune of Rs. one lakh and odd. In fact, I went to the spot with the Assistant Engineer and enquired of the people as to whether there was any rain. I was told that there was neither rain nor lightning. I had put a question in this regard also. But, so far, it has not come up. I always see that whatever questions I put, do not come up before this House and after the session is concluded the repies are sent to my residence. The Government has also decided to pay the compensation claimed by the said contractor. Whenever I ask the Government as to whether this contractor has undertaken any bridge construction work, they say, he has undertaken such works. To my knowledge, Sir, he has not taken up such works at any time. Only to favour him, the work of constructoin of this bridge in Bidar District has been entrusted to this contractor.

In regard to minor tanks, a good number of tanks have been constructed, but not even a drop of water is stored in those tanks. Out of the command area of nearly 100 acres of the land, not even 5 acres of land are being irrigated.

Further, Sir, God alone knows whether the Government has constructed any pick-ups in Bidar District. As far as I know, pick-ups have not at all been constructed.

Then with regard to roads, the Government is not at all undertaking construction of new roads in Bidar District. Not only that, Sir, the Government is not even making efforts to repair the existing roads in Bidar District. The District of Bidar is completely neglected because of the reason that during the last general elections four seats

in the Assembly elections went to opposition parties. If this is the treatment shown towards Bidar District, then I feel, Sir, democracy is in peril.

I would like to appeal to the Hon. Chief Minister not to adopt this sort of attitude to neglect Bidar District which has been declared as a backward area. In spite of my repeated requests and suggestions to the Government to take up new works in Bidar District, Government has not given its attention to take up any works there. Sir, in States like Andhra Pradesh and Maharashtara, in the districts that have been declared as backward, the Government has been taking up works by special programmes to see that those backward districts are brought onpar with other districts in the tate. I would, therefore. appeal to the Hon. Chief Minister to at least take up some new works in Bidar District, so as to bring it on par with other districts of the State.

Then, with regard to unemployed diploma holders and Engineers in Civil and Mechanical, who are unemployed right from 1966, the Government has not done anything. Students are losing their interest to join the Engineering course and this year the Government had to close down the civil engineering clases in view of the fact that students were not forthcoming. I feel that these unemployed graduates should be encouraged and every priority should be given tothem to take upworks They shouid be entrusted with big works in Upper Krishna Project etc, and thus employment opportunities should te provided to those unemployed engineers. The Government has no doubt issued a circular stating that they sh uld be given preference while giving contracts etc. But the real position is that only the big contractors who have influence get these contracts. Only some uneconomical works are being entrusted to these engineers and diploma holders. Since there is no good incentive for these diploma holders and engineers, students are not coming forth to join the Civil Engineering classes.

In conclusion, I oppose these Demands and once again appeal to the Government to take up new works in Bidar District which has been declared as a backward area and see that it is brought on par with other districts in the State.

ಶ್ರೀ ಎ ಮುನಿಯಪ್ಪ (ಬಾಗೆಪಲ್ಲಿ) — ಮಾನ್ಯ ಅಧ್ಯಕ್ಷರೇ, ಈ ದಿವಸ ನಮ್ಮ ಮುಂದೆ ಇರತಕ್ಕ ಲೋಕೋಪಯೋಗಿ ಇಲಾಖೆಯ ಡಿಮ್ಯಾಂಡ್ ಮೇಲೆ ಮಾತನಾಡುತ್ತಾ, ಕೆಲವು ಅಂಶಗಳನ್ನು ಈ ಸಭೆಯ ಗಮನಕ್ಕೆ ತರಲಿಚ್ಚಿಸುತ್ತೇನೆ.

ಈಗತಾನೇ ಶ್ರೀಮಾನ್ ಶಿವಪ್ಪನವರು ಹೇಳಿದರು ಇದು ಎನಮಿ ನಂಬರ್ ಒನ್ ಎಂದು ೧ ಈ ಪ್ರಜಾಪ್ರಭುತ್ವದಲ್ಲಿ ಈಗ ಏನಾಗಿದೆ ಎಂದರೆ ೧೯೪೭ ರಿಂದೀಚೆಗೆ ಇದು ಇಲಾಖೆಯಿಂದ ಇನ್ನೊಂದು ಇಲಾಖೆಗೆ ಬೆಳೆಯುತ್ತಾ ಇದೆ ಎನು ವುದನು ನಾವು ಇಲ್ಲಿ ನೋಡುತ್ತಾ ಇದ್ದೇವೆ. ಆದರೆ ಈ ಒಂದು ಇಲಾಖೆಯನ್ನು ಕನ್ನಡದಲ್ಲಿ ಮರಾಮತ್ ಶಾಖೆ ಎಂದು ಹೇಳುತ್ತಾರೆ. ಈಗ '' ಮರಾಮತ್ ಶಾಖೆ '' ಹೋಗಿ '' ಮುಲಾಮತ್ ಶಾಖೆ '' ಆಗಿ ಹೋಗಿದೆ. ಏಕಕ್ಕೆಂದರೆ ಈ ಒಂದು ಇಲಾಖೆಯಲ್ಲಿ ಆಗತಕ್ಕಂಥ ಕೆಲಸವನ್ನು ನೋಡಿದಲೆ ಹಿಂದಿನ ಕಾಲದಲ್ಲಿ ನಡೆಯುವಂಥ ಕೆಲಸಕ್ಕೂ ಈಗ ಕಂಟ್ರಾಕ್ಟರ್ಸ್ ಮಾಡತಕ್ಕಂಥ ಕೆಲಸವನ್ನು ನೋಡಿದರೆ ಬಹಳ ಅಜಗಜಾಂತರ ವ್ಯತ್ಯಾಸ ಇದೆ ಎಂದು ಹೇಳಬಹುದು.

(ಶ್ರೀ ಎ. ಮುನಿಯಪ್ಪ)

ನಂದಿ ಬೆಟ್ಟದಲ್ಲಿ ಇಟ್ಟಿಗೆಯಿಂದ ಮೊದಲು ಕಟ್ಟಡಗಳನ್ನು ಕಟ್ಟುತ್ತಿದ್ದರು. ಈಗ ಸಿಮೆಂಟು ಸೇರಿಸಿ ಕಟ್ಟಬೇಕೆಂದು ಹೇಳಿದರೆ ಸಿಮೆಂಟಿಗೆ ಬದಲು ಬೂದಿ ಬೆರಸಿಕೊಂಡು ಗೂಡೆಗಳನ್ನು ಕಟ್ಟುತ್ತಿದ್ದಾರೆ. ಇಂತಹ ಒಂದು ವಿಚಾರವನ್ನು ನಾನು ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ತರಬೇಕೆಂದು ನಾನು ಕೋಲಾರ ಜಿಲ್ಲೆಗೆ ಪ್ರವಾಸ ಬರಬೇಂದು ಅವರನ್ನು ಕೋರಿದ್ದೆ. ಅವರನ್ನು ಅಲ್ಲಿಗೆ ಕರೆದುಕೊಂಡು ಹೋಗಿ ಇದಕ್ಕೆ ತಕ್ಕ ಪರಿಹಾರವೇನು ಎಂದು ಕೇಳೋಣ ಎಂದಿದ್ದೆ. ಆದರೆ ನಮ್ಮ ಮಂತ್ರಿಗಳಾದ ಶ್ರೀಮಾನ್ ಲಕ್ಕಪ್ಪನವರು ಎಲ್ಲ ಕಡೆಗಳಿಗೂ ತಾವು ಹೇಳಿದಂತೆ ಬರಲು ಆಗುವುದಿಲ್ಲ. ಈ ಡಿಸ್ಟ್ರಿಕ್ಟ್‌ನ ಹಾಗೂ ಎಲ್ಲ ತಾಲ್ಲೂಕುಗಳ ಪರಿಶೀಲನೆಗಳನ್ನು ಮಾಡಿದ ಮೇಲೆ ಬರುತ್ತೇನೆಂದು ಹೇಳಿ ಮೂರು ವರ್ಷಗಳಾದರೂ ನಮ್ಮ ಗುಡಿಬಂಡೆ ಹಾಗೂ ಬಾಗೇಪಲ್ಲಿ ತಾಲ್ಲೂಕುಗಳ ಕಡೆ ಪ್ರವಾಸ ಬರಲೇ ಇಲ್ಲ. ನಮ್ಮ ಈ ತಾಲ್ಲೂಕುಗಳಿಂದ ಎಷ್ಟೋ ಸಂಸಾರಗಳು ಆಂಧ್ರಕ್ಕೆ ವಲಸೆ ಹೋಗುತ್ತಿವೆ. ನಮ್ಮ ಮಂತ್ರಿಗಳಿಗೆ ಇದರ ಕಡೆಗೆ ಗಮನವೇ ಇಲ್ಲ ಎಂದು ಕಾಣುತ್ತೆ. ಇವರು ಯಾವುದೋ ಕೆಲವು ತಾಲ್ಲೂಕ್‌ಗಳನ್ನು ಮನತಪಲ್ಲಿ ಮಾಡಿಕೊಂಡದಂತೆ ಮಾಡಬಾರದು. ಎಲ್ಲ ಡಿಸ್ಟ್ರಿಕ್ಟ್‌ಗಳಿಗೂ ಹಾಗೂ ಗ್ರಾಮಾಂತರ ಪ್ರದೇಶಗಳ ಕಡೆಗೂ ನಿಗಾ ಕೊಡಬೇಕು. ಇನ್ನು ಮುಂದೆ ಇಂತಹ ಕೆಲಸಗಳನ್ನು ಮಾಡುತ್ತಾರೆಂದು ಭಾವಿಸುತ್ತೇನೆ.

ಶ್ರೀಮಾನ್ ಶಿವಪ್ಪನವರು ಕಂಟ್ರಾಕ್ಟರುಗಳನ್ನು 'ಎ' ಕ್ಲಾಸು ಹಾಗೂ 'ಬಿ' ಕ್ಲಾಸು ಎಂದು ರಿಜಿಸ್ಟರ್ ಮಾಡುವುದರಲ್ಲಿ ಬಹಳ ಅನ್ಯಾಯವಾಗುತ್ತಿದೆ ಎಂದು ಹೇಳಿದರು. ಅವರ ಹೇಳಿದಂತೆ ಬಡ ಹರಿಜನರು ನಾಲ್ಕನೆ ಹಾಗೂ ಐದನೆ ದರ್ಜೆಯಲ್ಲಿ ರಿಜಿಸ್ಟರು ಮಾಡಿಸಿ ಕೊಳ್ಳಬೇಕೆಂದು ಪ್ರಯತ್ನ ಮಾಡಿದರೂ ಅವರ ಹೆಸರುಗಳೇ ಇಲ್ಲದಂತೆ ಮಾಡುತ್ತಾರೆ. ಕಂಟ್ರಾಕ್ಟರುಗಳು ಎಂದು ಮುದ್ರೆ ಒತ್ತಿಸಿಕೊಳ್ಳಬೇಕಾದರೆ ಬಹಳ ಕಷ್ಟವಾಗಿದೆ. ಇದರಲ್ಲಿ ಕಂಟ್ರಾಕ್ಟ್‌ದಾರರುಗಳಾಗುವವರು ಸಾಲ್ವೆನ್ಸಿ ಸರ್ಟಿಫಿಕೇಟು ಬೇರೆ ಕೊಡಬೇಕು. ಮತ್ತು ಇದಾದ ಮೇಲೆ ಲೈಸೆನ್ಸ್ ತೆಗೆದುಕೊಳ್ಳಬೇಕು. ಈಗ 'ಎ' ಕ್ಲಾಸ್ 'ಬಿ' ಕ್ಲಾಸು ಎಂದು ಐದಾರು ಕ್ಲಾಸುಗಳು, ಕಂಟ್ರಾಕ್ಟ್‌ದಾರರುಗಳು ಎಂದು ಮಾಡುತ್ತಿರುವಂತೆ ಇನ್ನೊಂದು ಹೊಸ ರೀತಿಯಾದ ಕಂಟ್ರಾಕ್ಟ್‌ದಾರರುಗಳು ಉತ್ಪನ್ನವಾಗಿದ್ದಾರೆ. ಅವರುಗಳು ಯಾರೆಂದರೆ ಸಬ್ ಓವರ್‌ಸೀಸಿರುಗಳು ಹಾಗೂ ಅಸಿಸ್ಟೆಂಟು ಇಂಜಿನೀಯರುಗಳು ಎನ್ನುವಂತಹ ಕಂಟ್ರಾಕ್ಟ್‌ದಾರುಗಳು ಎಲ್ಲ ಕಡೆಯಲ್ಲಿಯೂ ಬೆಳೆಯುತ್ತಿದ್ದಾರೆ. ಇವರೇ ಬಿಲ್ಲುಗಳನ್ನು ತಯಾರು ಮಾಡಿಕೊಂಡು ಹೆಚ್ಚು ರೇಟುಗಳನ್ನು ಹಾಕಿಸಿಕೊಂಡು ಅಸಿಸ್ಟೆಂಟು ಇಂಜಿನೀಯರುಗಳ ಮೂಲಕ ಕೆಲಸಗಳನ್ನು ಮಾಡುತ್ತೇವೆಂದು ಹೇಳಿ ಮಾಡುತ್ತಿದ್ದಾರೆ. ಇದನ್ನು ಸರಕಾರ ತಪ್ಪಿಸಬೇಕು. ಇನ್ನು ಮಂಜೇನಹಳ್ಳಿಯಲ್ಲಿ ಪೋಲೀಸು ಕ್ವಾರ್ಟರುಗಳನ್ನು ಡಿಪಾರ್ಟ್‌ಮೆಂಟು ಮೂಲಕ ಕಟ್ಟಬೇಕು ಎಂದು ಮಾಡಿಕೊಂಡು ಇಲ್ಲಿ ಕಂಟ್ರಾಕ್ಟರಿಗೆ ಪರ್ಮಿಷನ್ ಕೊಟ್ಟು ಕೆಲಸದ ನಂತರ ೩೦ ಸಾವಿರ ರೂಪಾಯಿಗಳ ಬಿಲ್ಲನ್ನು ಕೊಟ್ಟರು. ಆದರೆ ಇಲ್ಲಿ ಕ್ವಾರ್ಟರ್ಸ್‌ಗಳನ್ನು ಕಟ್ಟಿದ ಮೇಲೆ ಇಲ್ಲಿ ಕಟ್ಟಿರುವ ಬಿಲ್ಡಿಂಗು ಸರಿಯಾಗಿದೆಯೇ ಇಲ್ಲವೇ ಎಂದು ನೋಡಲು ಪಾಯವನ್ನು ಚೆಕ್‌ಮಾಡ ಬೇಕೆಂದು ಒಂದು ಆರ್ಡರು ಕಂಟ್ರಾಕ್ಟರರ ಮೇಲೆ ಚೀಫ್ ಸೆಕ್ರಟರಿಯವರು ಕೊಟ್ಟಿದ್ದಾರೆ. ಇದರ ಮೇಲೆ ಈಗ ಚಿಕ್ಕಬಳ್ಳಾಪುರದ ಮುನ್‌ಸೀಫ್ ಕೋರ್ಟಿನಲ್ಲಿ ಕೇಸು ನಡೆಯುತ್ತಿದೆ. ಇದನ್ನು ಮೊದಲು ಮಾಡ ಬೇಕೆಂದು ಅಧಿಕಾರಿಗಳು ಅವಕಾಶ ಕೊಟ್ಟು ಇದಕ್ಕೆ ೩೦ ಸಾವಿರ ರೂಪಾಯಿಗಳ ಬಿಲ್ಲಿನ ಮೇಲೆ ಹಣವನ್ನು ಕೊಟ್ಟ ಮೇಲೆ ಪುನಃ ಈ ರೀತಿ ಮತ್ತೆ ಆರ್ಡರು ಕಳುಹಿಸುವುದು ಎಂದರೆ ಏನರ್ಥ? ಇಂತಹ ಬೇಜವಾಬುದಾರಿ ಯುತವಾದ ಆರ್ಡರನ್ನು ಕಳುಹಿಸಿದ ಅಧಿಕಾರಿಗಳ ಮೇಲೆ ಸರಕಾರ ಏಕೆ ತಕ್ಕ ಕಾರ್ಯ ಕ್ರಮ ತೆಗೆದುಕೊಳ್ಳಬಾರದು ಎಂದು ಕೇಳುತ್ತೇನೆ ಮತ್ತು ಅಂತಹ ಅಧಿಕಾರಿಗಳಿಂದಲೇ ಈ ಹಣವನ್ನು ಏತಕ್ಕೆ ವಸೂಲು ಮಾಡಬಾರದು? ಇದಕ್ಕಾಗಿ ಸರಕಾರ ಕೋರ್ಟಿಗೆ ಹೋಗಿ ವೃಥಾ ಹಣವನ್ನೇಕೆ ಖರ್ಚು ಮಾಡಬೇಕು?

ಇಷ್ಟು ಹೇಳಿ ನನ್ನ ಮಾತುಗಳನ್ನು ಮುಗಿಸಿ ಅಧ್ಯಕ್ಷರಿಗೆ ನಾನು ವಂದಿಸುತ್ತೇನೆ.

† ಶ್ರೀ ಎಸ್. ಬಂಗಾರಪ್ಪ (ಸೊರಬ) :—ಮಾನ್ಯ ಅಧ್ಯಕ್ಷರೇ, ಈ ಸದನದ ಅನೇಕ ಮಾನ್ಯ ಸದಸ್ಯರುಗಳು ಈಗಾಗಲೇ ಸರಕಾರದವರು ಮಂಡಿಸಿರತಕ್ಕ ನೂರಾರು ಕೋಟಿ ರೂಪಾಯಿಗಳ ಬೇಡಿಕೆಯನ್ನು ವಿರೋಧ ಮಾಡುತ್ತಾ ಮಾತನಾಡಿದ್ದಾರೆ. ಈ ಸರಕಾರದ ಕೈಯ್ಯಲ್ಲಿ ಇಂತಹ ಲೋಕೋಪಯೋಗಿ ಇಲಾಖೆಗಾಗಿ ನೂರು ಕೋಟಿ ರೂಪಾಯಿಗಳಷ್ಟು ಹಣವಲ್ಲದೆ ಇನ್ನೂ ಕಂತು ಕಂತುಗಳಲ್ಲಿ ಬೇರೆ ಕೊಡಲಾಗಿದೆ. ಈ ರೀತಿ ಹಣ ಕೊಡಬೇಕೆಂದು ಕೇಳಿದಾಗ ಇಲ್ಲಿನ ಸದಸ್ಯರು ಸರಕಾರದ ದುಂದು ವೆಚ್ಚ, ಆಡಳಿತ ಸಡಿಸತಕ್ಕ ವೈಖರಿ, ಸ್ವಾರ್ಥ ಪರರ ಹಾಗೂ ಲಂಚಕೋರ ಅಧಿಕಾರಿಗಳ ಬಗ್ಗೆ ಹೇಳಿದಂತಹ ವಿಚಾರ ಗಳನ್ನು ಇಲ್ಲಿಯ ವರೆಗೆ ಸರಕಾರದವರು ಏನಾದರೂ ವಿಚಾರ ಮಾಡಿದ್ದಾರೆಯೇ? ಇಷ್ಟೊಂದು ಕೋಟಿ

ರೂಪಾಯಿಗಳನ್ನು ರಾಜ್ಯಾಂಗಬದ್ಧವಾಗಿ ಪಡೆಯಬೇಕೆಂಬ ಕಾರಣದಿಂದ ಬೇಡಿಕೆಗಳ ರೂಪದಲ್ಲಿ, ಪಂಚ ವಾರ್ಷಿಕ ಯೋಜನೆಗಳ ಹೆಸರಿನಲ್ಲಿ ಹಾಗೂ ಇನ್ನೂ ಹಲವಾರು ಬಾಬುಗಳ ಹೆಸರಿನಲ್ಲಿ ತಂದು ನಮ್ಮಲ್ಲಿ ನಂಬಿಕೆಯನ್ನು ಹುಟ್ಟಿಸುವ ಒಂದು ಆಟ ಹೂಡಿದ್ದಾರೆ. ಸರಕಾರದವರು ಮಾಡುತ್ತಿರುವ ಕಾರ್ಯಗಳು ಇವರ ಆಡಳಿತದ ವೈಖರಿ ಮತ್ತು ಇವರು ನಡೆಯುವ ದಾರಿ ಸರಿಯಾಗಿದ್ದರೆ ನೂರಾರು ಕೋಟಿಗಳಲ್ಲ ಸಾವಿರಾರು ಕೋಟಿಗಳನ್ನು ಬೇಕಾದರೂ ನಮ್ಮ ಜನತೆ ಕೊಡುತ್ತಿದ್ದರು. ಈ ದೇಶದ ಜನರಲ್ಲಿ ಅಂತಹ ನಂಬಿಕೆಯನ್ನುಂಟು ಮಾಡುವ ರೀತಿಯಲ್ಲಿ ಕೆಲಸಮಾಡಬೇಕಾಗಿತ್ತು ಎನ್ನುವುದನ್ನು ಇಲ್ಲಿ ಸರಕಾರದ ಗಮನಕ್ಕೆ ತರಲು ಇಚ್ಛಿಸುತ್ತೇನೆ. ನಾನು ಮೊನ್ನೆ ದಿನ ಮಹಜನ್ ಕಮಿಷನ್‌ನ ನಿಯೋಗದ ಜೊತೆಯಲ್ಲಿ ನಾನು ಕೂಡ ದೆಹಲಿಗೆ ಹೋಗಿದ್ದೆ. ಅಲ್ಲಿ ಮಹಾತ್ಮ ಗಾಂಧಿಯವರು ಒಡನಾಡಿಗಳಾಗಿದ್ದ ಶ್ರೀಮಾನ್ ಆಚಾರ್ಯ ಕೃಪಾಲನಿ ಯವರೊಂದಿಗೆ ನಾವು ನಮ್ಮ ಕೆಲವು ಸ್ನೇಹಿತರುಗಳೊಡನೆ ಭೇಟಿ ಮಾಡಿದ್ದೆವು. ಅವರು ಒಂದೇ ಒಂದು ಮಾತನ್ನು ಹೇಳಿದರು. ಅವರು ಹೇಳಿದ ಒಂದೇ ಒಂದು ವಾಕ್ಯವನ್ನು ಇಲ್ಲಿ ಹೇಳುತ್ತೇನೆ :—

> 'Is there a Government in this Country? Is there a people's Government in this Country? If this is a Government, then this Government is a ruled not only by foolish people but also rogues.'

ಎನ್ನುವ ಮಾತನ್ನು ಹೇಳಿದರು. ಇದಕ್ಕಿಂತ ಹೆಚ್ಚಾಗಿ ನಾನು ಬೇರೆ ಯಾವ ಒಂದು ಉದಾಹರಣೆಯನ್ನೂ ಇಲ್ಲಿ ಕೊಡುವುದಕ್ಕೆ ತಯಾರಾಗಿಲ್ಲ. ಮಹಾತ್ಮ ಗಾಂಧಿಯವರೆ ನಾದರೂ ಜೀವಂತ ವಾಗಿದ್ದರೆ ನೀವು ಮಾಡ ತಕ್ಕ ಕೆಲಸಗಳನ್ನು ನೋಡಿ ಅವರು ಅಮರಣಾಂತ ಉಪವಾಸ ಮಾಡಿ ತೀರಿ ಹೋಗುತ್ತಿದ್ದರು ಎನ್ನುವುದು ನನ್ನ ವೈಯ್ಯಕ್ತಿಕ ಅಭಿಪ್ರಾಯ.

ಈ ರಾಜ್ಯದ ಆಡಳಿತ ಯಾವ ರೀತಿ ನಡೆಯುತ್ತಿದೆ ಎಂಬುದನ್ನು ನಾವು ನೋಡುತ್ತಿದ್ದೇವೆ. ಬಡವರ ಹೆಸರಿನಲ್ಲಿ ಬ್ರಿಡ್ಜ್‌ಗಳನ್ನು ಕಟ್ಟಿಸುತ್ತಿದ್ದೀರಿ, ರೋಡ್‌ಗಳನ್ನು ಮಾಡಿಸುತ್ತಿದ್ದೀರಿ, ಕೆರೆ ಗಳನ್ನು ಕಟ್ಟಿಸುತ್ತಿದ್ದೀರಿ. ಮಾನ್ಯ ದೊಡ್ಡಮೇಟಿಯವರು ಸಣ್ಣ ನೀರಾವರಿ ಯೋಜನೆಗಳ ಖಾತೆ ಯನ್ನು ವಹಿಸಿಕೊಂಡಿದ್ದಾರೆ.ಅವರ ಬಗ್ಗೆ ನನಗೆ ಪೂಜ್ಯ ಭಾವನೆ ಇದೆ ಈ ಜನರ ಕೈಯಲ್ಲಿ ಅವರು ಸಿಕ್ಕಿಕೊಂಡಿದ್ದಾರೆ. ಅವರು ಎಷ್ಟು ಒಳ್ಳೆಯತನದಿಂದ ಕೆಲಸ ಮಾಡಬೇಕೆಂದರೂ ಕೂಡ ಅವರಿಗೆ ಸಾಧ್ಯವಾಗುತ್ತಿಲ್ಲ. ಅವರ ಕಥೆ ಮುಗಿದುಹೋಗಿದೆ. ಅವರು ಇನ್ನು ಉದ್ಧಾರವಾಗುವುದಿಲ್ಲ. ಇವತ್ತು ಒಂದು ಕೆಲಸವಾಗಬೇಕಾದರೆ ಯಾವ ಕಂಟ್ರಾಕ್ಟರಿಗೆ ಆ ಕೆಲಸ ಕೊಡಬೇಕೆಂಬುದು ಮೊದಲೇ ನಿರ್ಧಾರವಾಗಿರುತ್ತದೆ. ಈ ರೀತಿ ನಿರ್ಧಾರವಾದ ಮೇಲೆ ಟೆಂಡರ್ ಕರೆಯುತ್ತಾರೆ. ಯಾವ ರೇಟಿ ನಲ್ಲಿ ಕೆಲಸ ಕೊಡಬೇಕೆಂದು ಮೊದಲೇ ಮಾತುಕತೆಯಾಗಿರುತ್ತದೆ. ಇವತ್ತು ಮಲೆನಾಡು ಪ್ರದೇಶವಾದ ಶಿವಮೊಗ್ಗ ಜಿಲ್ಲೆಯಲ್ಲಿ ಅನೇಕ ಕೆರೆಗಳು ಹೂತುಹೋಗಿವೆ; ಚಿಕ್ಕಮಗಳೂರು, ಹಾಸನ, ಧಾರವಾಡ, ಕಾರವಾರ ಮುಂತಾದ ಜಿಲ್ಲೆಗಳಲ್ಲಿಯೂ ಸಹ ಇದೇ ಪರಿಸ್ಥಿತಿಯಾಗಿದೆ. ಬೇಸಿಗೆಯಲ್ಲಿ ನೀರೆಲ್ಲಾ ಒಣಗಿ ಹೋಗಿ ಬಿರುಕು ಬಿಟ್ಟಿರುತ್ತದೆ ಅಂತಹ ಕೆರೆಗಳಲ್ಲಿ ಹೂಳು ತೆಗೆಸಿ ಸ್ವಚ್ಛ ಮಾಡಿಸುವ ಬಗ್ಗೆ ಒಂದು ಯೋಜನೆಯನ್ನು ತಯಾರು ಮಾಡಿ ಎಂದು ನಾನು ಮೂರು ವರ್ಷದಿಂದಲೂ ಕೂಡ ಹೇಳುತ್ತಿದ್ದೇನೆ. ಹೋದ ವರ್ಷ ಈ ಬಗ್ಗೆ ಒಂದು ಹೊಸ ಯೋಜನೆ ಕೈಕೊಳ್ಳುತ್ತೇವೆಂದು ಮಾನ್ಯ ಮಂತ್ರಿ ಗಳು ಹೇಳಿದ್ದರು. ಆದರೆ ಕೈಕೊಳ್ಳಲಿಲ್ಲ. ಈ ಸಲ ಉತ್ತರ ಕೊಡುವಾಗ ಏನು ಹೇಳುತ್ತಾರೋ ಕೇಳಬೇಕಾಗಿದೆ. ವಿರೋಧ ಪಕ್ಷದ ಸದಸ್ಯರು ಇರುವ ಕ್ಷೇತ್ರದಲ್ಲಿ ಹೆಚ್ಚಿನ ಕೆಲಸವಾಗುತ್ತಿಲ್ಲ ಎಂಬುದನ್ನು ಈಗಾಗಲೇ ಮಾತನಾಡಿದಂತಹ ಶ್ರೀಮಾನ್ ನಾಗಪ್ಪನವರು, ಶ್ರೀಮಾನ್ ಚಂದ್ರಕಾಂತ ಅವರು ಹೇಳಿದ್ದಾರೆ. ಆರೋಗ್ಯ ಖಾತೆಯ ಉಪ ಮಂತ್ರಿಗಳಾದ ಶ್ರೀ ಬಸವಣ್ಣಪ್ಪನವರ ಕ್ಷೇತ್ರದಲ್ಲಿ ಅನೇಕ ಹೆಲ್ತ್‌ಸೆಂಟರ್‌ಗಳು ಪ್ರಾರಂಭವಾಗಿವೆ; ಮಾನ್ಯ ಉಪ-ಮಂತ್ರಿಗಳಾದ ಪರಮೇಶ್ವರಪ್ಪನವರ ಕ್ಷೇತ್ರವಾದ ಷಿಕಾರಿಪುರದಲ್ಲಿ ಅನೇಕ ಕೆಲಸಗಳಾಗಿವೆ ಈ ಮಂತ್ರಿ ಗಳ ಪಕ್ಕದ ಕ್ಷೇತ್ರವಾದ ನನ್ನ ಕ್ಷೇತ್ರದಲ್ಲಿ ಅಂದರೆ ಸೊರಬದಲ್ಲಿ ಯಾವ ಕೆಲಸಗಳೂ ಸಹ ಆಗಿಲ್ಲ. ಈ ವಿಚಾರ ದಲ್ಲಿ ಅಂಕಿಅಂಶಗಳನ್ನು ಸಹ ಕೊಡುವುದಕ್ಕೆ ತಯಾರಿದ್ದೇನೆ. ಆಲ್ಲಿ ಇವರು ಹೇಳಿದಂತೆ ಕೇಳುವ ಅಧಿಕಾರಿಗಳು ಇದ್ದಾರೆ ಮತ್ತು ಅಧಿಕಾರ ತಮ್ಮ ಕೈಯಲ್ಲಿ ಇದೆ ಎಂಬ ಉದ್ದೇಶದಿಂದ ತಮಗೆ ಬೇಕಾದ ಕಡೆ ಕೆಲಸಗಳನ್ನು ಮಾಡಿಸುತ್ತಿದ್ದಾರೆ; ತಮಗೆ ಅನುಕೂಲವಾಗುವಂತಹ ಕಾನೂನುಗಳನ್ನು ಅಮಲಿನಲ್ಲಿ ಕೊಟ್ಟಿದ್ದಾರೆ. ಈ ರೀತಿ ಆಡಳಿತದ ದುರುಪಯೋಗ ಇನ್ನು ಎಷ್ಟು ದಿವಸ ನಡೆಯುತ್ತದೋ ನೋಡೋಣ ಎಂದು ಜನರು ವಿಚಾರ ಮಾಡುತ್ತಿದ್ದಾರೆ. ಸ್ವಾರ್ಥಕ್ಕಾಗಿ ಕೆಲಸ ಮಾಡುವ ಮತ್ತು ಲಂಚ ತೆಗೆದುಕೊಳ್ಳುವ ಅಧಿಕಾರಿಗಳು ಇವತ್ತು ಇದ್ದಾರೆ. ಮಂತ್ರಿಮಂಡಲದಲ್ಲಿಯೂ ಕೆಲವರು ಇರಬಹುದೆಂದು ಕಾಣುತ್ತದೆ. ಆ ಬಗ್ಗೆ ಯೋಚನೆ ಮಾಡಬೇಕಾಗಿದೆ. ಇವತ್ತು ಒಂದು ಕಾಲ್-ಅಟೆಂಷನ್ ನೋಟೀಸ್ ಕೊಟ್ಟರೆ ಆ ಬಗ್ಗೆ ಅಧಿಕಾರಿಗಳು ಏನು ವರದಿ ತಯಾರು ಮಾಡಿ ಕೊಡುತ್ತಾರೋ ಅದನ್ನು ಇಲ್ಲಿ ತಂದು ಮಂತ್ರಿಗಳು ಓದಿಬಿಡುತ್ತಾರೆ. ಆ ವರದಿ

(ಶ್ರೀ ಎಸ್. ಬಂಗಾರಪ್ಪ)

ಸತ್ಯ ಇದೆಯೋ, ಅಸತ್ಯದಿಂದ ಕೂಡಿದೆಯೋ ಎಂಬುದನ್ನು ಮಂತ್ರಿಗಳು ಪರಿಶೀಲನೆ ಮಾಡುವುದಿಲ್ಲ. ಅಧಿಕಾರಿಗಳ ಕೈಕೆಳಗೆ ಗುಮಾಸ್ತಗಿರಿ ಮಾಡುವುದಕ್ಕೆ ಈ ಮಂತ್ರಿಗಳು ಇದ್ದಾರೆ. ಮಂತ್ರಿಗಳು ಈ ಸಭೆಯಲ್ಲಿ ಅಸತ್ಯದ ವಿಚಾರಗಳನ್ನು ಹೇಳಬಾರದು ಎಂದು ನಾನು ಅನೇಕ ಸಲ ಹೇಳಿದ್ದೇನೆ. ಆದರೂ ಕೂಡ ಮಂತ್ರಿಗಳು ಅಧಿಕಾರಿಗಳು ಬರೆದುಕೊಟ್ಟ ವರದಿಯನ್ನು ಓದಿಬಿಡುತ್ತಾರೆ. ವಿದ್ಯುಚ್ಛಕ್ತಿಯ ಇಲಾಖೆಯ ಬಗ್ಗೆ ಒಂದು ವಿಷಯ ಹೇಳುತ್ತೇನೆ. ಶ್ರೀ ಕೆ. ಎಸ್. ಸುಬ್ರಹ್ಮಣ್ಯ ಎಂಬುವರನ್ನು ಎರಡು ಸಾವಿರ ರೂಪಾಯಿಗಳ ಗ್ರೇಡ್‌ನಲ್ಲಿ ಸ್ಪೆಷಲ್ ಚೀಫ್ ಇಂಜಿನಿಯರ್ ಆಗಿ ನೇಮಕ ಮಾಡಿದ್ದಾರೆ. ಇವರು ಈಗಾಗಲೇ ೧೮೦೦ ರೂಪಾಯಿಗಳ ಸಂಬಳ ಪಡೆಯುತ್ತಿದ್ದಾರೆ. ಇವರು ಮಂತ್ರಿಮಂಡಲದಲ್ಲಿರುವ ಒಬ್ಬ ಮಂತ್ರಿಗಳಿಗೆ ಬೇಕಾಗಿರುವ ವ್ಯಕ್ತಿಯಾದ್ದರಿಂದ ಈ ಪೋಸ್ಟ್‌ನ್ನು ಕೊಟ್ಟಿದ್ದಾರೆ. ಶ್ರೀ ಕೆ ತಿಮ್ಮಯ್ಯ, ಶ್ರೀ ಷರೀಫ್ ಎಂಬ ಇಂಜಿನಿಯರ್‌ಗಳು ಶ್ರೀ ಸುಬ್ರಹ್ಮಣ್ಯಂ ಅವರಿಗಿಂತ ಸೀನಿಯರ್ ಆಗಿದ್ದರೂ ಕೂಡ ಇವರಿಗೆ ಆ ಪೋಸ್ಟ್ ಕೊಡದೆ ಸುಬ್ರಹ್ಮಣ್ಯಂ ಎಂಬುವರಿಗೆ ಕೊಟ್ಟಿದ್ದಾರೆ. ಇದು ಏನು ತೋರಿಸುತ್ತದೆ ಎಂದರೆ ತಮಗೆ ಬೇಕಾದಂಥ ಜನರನ್ನು ಇಂತಹ ಪೋಸ್ಟ್‌ಗಳಲ್ಲಿ ಇಟ್ಟರೆ ಮುಂದೆ ಅವರನ್ನು ತಮ್ಮ ಸ್ವಾರ್ಥಕ್ಕಾಗಿ ಉಪಯೋಗಿಸಿಕೊಳ್ಳಬಹುದು ಮತ್ತು ತಮಗೆ ಬೇಕಾದಂಥ ಕೆಲಸಗಳನ್ನು ಮಾಡಿಸಿಕೊಳ್ಳಬಹುದು ಎಂಬ ಕಾರಣದಿಂದ ಈ ರೀತಿ ಮಾಡುತ್ತಿದ್ದಾರೆ. ತಮ್ಮ ಒಂದು ಅನುಕೂಲಕ್ಕಾಗಿ ಇವತ್ತು ಸೀನಿಯಾರಿಟಿಯನ್ನು ಕಡೆಗಣಿಸಿ ತಮಗೆ ಬೇಕಾದವರಿಗೆ ಪ್ರಮೋಷನ್ ಕೊಡುತ್ತಿದ್ದಾರೆ. ಇವತ್ತು ಶಿವಮೊಗ್ಗ ಸರ್ಕಲ್‌ನಲ್ಲಿರುವ ಸೂಪರಿಂಟೆಂಡಿಂಗ್ ಇಂಜಿನಿಯರ್ ಅವರು ದಕ್ಷ ಆಡಳಿತಗಾರರೆಂಬ ಹೆಸರನ್ನು ಪಡೆದಿದ್ದಾರೆ. ಅವರು ಒಳ್ಳೆಯ ಮನುಷ್ಯರು. ಅವರು ಕರ್ನಾಟಕ ಕನ್‌ಸ್ಟ್ರಕ್ಷನ್ ಕಂಪನಿಯವರು ಸರಿಯಾಗಿ ಕೆಲಸ ಮಾಡಿಲ್ಲವೆಂಬ ಕಾರಣಕ್ಕಾಗಿ ಅವರಿಗೆ ೨೭ ಸಾವಿರ ರೂಪಾಯಿಗಳ ದಂಡವನ್ನು ಹಾಕಿದ್ದಾರೆ ಈ ಕಂಪೆನಿಯ ವಿಚಾರದಲ್ಲಿ ಮಾನ್ಯ ಸಿದ್ದವೀರಪ್ಪನವರು ಈ ಸಭೆಯಲ್ಲಿ ಅನೇಕ ಸಲ ಪ್ರಸ್ತಾಪ ಮಾಡಿದ್ದಾರೆ. ಈ ಕಂಪೆನಿಯಲ್ಲಿ ಶ್ರೀ ನಿಜಲಿಂಗಪ್ಪನವರ ಮಗ ಅಳಿಯ ಪಾಲುದಾರರಾಗಿದ್ದಾರೆ. ಇವರು ಕಾನೂನು ಪ್ರಕಾರ ಆದೇಶದ ಪ್ರಕಾರ ಕೆಲಸ ಮಾಡದೆ ಇವರು ಮಾಡಿರುವ ಕೆಲಸಗಳೆಲ್ಲಾ ಹಾಳಾಗಿವೆ ಕೆರೆ ಕಟ್ಟೆಗಳು ಕೊಚ್ಚಿ ಹೋಗಿವೆ. ಸೇತುವೆಗಳು ಬಿದ್ದು ಹೋಗಿವೆ. ಮೋಸದಿಂದ ಹಣವನ್ನು ಲಪಟಾಯಿಸಿದ್ದಾರೆ. ಇದೇ ಕಾರಣದಿಂದ ಶಿವಮೊಗ್ಗದ ಸರ್ಕಲ್ ಸೂಪರಿಂಟೆಂಡಿಂಗ್ ಇಂಜಿನಿಯರ್ ಅವರು ಇವರಿಗೆ ೨೭ ಸಾವಿರ ರೂಪಾಯಿಗಳ ದಂಡವನ್ನು ಹಾಕಿದ್ದಕ್ಕೆ ಅವರನ್ನು ವರ್ಗ ಮಾಡಿಸಲು ಪ್ರಯತ್ನಗಳು ನಡೆದವು. ಆಗ ನಾವುಗಳು ಸಂಬಂಧಪಟ್ಟ ಮಂತ್ರಿಗಳ ಹತ್ತಿರ ಹೋಗಿ ಇವರು ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ, ವರ್ಗ ಮಾಡಬೇಡಿ ಎಂದು ಹೇಳಬೇಕಾಯಿತು. ಇವರು ಇದ್ದರೆ ಬಿಗಿಯಾದ ಆಡಳಿತ ಇರುತ್ತದೆ ಎಂಬುದನ್ನು ಎಲ್ಲರೂ ತಿಳಿದಿದ್ದಾರೆ. ಆ ಸರ್ಕಲ್‌ಗೆ ಸಂಬಂಧಪಟ್ಟ ಎಲ್ಲ ಸದಸ್ಯರೂ ಕೂಡ ಇದೇ ಅಭಿಪ್ರಾಯ ಹೊಂದಿದ್ದಾರೆ. ವೆಸ್ಟೆಡ್ ಇಂಟರೆಸ್ಟ್ ಇರತಕ್ಕಂತ ಕಂಪನಿಗಳು ಇರುವ ಕಡೆ ಇಂತಹ ದಕ್ಷ ಆಡಳಿತಗಾರರು ಇರುವುದು ಒಳ್ಳೆಯದೆಂದು ಹೇಳುತ್ತೇನೆ. ಸರ್ಕಾರದವರು ಕೆಲವು ಬೇಡಿಕೆಗಳ ಬಗ್ಗೆ ಏನು ಹಣ ಬೇಕೆಂದು ಕೇಳಿದ್ದಾರೆ, ಆ ಹಣವನ್ನು ಇವರ ಕೈಯಲ್ಲಿ ಕೊಡುವುದಕ್ಕೆ ಸಾಧ್ಯವಿಲ್ಲವೆಂದು ವಿರೋಧ ಮಾಡಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀಮತಿ ಬಸವರಾಜೇಶ್ವರಿ (ಸಮಾಜ ಕಲ್ಯಾಣ ಶಾಖೆಯ ಉಪ-ಮಂತ್ರಿಗಳು) :— ಮಾನ್ಯ ಅಧ್ಯಕ್ಷರೇ, ಈಗ ನಡೆಯುತ್ತಿರತಕ್ಕಂಥ ಬೇಡಿಕೆಗಳ ಮೇಲೆ ಅನೇಕ ಮಾನ್ಯ ಸದಸ್ಯರು ಹಲವಾರು ವಿಷಯಗಳನ್ನು ಸರ್ಕಾರದ ಗಮನಕ್ಕೆ ತಂದಿದ್ದಾರೆ. ರಚನಾತ್ಮಕವಾದ ಸಲಹೆಗಳನ್ನು ಕೂಡ ಕೊಟ್ಟಿದ್ದಾರೆ, ಹಾಗೂ ಕೆಲವು ಟೀಕೆಗಳನ್ನು ಕೂಡ ಮಾಡಿದ್ದಾರೆ. ಚಿಕ್ಕ ನೀರಾವರಿ ವಿಷಯದಲ್ಲಿ ಇತ್ತೀಚೆಗೆ ಸರ್ಕಾರ ಕೆಲವು ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು ಕೆಲವು ನಿರ್ಣಯಗಳನ್ನು ತೆಗೆದುಕೊಂಡಿದೆ ಎಂಬುದನ್ನು ಮಾನ್ಯ ಸದಸ್ಯರ ಗಮನಕ್ಕೆ ತರುವುದು ಸೂಕ್ತ ಎಂದು ನಾನು ತಿಳಿದುಕೊಂಡಿದ್ದೇನೆ. ಮೊದಲು ೧೦ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಆಗತಕ್ಕಂತ ಯೋಜನೆಗಳನ್ನು ಚಿಕ್ಕ ನೀರಾವರಿ ಯೋಜನೆಗಳೆಂದು ಪರಿಗಣಿಸಲಾಗಿತು. ೧೯೬೬ ರಲ್ಲಿ ಅದನ್ನು ೧೫ ಲಕ್ಷ ರೂಪಾಯಿಗಳಿಗೆ ಹೆಚ್ಚಿಸಲಾಯಿತು ಈ ಒಂದು ಲಿಮಿಟನ್ನು ಮೈದಾನ ಪ್ರದೇಶಕ್ಕೆ ೨೫ ಲಕ್ಷ ರೂಪಾಯಿಗಳಿಗೆ ಮತ್ತು ಗುಡ್ಡಗಾಡು ಪ್ರದೇಶಗಳಿಗೆ ೩೦ ಲಕ್ಷ ರೂಪಾಯಿಗಳಿಗೆ ಹೆಚ್ಚಿಸಬೇಕೆಂದು ಕೇಂದ್ರ ಸರ್ಕಾರದವರು ತಾರೀಖು ೯ನೇ ಜನವರಿ ೧೯೭೦ ರಲ್ಲಿ ರಾಜ್ಯಸರ್ಕಾರಕ್ಕೆ ತಿಳಿಸಿದರು. ಅವರ ಆದೇಶದ ಪ್ರಕಾರ ಇನ್ನು ಮುಂದೆ ಮೈದಾನ ಪ್ರದೇಶಗಳಲ್ಲಿ ೨೫ ಲಕ್ಷ ರೂಪಾಯಿಗಳು ಖರ್ಚಾಗತಕ್ಕಂಥ ಯೋಜನೆಗಳನ್ನು ಮತ್ತು ಗುಡ್ಡಗಾಡು ಪ್ರದೇಶಗಳಲ್ಲಿ ೩೦ ಲಕ್ಷ ರೂಪಾಯಿಗಳು ಖರ್ಚಾಗತಕ್ಕಂಥ ಯೋಜನೆಗಳನ್ನು ಸಣ್ಣ ನೀರಾವರಿ ಯೋಜನೆಗಳೆಂದು ಅದಕ್ಕಿಂತ ಹೆಚ್ಚು ಖರ್ಚಾಗುವ ಯೋಜನೆಗಳನ್ನು ಮಧ್ಯಮ ನೀರಾವರಿ ಯೋಜನೆಗಳೆಂದು ಸರ್ಕಾರ ಪರಿಗಣಿಸಬೇಕೆಂದು ನಿರ್ಧಾರಮಾಡಿದೆ. ಈ ವಿಷಯವನ್ನು

ಸಭೆಯಂ ಗಮನಕ್ಕೆ ತರುವುದಕ್ಕೆ ಸಂತೋಷಪಡುತ್ತೇನೆ. ರೆವಿನ್ಯೂ ಇಲಾಖೆಗೆ ಸೇರಿದ್ದ ಅನೇಕ ಕೆರೆಗಳ ಉಸ್ತುವಾರಿಯನ್ನು ೧೯೬೬ ನೇ ಇಸವಿಯಲ್ಲಿ ಲೋಕೋಪಯೋಗಿ ಇಲಾಖೆಯವರು ತಮ್ಮ ವಶಕ್ಕೆ ತೆಗೆದು ಕೊಂಡಿದ್ದಾರೆ.

ಇದು ವಿಸ್ತರಣಾ ಕಾರ್ಯವಾದರೂ ಕೂಡ ಸರ್ಕಾರದವರು ಈ ಬಗ್ಗೆ ದೀರ್ಘವಾಗಿ ವಿಚಾರ ಮಾಡಿದ್ದಾರೆ. ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟಿನವರು ಇವುಗಳನ್ನು ಮೇಂಟೇನ್ ಮಾಡಿದರೆ ನಿಜವಾಗಿ ಪರಿಸ್ಥಿತಿ ಉತ್ತಮವಾಗುತ್ತದೆನ್ನತಕ್ಕಂಥಾದ್ದನ್ನು ವಿಚಾರಮಾಡಿ ಸರ್ಕಾರದವರು ಇವೊತ್ತಿನ ದಿವಸ ಈ ನಿರ್ಣಯಕ್ಕೆ ಬಂದಿದ್ದಾರೆ.

ಅನೇಕ ಕೆರೆಗಳ ರೆಸ್ಟೋರೇಷನ್ ಮಾಡತಕ್ಕ ಒಂದು ಯೋಜನೆಯನ್ನು ಕೂಡ ಸರ್ಕಾರದವರು ಹಾಕಿಕೊಂಡಿದ್ದಾರೆ ೩೯ ಸಾವಿರ ಕೆರೆಗಳನ್ನು ಮೇಂಟೇನ್ ಮಾಡಬೇಕಾಗಿದೆ.೧೨೧/೨ಲಕ್ಷ ರೂಪಾಯಿಗಳನ್ನು ಇದರ ಬಗ್ಗೆ ಖರ್ಚು ಮಾಡಬೇಕೆಂದು ಇದೆ. ಮತ್ತು ೧೪ ಸಾವಿರ ಕೆರೆಗಳಿಗೆ ರೆಸ್ಟೋರೇಷನ್ ಮಾಡಬೇಕೆಂದೂ ಈಗಾಗಲೇ ಸರ್ಕಾರದ ಗಮನದಲ್ಲಿದೆ. ಕೆರೆಗಳನ್ನು ಮೇಂಟೇನ್ ಮಾಡತಕ್ಕ ಜವಾಬ್ದಾರಿಯನ್ನು ಇವೊತ್ತಿನ ದಿವಸ ಈ ಡಿಪಾರ್ಟ್‌ಮೆಂಟ್ ವಹಿಸಿಕೊಂಡಿದೆ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇವೊತ್ತಿನ ದಿವಸ ಅನೇಕ ಕೆರೆಗಳು ದುರಸ್ತಾಗಬೇಕಾಗಿದೆ. ಸ್ಲ್ಯಾಕ್‌ಡರ್ಡ್ ಆಗಿಲ್ಲ, ಕೆಲವು ಕೆರೆಗಳನ್ನು ಕಟ್ಟಿದರೂ ನೀರಾವರಿಯನ್ನು ಒದಗಿಸುವುದಕ್ಕೆ ಬೇಕಾದ ಸೌಕರ್ಯಗಳನ್ನು ಒದಗಿಸಿಕೊಟ್ಟಿಲ್ಲ. ವೇಸ್ಟ್‌ವೇರ್ ಉತ್ತಮವಾಗಿಲ್ಲ ಇತ್ಯಾದಿ ಅನೇಕ ವಿಚಾರಗಳನ್ನು ಕೆರೆಗಳ ವಿಚಾರದಲ್ಲಿ ಕೆರೆಗಳ ವಿಚಾರದಲ್ಲಿ ಅನೇಕ ಮಾನ್ಯ ಸದಸ್ಯರು ಪ್ರಶ್ನೋತ್ತರ ಕಾಲದಲ್ಲಿ ಹಾಗೂ ಬೇಡಿಕೆಯ ಮೇಲೆ ಚರ್ಚೆ ಮಾಡುವಾಗ ಪ್ರಸ್ತಾಪ ಮಾಡಿದ್ದಾರೆ. ಈ ವಿಚಾರವನ್ನು ಸರ್ಕಾರದವರು ಗಮನಕ್ಕೆ ತೆಗೆದುಕೊಂಡು ಈಗಾಗಲೇ ನಾಲ್ಕು ಇನ್‌ವೆಸ್ಟಿಗೇಷನ್ ಡಿವಿಜನ್‌ಗಳನ್ನು ಮೈಸೂರು, ಶಿವಮೊಗ್ಗ,ರಾಯಚೂರು ಮತ್ತು ಬೆಳಗಾಮ್‌ನಲ್ಲಿ ಈ ಡಿವಿಜನ್‌ಗಳನ್ನು ಈಗಾಗಲೇ ಪ್ರಾರಂಭ ಮಾಡಿದ್ದಾರೆ. ಅವು ಇವೊತ್ತಿನ ದಿವಸ ಪ್ರಾಜೆಕ್ಟುಗಳ ಟೆಕ್ನಿಕಲ್ ಆಸ್ಪೆಕ್ಟ್‌ನ ಎಲ್ಲವನ್ನೂ ವಿಚಾರ ಮಾಡಿ ಅವುಗಳ ಎಸ್ಟಿಮೇಟು ಮತ್ತು ಪ್ಲಾನುಗಳು ಸರ್ಕಾರದ ಮುಂದೆ ಬಂದು ತೀವ್ರವಾಗಿ ಸರ್ಕಾರದ ಮಂಜೂರಾತಿಯನ್ನು ಪಡೆಯುವ ಸಲುವಾಗಿ ಸರ್ಕಾರ ಈಗಾಗಲೇ ನಿರ್ಣಯ ಮಾಡಿದೆ ಎನ್ನತಕ್ಕಂಥಾದನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಮೊದಲು ಬಿಲ್ಡಿಂಗ್ಸ್ ಮತ್ತು ರಸ್ತೆಗಳನ್ನು ಇಲಾಖೆಯವರು ಯಾವರೀತಿ ಮೇಂಟೇನ್ ಮಾಡುತ್ತಿದ್ದರೋ ಅದೇ ರೀತಿ ಇನ್ನು ಮುಂದೆ ಕೆರೆಗಳನ್ನೂ ಮೇಂಟೇನ್ ಮಾಡಲಾಗುತ್ತದೆ. ಇದುವರೆಗೂ ಈ ಬಾಬಿಗೆ ಹಣವನ್ನು ಖರ್ಚು ಮಾಡುತ್ತಾ ಇರಲಿಲ್ಲ. ಇದನ್ನು ವಿಚಾರಮಾಡಿ ೬೦ ಲಕ್ಷ ರೂಪಾಯಿಗಳ ಲಂಪ್‌ಸಮ್ ಗ್ರಾಂಟನ್ನು ಸ್ಪೆಷಲ್ ರಿಪೇರ್ಸ್ ಆಫ್ ಟ್ಯಾಂಕ್ಸ್‌ಗೋಸ್ಕರ ಈ ವರ್ಷದ ಬಜೆಟ್ಟಿನಲ್ಲಿ ಒದಗಿಸಿದೆ. ಯಾವ ಯಾವ ಡಿವಿಜನ್‌ನಲ್ಲಿ ಕೆರೆಗಳನ್ನು ರಿಪೇರಿ ಮಾಡತಕ್ಕಂಥ ಅಗತ್ಯ ಹೆಚ್ಚು ಇದೆಯೆಂಬುದನ್ನು ವಿಚಾರಮಾಡಿ ಆಯಾಯ ಡಿವಿಜನ್ನಿಗೆ ದುಡ್ಡನ್ನು ಕೊಡತಕ್ಕಂಥ ಏರ್ಪಾಟು ಮಾಡುವುದರಿಂದ ಮತ್ತು ಚಿಕ್ಕ ಚಿಕ್ಕ ಕೆರೆಗಳ ರಿಪೇರಿ ಮೇಂಟೇನ್ ಮಾಡತಕ್ಕ ವಿಚಾರದಲ್ಲಿ ಲಂಪ್‌ಸಂ ಅಮೌಂಟ್ ಕೊಟ್ಟಿರುವುದರಿಂದ ಅನೇಕ ಕೆಲಸಗಳನ್ನು ಅಲ್ಲಲ್ಲಿ ನಿರ್ಣಯ ಮಾಡಿಕೊಂಡು ಕೆಲಸ ಮಾಡುವುದಕ್ಕೆ ಒಂದು ಅನುಕೂಲವಾಗುತ್ತದೆಂದು ತಾನು ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಈ ದೇಶದಲ್ಲಿ ತಮ್ಮೆಲ್ಲರಿಗೂ ಗೊತ್ತಿರುವ ಹಾಗೆ ೧೯೬೫-೬೬ನೇ ಇಸವಿಯಲ್ಲಿ ಬಹಳ ಅಭಾವ ಪರಿಸ್ಥಿತಿ ಉಂಟಾಯಿತು. ಆದಕ್ಕಾಗಿ ಚಿಕ್ಕ ನೀರಾವರಿಗೆ ಹೆಚ್ಚು ಪ್ರಾಶಸ್ತ್ಯವನ್ನು ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರ ಕೊಟ್ಟಿದೆ. ನಮ್ಮ ದೇಶದಲ್ಲಿ ನೀರಾವರಿ ಪ್ರದೇಶವನ್ನು ಹೆಚ್ಚು ಮಾಡಬೇಕೆಂಬ ಉದ್ದೇಶದಿಂದ ಪರಿಹಾರ ಕಾಮಗಾರಿಗಳಿಗೆ ಎಂದರೆ ರಸ್ತೆ ರಿಪೇರಿ ಮಗೈರೆ ಚಿಕ್ಕಪುಟ್ಟ ಕೆಲಸಗಳನ್ನು ತೆಗೆದುಕೊಂಡರೆ ಅದರಿಂದ ದೇಶಕ್ಕೆ ಉಪಯೋಗವಾಗುವುದಿಲ್ಲ ಎಂದು ವಿಚಾರಮಾಡಿ ಸರ್ಕಾರ ಒಂದು ನಿರ್ಣಯವನ್ನು ತೆಗೆದುಕೊಂಡು ೬೪ನೇ ಫ್ಯಾಮಿನ್ ಹೆಡ್‌ನಿಂದ ೨ ಲಕ್ಷ ರೂಪಾಯಿಗಳನ್ನು ಮೈನರ್ ಇರಿಗೇಷನ್ನಿಗೆ ವರ್ಗಾಯಿಸಿದ್ದಾರೆ. ಈ ರೀತಿ ಮಾಡಿದ್ದರಿಂದ ಅನೇಕ ಹೊಸ ಕಾಮಗಾರಿಗಳನ್ನು ಈಗಾಗಲೇ ಸರ್ಕಾರದವರು ತೆಗೆದುಕೊಳ್ಳಲು ಅವಕಾಶವಾಯಿತು. ಅನೇಕ ಕಾಮಗಾರಿಗಳನ್ನು ಈಗಾಗಲೇ ಪೂರ್ತಿ ಮಾಡಿದ್ದಾರೆ.ಈಗ ನಿಂತಿರತಕ್ಕಂಥ ಮತ್ತು ಇರತಕ್ಕಂಥ ಕಾಮಗಾರಿಗಳನ್ನು ಕೂಡ ಮುಂದುವರಿಸಿಕೊಂಡು ಹೋಗಲು ಸರ್ಕಾರ ಈಗಾಗಲೇ ನಿರ್ಣಯ ತೆಗೆದುಕೊಂಡಿದೆ. ಇದರಿಂದ ಬಹಳ ಹೆಚ್ಚಿನ ಉಪಕಾರವಾಗುತ್ತದೆ. ಇನ್ನುಮುಂದೆ ಕೂಡ ನೀರಾವರಿ ಪ್ರದೇಶ ಹೆಚ್ಚಾಗುತ್ತದೆ ಎಂದು ನಾನು ಮಾನ್ಯ ಸದಸ್ಯರ ಗಮನಕ್ಕೆ ತರುವುದಕ್ಕೆ ಇಚ್ಛೆ ಪಡುತ್ತೇನೆ. ಇಲ್ಲಿಯವರೆಗೆ ಮೈನರ್ ಇರಿಗೇಷನ್‌ನಿಂದ ಎಷ್ಟು ನೀರಾವರಿ ಪ್ರದೇಶಗಳು ರಾಜ್ಯದಲ್ಲಿ ಹೆಚ್ಚಾಗಿದೆ ಯಾವ ಯೋಜನೆಯಲ್ಲಿ ಎಷ್ಟೆಷ್ಟು ಹಣವನ್ನು ಸರ್ಕಾರದವರು ಖರ್ಚು ಮಾಡಿದ್ದಾರೆ ಎನ್ನತಕ್ಕಂಥಾದನ್ನು ಅಂಕಿ ಅಂಶಗಳ ಮೂಲಕ ನಾನು ಮಾನ್ಯ ಸದಸ್ಯರಿಗೆ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ.

(ಶ್ರೀಮತಿ ಬಸವರಾಜೇಶ್ವರಿ)

Period	Total expenditure in lakhs	Achkat in acres	Stabilisation in acres	Total acreage on Minor Irrigation in acres.
1	2	3	4	5
During I Five-Year Plan (1951-56)	415.31	16,876	2,59,877	2,76,753
During II Five-Year Plan (1956-61	673.72	41,963	1,11,441	1,53,404
During III Five-Year Plan (1961-66)	1,455.58	1,36,254	2,02,050	3,38,304
Annual Plan (1966-67)	424.76	45,761	71,187	1,16,948
Annual Plan (1967-68)	417.00	76,393	37,325	1,13,718
do (1968-69)	535.08	37,485	78,718	1,16,203
do (69-70)	515.00 Antici-pated	31,880 Antici-pated	23,720 Antici-pated	55,600 Antici-pated
Total	4,436.45	3,86,612	7,84,318	11,70,930

ಮೂರು ಯೋಜನೆಗಳ ಕೆಲಸಗಳೆಲ್ಲವೂ ಮುಗಿದ ಮೇಲೆ ೧೪.೯೯ ಲಕ್ಷ ಎಕರೆ ನೀರಾವರಿ ಪ್ರದೇಶ ನಮ್ಮ ರಾಜ್ಯದಲ್ಲಿ ಆಗಬಹುದೆನ್ನುವ ಅಂಕಿ ಅಂಶಗಳನ್ನು ಕೊಟ್ಟಿದೆ. ಇದನ್ನು ನಾನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ ಇದರ ಬಗ್ಗೆ ಮಾನ್ಯ ಸದಸ್ಯರೆಲ್ಲರಿಗೂ ಬಹಳ ಕುತೂಹಲ ಇದೆ. ತಕ್ಷಣ ಜನಗಳಿಗೆ ಅನುಕೂಲ ಮಾಡತಕ್ಕದ್ದು ಮೈನರ್ ಇರಿಗೇಷನ್ ಪ್ರಾಜೆಕ್ಟ್ ಕೆಲಸಗಳ ಬಗ್ಗೆ ಪ್ರತಿವರ್ಷ ನಾವು ಖರ್ಚು ಮಾಡತಕ್ಕಂಥ ಹಣಕ್ಕಿಂತ ಹೆಚ್ಚು ಹಣವನ್ನು ಈ ಬಾಬಿನ ಯೋಜನೆಗಳಿಗೆ ಸರ್ಕಾರ ಈಗಾಗಲೇ ಖರ್ಚು ಮಾಡುತ್ತಿದೆ ಎನ್ನುವ ವಿಷಯವನ್ನು ಮಾನ್ಯ ಸದಸ್ಯರಿಗೆ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಎರಡನೆಯ ವಿಚಾರ. ಲಿಫ್ಟ್ ಇರಿಗೇಷನ್ ವಿಚಾರದಲ್ಲಿ ಅನೇಕ ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತ ಮಾಡಿದ್ದಾರೆ ಅಭಾವ ಪರಿಸ್ಥಿತಿ ಬಂದಾಗ ಸರ್ಕಾರದಿಂದ ಈ ಯೋಜನೆಗಳನ್ನು ಕೈಗೊಂಡು ಕೇಂದ್ರ ಸರ್ಕಾರದವರು ಕೂಡ ಈ ಬಾಬಿಗೆ ಕೆಲವು ಹಣವನ್ನು ಕೊಟ್ಟಿದ್ದಾರೆ. ಈ ರೀತಿಯಾಗಿ ರಾಜ್ಯ ಸರ್ಕಾರದವರು ಈ ಲಿಫ್ಟ್ ಇರಿಗೇಷನ್ ಯೋಜನೆಗಳನ್ನು ಮುಂದುವರಿಸಿಕೊಂಡು ಬಂದಿದ್ದಾರೆ. ಇತ್ತೀಚೆಗೆ ಕೋ-ಆಪರೇಟಿವ್ ಸೆಕ್ಟಾರ್‌ನಲ್ಲಿ ಈ ಕೆಲಸವನ್ನು ಪ್ರಾರಂಭ ಮಾಡಬೇಕೆಂದಿದ್ದಾರೆ ಆದ್ದರಿಂದ ಈ ಯೋಜನೆಯ ಗಾತ್ರ ಏನಿರಬೇಕು, ಷೇರ್ ಕ್ಯಾಪಿಟಲ್ ಎಷ್ಟು ಇರಬೇಕು, ಸಬ್ಸಿಡಿ ಏನು ಇರಬೇಕು, ಎ.ಆರ್.ಸಿ. ಮತ್ತು ಷೆಡ್ಯೂಲ್ ಬ್ಯಾಂಕ್ ಲೋನ್ ಎಷ್ಟಿರಬೇಕು, ಎನ್ನುವ ವಿಚಾರವನ್ನು ಸರ್ಕಾರ ಈಗಾಗಲೇ ವಿಚಾರ ಮಾಡುತ್ತಿದೆ. ಇಷ್ಟರಲ್ಲೇ ಈ ಬಗ್ಗೆ ಅಂತಿಮವಾಗಿ ತೀರ್ಮಾನವನ್ನು ತೆಗೆದುಕೊಳ್ಳುತ್ತಾರೆ. ಈಗಾಗಲೇ ಅನೇಕ ಲಿಫ್ಟ್ ಇರಿಗೇಷನ್ ಯೋಜನೆಯ ಬಗ್ಗೆ ಅನೇಕ ಜನಗಳು ಸಹಕಾರ ಸಂಘಗಳನ್ನು ಮಾಡಿಕೊಂಡಿದ್ದಾರೆ. ಜನಗಳಿಂದ ೧೦ ಪರ್ಸೆಂಟ್ ಷೇರ್ ಕ್ಯಾಪಿಟಲ್‌ಗಳನ್ನು ಕಲೆಕ್ಟ್ ಮಾಡುತ್ತಿದ್ದಾರೆ. ಈ ಬಗ್ಗೆ ಅನೇಕ ಯೋಜನೆಗಳನ್ನು ಎ. ಆರ್. ಸಿ. ಗೆ ರೆಫರ್ ಮಾಡಿದೆ. ಅದಕ್ಕೆ ಅವರು ಹಣದ ಮಂಜೂರಾತಿ ಕೊಡಬೇಕಾಗಿದೆ. ಈ ಯೋಜನೆಯನ್ನು ಕೋ-ಆಪರೇಟಿವ್

ಸೆಕ್ಟಾರ್‌ನಲ್ಲಿ ತೆಗೆದುಕೊಳ್ಳುವ ಬಗ್ಗೆ ಕೆಲವು ಮಾನ್ಯ ಸದಸ್ಯರು ತಮ್ಮ ಅಸಮಾಧಾನವನ್ನು ವ್ಯಕ್ತ ಮಾಡಿದ್ದಾರೆ. ಈ ತರಹ ಯೋಜನೆಗಳನ್ನು ಕೋ-ಆಪರೇಟಿವ್ ಸೆಕ್ಟಾರಿನಲ್ಲಿ ತೆಗೆದುಕೊಳ್ಳುವುದು ನಮ್ಮ ದೇಶ ಒಂದರಲ್ಲಿ ಮಾತ್ರ ಅಲ್ಲ. ಬೇರೆ ಗಾಜ್ಯಗಳಲ್ಲಿಯೂ ಇದೇ ರೀತಿ ಮಾಡಿದ್ದಾರೆ. ಮಹಾರಾಷ್ಟ್ರ ಮತ್ತು ಆಂಧ್ರ ದೇಶಗಳಲ್ಲಿಯೂ ಈ ಲಿಫ್ಟ್ ಇರಿಗೇಷನ್ ಯೋಜನೆಗಳನ್ನು ಸಹಕಾರ ಸಂಘಗಳ ಮತಿಯಿಂದಲೇ ತೆಗೆದುಕೊಂಡಿದ್ದಾರೆ. ಇದನ್ನು ನೋ ಪ್ರಾಫಿಟ್ ನೋ ಲಾಸ್ ಬೇಸಿಸ್ ಮೇಲೆ ನಡೆಸಬೇಕಾಗುತ್ತದೆ. ಇದನ್ನು ವಿಚಾರ ಮಾಡಿ ಸರ್ಕಾರದವರು ಈ ಒಂದು ತೀರ್ಮಾನವನ್ನು ತೆಗೆದುಕೊಂಡಿದ್ದಾರೆ. ಈಗ ಈ ಯೋಜನೆಯನ್ನು ಟ್ರಯಲ್ ಆಗಿ ತೆಗೆದುಕೊಂಡಿದ್ದೇವೆ. ಮುಂದೆ ಇದರಲ್ಲಿ ತೊಂದರೆ ಕಂಡಾಗ ಸರ್ಕಾರ ಇದನ್ನು ಪುನರ್ ಪರಿಶೀಲನೆ ಮಾಡುವುದು ಸೂಕ್ತವೆಂದು ಈ ಸಂದರ್ಭದಲ್ಲಿ ನಾನು ಅಭಿಪ್ರಾಯ ಪಡುತ್ತೇನೆ. ಆದ್ದರಿಂದ ಆದರ ಬಗ್ಗೆ ಯಾರಿಗೂ ಜಿಗುಪ್ಸೆಯಾಗುವುದು ಬೇಡವೆಂದು ನಾನು ಹೇಳುತ್ತೇನೆ.

ಶ್ರೀ ಎಚ್. ಸಿದ್ದವೀರಪ್ಪ :— ನಿನ್ನೆಯ ದಿವಸ ನಾನು ಒಂದು ಸಲಹೆಯನ್ನು ಕೊಟ್ಟಿದ್ದೆ. ಈ ಸಹಕಾರ ಸಂಘಗಳ ವಿಚಾರದ ವ್ಯಾಕ್ಯಾನಕ್ಕೆ ಹೋಗುವುದು ಬೇಡ, ಇದಕ್ಕಿಂತಲೂ ಸುಲಭವಾಗಿ ಬೇರೆ ರೀತಿಯಲ್ಲಿ ಮಾಡಬಹುದು. ಈಗ ವ್ಯವ್ಯಸಾಯಗಾರರಿಗೆ ವಿಪುಲವಾಗಿ ಹೇರಳವಾದ ಹಣವನ್ನು ಕೊಡುವುದಕ್ಕೆ ಷೆಡ್ಯೂಲ್ಡ್ ಬ್ಯಾಂಕಿನವರು ಮುಂದೆ ಬಂದಿದ್ದಾರೆ. ನೀವು ಅವರ ಸಹಕಾರ ತೆಗೆದುಕೊಂಡು ಮೊದಲಿನಿಂದ ಕೊನೆಯವರೆಗೂ ಹಣ ತೆಗೆದುಕೊಂಡು, ಒಂದು ರಿಜಿಸ್ಟರ್ಡ್ ಅಸೋಸಿಯೇಶನ್ ಮಾಡಿ ಕೆಲಸ ಕಾರ್ಯಗಳನ್ನು ಮಾಡಬಹುದು. ಸಂಪೂರ್ಣವಾದ ಹಣವನ್ನು ಅವರೇ ಕೊಡುತ್ತಾರೆ. ಇಪತ್ತು ನೀವು ಸಹಕಾರ ಸಂಘಗಳನ್ನು ಮಾಡುವುದು ಬೇಡ. ಇದು ಬಹಳ ಚೆನ್ನಾಗಿ ನಡೆಯುತ್ತವೆಯೇ ಇಲ್ಲವೇ ಎಂಬುದನ್ನು ನಾವು ನೋಡುತ್ತಿದ್ದೇವೆ. ಷೆಡ್ಯೂಲ್ ಬ್ಯಾಂಕಿನವರು ಇರುವಾಗ ಅವರಿಗೆ ಹೇಳಿ ಅವರು ಮುಂದೆ ಬರುತ್ತಾರೆ, ಸಹಕಾರ, ಸಹಾಯ ಮಾಡುತ್ತಾರೆ. ಅವರ ಸಹಕಾರ ಕೊರಿದರೆ ಸುಮಾರು ೪೦-೫೦ ಸ್ಕೀಮನ್ನಾದರೂ ಮುಂದಿನ ವರ್ಷ ಮಾಡುವುದಕ್ಕೆ ಸಾಧ್ಯವಿದೆ. ಅದಲ್ಲದೆ ನಿಮ್ಮ ಸಹಕಾರ ಸಂಘ ಮಾಡಿಕೊಂಡರೆ, ಅಲ್ಲಿ ಪಾರ್ಟಿ ಮಾಡಿಕೊಂಡು, ಗುಂಪು ಮಾಡಿಕೊಂಡು, ನಾನಾರೀತಿಯ ಅನ್ಯಾಯ ಮಾಡುವುದಕ್ಕಿಂತ ನಾನು ಕೊಟ್ಟ ಸಲಹೆಯನ್ನು ಕಾರ್ಯಗತ ಮಾಡುವುದಕ್ಕೆ ಸರ್ಕಾರದವರು ಯೋಚನೆ ಮಾಡುತ್ತೀರಾ ?

ಶ್ರಮತಿ ಬಸವರಾಜೇಶ್ವರಿ :— ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿ ನಾವು ವಿಚಾರ ಮಾಡುತ್ತಿದ್ದೇವೆ. ಸಹಕಾರ ಪದ್ಧತಿಯಲ್ಲಿ ಮಾಡುವಾಗ ಅದರ ವಿಸ್ತರಣೆ ಎಷ್ಟು ಇರಬೇಕು, ಇತ್ಯಾದಿಗಳನ್ನು ಸರ್ಕಾರದವರು ಪೂರ್ಣವಾಗಿ ವಿಚಾರ ಮಾಡುತ್ತಿದ್ದಾರೆ.

ಕೊನೆಯದಾಗಿ ಮಾನ್ಯ ಸದಸ್ಯರನೇಕರು, ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ನಾನು ಸ್ಮಾಲವಾಗಿ ಲಿಫ್ಟ್ ಇರಿಗೇಶ್ನ ವಿಚಾರವಾಗಿ, ಈಗಾಗಲೇ ಪ್ರಸ್ತಾಪ ಮಾಡಿದ್ದೇನೆ. ಮಾನ್ಯ ದೇವೇಗೌಡ ಇವತ್ತಿನ ದಿವಸ ರೀಪೇರಿಗಾಗಿ ಖರ್ಚು ಮಾಡತಕ್ಕ ಹಣ ಎಕ್ಸಿಕ್ಯೂಟಿವ್ ಇಂಜಿನಿಯರ ಡಿಸ್ಕ್ರಿಪ್ಷನ್‌ನಲ್ಲಿ ಇದೆ, ಆದರ ಮೇಲೆ ಏನೂ ನಿಗಾ ಇಲ್ಲವೆಂದು ಹೇಳುತ್ತಿದ್ದಾರೆ. ಈಗಾಗಲೇ ಸೂಪರಿಂಟೆಂಡಿಂಗ್ ಇಂಜಿನಿಯರ್ ಅನುಮತಿ ಪಡೆಯದೆ ಕೆಲಸ ಮಾಡಬಾರದು ಎಂದು ಹೇಳಿದ್ದೇವೆ. ಇನ್ನು ಶ್ರೀಮತಿ ನಾಗರತ್ನಮ್ಮನವರು ಒಂದು ಕೆರೆಯ ವಿಷಯ ಪ್ರಸ್ತಾಪ ಮಾಡಿದ್ದಾರೆ. ಆದರಲ್ಲಿ ರಾಜಕೀಯ ಮಾಡಿದ್ದಾರೆಂದು ಹೇಳಿದ್ದಾರೆ. ಇನ್ನೊಬ್ಬ ಸದಸ್ಯರು ಅಲ್ಲಿ ಯಾವ ಪರಿಸ್ಥಿತಿ ಇದೆಯೆಂಬುದನ್ನು ವಿಚಾರ ಮಾಡದೆ, ರಾಜಕೀಯ ಮಾಡಿದ್ದಾರೆಂದು ಹೇಳಿದರು ನಾವು ಯಾವ ಕೆರೆ ಮಾಡುವುದಾದರೂ ಅಲ್ಲಿಯ ಟೆಕ್ನಿಕಲ್ ಫೀಸಿಬಿಲಿಟಿ, ಬ್ಯಾಕ್‌ವರ್ಡ್‌ನೆಸ್ ಆಫ್ ದಿ ಏರಿಯಾ ನೋಡಿದೆ ಮಂಜೂರು ಮಾಡುವುದಿಲ್ಲ. ಅಲ್ಲದೆ ರಾಜಕೀಯದ ಹಿನ್ನೆಲೆಯಲ್ಲಿ ಮಾಡುವುದಿಲ್ಲ. ನಿಜವಾಗಿಯೂ ಹಿಂದುಳಿದ ಪ್ರದೇಶವನ್ನು ನೋಡಿಕೊಂಡು ಕೆಲಸಗಳನ್ನು ಮಾಡುತ್ತಿದ್ದೇವೆ. ಮತ್ತು ಅದರ ಅನುಕೂಲ ಬಂಡಿಪುರದ ಕಾಡುಪ್ರಾಣಿಗಳಿಗೂ ಒದಗುತ್ತಿದೆ. ಅಲ್ಲಿನ ಕಾಡು ಪ್ರಾಣಿಗಳು ಬೇಸಿಗೆ ಕಾಲದಲ್ಲಿ ನೀರಿಲ್ಲದೆ ಹತ್ತಿರದ ರಾಜ್ಯವಾದ ಮದ್ರಾಸ್ ಕಡೆಗೆ ಹೋಗುತ್ತಿವೆ. ಇದರಿಂದ ಕಾಡುಪ್ರಾಣಿಗಳನ್ನು ಕಾಪಾಡುವದೃಷ್ಟಿಯಿಂದಲೂ ಮತ್ತು ಇದರ ಜೊತೆಗೆ ಸುಮಾರು ೯ ಸಾವಿರ ಎಕರೆಗೆ ನೀರಾವರಿಯಾಗುತ್ತದೆ ಎಂಬ ಉದ್ದೇಶದಿಂದಲೂ. ಈ ಮಂಗಳ ಕೆರೆಯನ್ನು ಸರ್ಕಾರದವರು ತೆಗೆದುಕೊಂಡದ್ದು. ಇದನ್ನು ಕೇವಲ ರಾಜಕೀಯ ದೃಷ್ಟಿಯಿಂದ ಮಾಡಿಲ್ಲ. ಇನ್ನು ನಲ್ಲೂರು ಅಮ್ಮನಿಕರೆ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಇದಕ್ಕೆ ಸುಮಾರು ೭೪ ಲಕ್ಷ ರೂಪಾಯಿ ಖರ್ಚಾಗುತ್ತದೆ. ಹೀಗಿರುವಾಗ ಇದನ್ನು ಮೈಸರ್ ಇರಿಗೇಶನ್ ಎಂದು ಕನ್ಸಿಡರ್ ಮಾಡುವುದಕ್ಕಾಗುವುದಿಲ್ಲ ಅದೇ ರೀತಿ ಮಾನ್ಯ ಜಾಲಿಸಟ್ಟಿಯವರು ಕಾರ್ ಲ್ಯಾಂಡ್ಸ್‌ನ್ನು ಸಂರಕ್ಷಣೆ ಮಾಡತಕ್ಕ ವಿಚಾರದಲ್ಲಿ ಸರ್ಕಾರದವರು ಏನೂ ನಿಗಾ ವಹಿಸಿಲ್ಲವೆಂದೂ ಜಮೀನು ಸವಳಾಗುತ್ತದೆ ಎಂದು ಹೇಳಿದ್ದಾರೆ. ಸರ್ಕಾರದವರು ಅದನ್ನು ಗಮನಕ್ಕೆ ತೆಗೆದುಕೊಂಡು ಈ ಕೆಳಗಿನ ಕೆಲಸಗಳನ್ನು ಮಾಡಿದ್ದಾರೆಂದು ಹೇಳುತ್ತೇನೆ.

(ಶ್ರೀಮತಿ ಬಸಪ್ಪರಾಜೇಶ್ವರಿ)

So far 56 schemes costing Rs. 50 lakhs have been completed to protect 6576 acres. 22 schemes at a cost of Rs. 41,74,000 are under execution. This will protect 5739 acres. Further three schemes at a cost of Rs. 3,31 lakhs are sanctioned for protecting 494 acres. Plans and estimates for 11 schemes are got up at an estimated cost of Rs. 34,37,000 for protecting 3060 acres.

ಇದನ್ನು ಮಾನ್ಯ ಸದಸ್ಯ ಗಮನಕ್ಕೆ ತಂದಿರುವುದರಿಂದ ಬಹುಶಃ ಸರ್ಕಾರ ಟೀಕೆಗೆ ಅರ್ಹವಲ್ಲವೆಂದು ಹೇಳುತ್ತೇನೆ.

ಕೊನೆಯದಾಗಿ ಹಲವಾರು ಸದಸ್ಯರು ಕಟ್ ಮೋಷನ್ಸ್ ಕಳಿಸಿದ್ದಾರೆ. ಅದರ ಬಗ್ಗೆ ಒಬ್ಬೊಬ್ಬರಿಗೆ ಉತ್ತರ ಕೊಡುವುದು ಉಚಿತವಲ್ಲವೆಂದು ಕಾಣುತ್ತದೆ. ಆದರೂ ಕೂಡ ಸ್ಥೂಲವಾಗಿ ಎರಡು ವಿಚಾರಗಳನ್ನು ಪ್ರಸ್ತಾಪ ಮಾಡುತ್ತೇನೆ. ಒಂದನೆಯದು ಅಯಾ ಸ್ಥಳಗಳಲ್ಲಿ ಕೆಲವು ಕೆರೆಗಳನ್ನು ಪ್ರಾರಂಭ ಮಾಡಲು ಸರ್ಕಾರ ಲೋಪ ಮಾಡಿದ್ದಾರೆ ಎಂಬುದನ್ನು ಹೇಳಿದ್ದಾರೆ. ನಾನಾದರೂ ಇದರ ಬಗ್ಗೆ ಹೇಳುವುದೇನೆಂದರೆ, ಸರ್ಕಾರದವರು ಈಗಾಗಲೇ ಒಂದು ಫೇಸಡ್ ಪ್ರೋಗ್ರಾಂ ಹಾಕಿಕೊಂಡಿದ್ದಾರೆ. ಎಲ್ಲಿ ಸ್ಪಿಲ್. ಓವರ್ ಕೆಲಸಗಳು ಹೆಚ್ಚಾಗಿವೆ, ಅವೆಲ್ಲವನ್ನೂ ಪೂರ್ತಿ ಮಾಡಿ, ಅಗತ್ಯವಾದ ಸಂದರ್ಭದಲ್ಲಿ ಹೊಸ ಕೆರೆಗಳನ್ನು ನಿರ್ಮಾಣ ಮಾಡತಕ್ಕಂತಹ ಯೋಜನೆ ಹಾಕಿಕೊಂಡಿದ್ದೇವೆ. ಮಾನ್ಯ ಸದಸ್ಯರೆಲ್ಲರೂ ಕಟ್‌ಮೋಷನ್ಸ್‌ಗಳಲ್ಲಿ ಏನೇನು ವ್ಯಕ್ತಪಡಿಸಿದ್ದಾರೆ. ಅವೆಲ್ಲವನ್ನೂ ವಿಚಾರ ಮಾಡುತ್ತೇವೆ ಹಣದ ಅನುಕೂಲತೆ ಯಾವಾಗ ಆಗುತ್ತದೆ, ಆಗ ಆದಷ್ಟು ಹೆಚ್ಚು ಕೆಲಗಳನ್ನು ತೆಗೆದುಕೊಳ್ಳುವುದಕ್ಕೆ ವಿಚಾರ ಮಾಡುತ್ತೇವೆ. ಅದೇ ರೀತಿ ಲಿಫ್ಟ್ ಇರಿಗೇಷನ್ ಬಗ್ಗೆಯೂ ಕಟ್ ಮೋಷನ್ಸ್ ಕಳಿಸಿದ್ದಾರೆ ಆದರ ಬಗ್ಗೆ ಈಗಾಗಲೇ ಹೇಳಿದ್ದೇನೆ. ಕೊನೆಯದಾಗಿ ಏನಾದರೂ ಕೆಲಸವನ್ನು ಎಲ್ಲಿಯಾದರೂ ಮಾಡಬೇಕಾದರೆ, ಮುಖ್ಯವಾಗಿ ಅಲ್ಲಿತಂತಕ್ಕ ಮಾನ್ಯಸದಸ್ಯರ ಸಹಕಾರ ಬೇಕಾಗುತ್ತದೆ. ಏಕೆಂದರೆ ಅನೇಕ ಸಂದರ್ಭಗಳಲ್ಲಿ ಅನೇಕ ತೊಂದರೆಗಳನ್ನು ನಾವು ಎದುರಿಸಬೇಕಾಗುತ್ತದೆ. ಮಾನ್ಯ ಸದಸ್ಯರೆಲ್ಲಾ ಅದಕ್ಕೆ ಸಹಕಾರ ನೀಡಿದರೆ ಅಧಿಕಾರಿಗಳು ಹೆಚ್ಚಿನ ಪ್ರಭಾವ ಬೀರಿ ಕೆಲಸಗಳನ್ನು ತ್ವರಿತವಾಗಿ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಉದಾಹರಣೆಗೆ ಲ್ಯಾಂಡ್ ಅಕ್ವಿಜಿಶನ್ ಮಾಡುವುದರಲ್ಲಾಗಲಿ ಅಥವಾ ಎನ್‌ಕ್ರೋಚ್‌ಮೆಂಟ್‌ನಲ್ಲಾಗಲಿ, ಮತ್ತು ಇನ್ನಿತರ ಅನೇಕ ವಿಚಾರಗಳಲ್ಲಿ ಎಲ್ಲ ಸದಸ್ಯರ ಸಹಕಾರ ಇಲ್ಲದಿದ್ದರೆ ಈ ಕೆಲಸವನ್ನು ಅತೀ ಜಾಗ್ರತೆಯಾಗಿ ಮಾಡುವುದಕ್ಕಾಗುವುದಿಲ್ಲ. ಈ ರೀತಿ ಸರ್ಕಾರ ಒಂದು ದೊಡ್ಡ ಯೋಜನೆಯನ್ನೇ ಹಾಕಿಕೊಂಡಿದೆ. ಸುಮಾರು ೧೦೦ ಕೋಟಿ ರೂಪಾಯಿ ಖರ್ಚು ಮಾಡಿದರೆ, ಸುಮಾರು ೬ ಲಕ್ಷ ಎಕರೆ ಪ್ರದೇಶ ನೀರಾವರಿ ಹೆಚ್ಚು ಆಗಬಹುದೆಂದು ಸರ್ಕಾರ ವಿಚಾರ ಮಾಡಿದೆ. ಸರ್ಕಾರಕ್ಕೆ ಹಣದ ಅನುಕೂಲತೆ ಆದ ಹಾಗೆ ಈ ಕಾರ್ಯಕ್ರಮವನ್ನು ಮುಂದುವರಿಸಿಕೊಂಡು ಹೋಗುತ್ತೇವೆ. ಆದ್ದರಿಂದ ಈ ಮಾನ್ಯ ಸಭೆ ಇದಕ್ಕೆ ಅನುಮೋದನೆಯನ್ನು ಕೊಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವಿ. ವೆಂಕಟಗಿರಿಯಪ್ಪ :—ಮಾನ್ಯ ಮಂತ್ರಿಯವರು, ನೀರಾವರಿ ಇಲಾಖೆಯಲ್ಲಿ ಯಾವ ರೀತಿಯ ರಾಜಕೀಯಕ್ಕೂ ಅವಕಾಶವಿಲ್ಲ, ಮತ್ತು ಅಲ್ಲಿನ ಅವಶ್ಯಕತೆಗಳನ್ನು ನೋಡಿ ಕೆರೆಗಳನ್ನು ಮಂಜೂರು ಮಾಡುತ್ತೇವೆಂದು ಹೇಳಿದರು. ನಮ್ಮ ಕೋಲಾರ ಜಿಲ್ಲೆಯಲ್ಲಿ ನೂರಾರು ಕೆರೆಗಳು ರೆಸ್ಟೋರೇಶನ್ ಆಗಬೇಕೆಂದು ಹತ್ತಾರು ಅರ್ಜಿಗಳನ್ನು ಬರೆದರೂ ಅನೇಕ ಕೆರೆಗಳನ್ನು ರೆಸ್ಟೋರೇಶನ್ ಮಾಡದಿರುವುದಕ್ಕೆ ಕಾರಣವೇನು ? ಮತ್ತು ಅತ್ಯಲ್ಪ ಹಣ ಅದಕ್ಕೆ ಕೊಡುವುದಕ್ಕೆ ರಾಜಕೀಯವಲ್ಲದೆ, ಮತ್ತೇನು ಕಾರಣ ಇದೆ ?

ಶ್ರೀ ಎಚ್. ಡಿ. ದೇವೇಗೌಡ :—ಮಾನ್ಯ ಮಂತ್ರಿಯವರು ಲಿಫ್ಟ್ ಇರಿಗೇಶನ್ ಸ್ಕೀಮ್‌ನ್ನು ಒಂದು ಟೈಯಲ್ ಮೆಥೆಡ್‌ನಲ್ಲಿ ಮಾಡಿ ನೋಡಬೇಕಾಗುತ್ತದೆಂದು ಹೇಳಿದರು. ಇದರಲ್ಲಿ ಕ್ಯಾಬಿನೆಟ್ ತೀರ್ಮಾನ ತೆಗೆದುಕೊಂಡು ಸುಮಾರು ಒಂದು ವರ್ಷವಾಗಿದೆ. ಅದನ್ನು ಎಆರ್‌ಪಿಯಿಂದ ಮಾಡಬೇಕೆಂದು ತೀರ್ಮಾನ ತೆಗೆದುಕೊಂಡಿದ್ದಾರೆ ಈಗ ಸರ್ಕಾರದವರು ಆ ಪಾಲಿಸಿ ತೀರ್ಮಾನವನ್ನು ಪುನರ್‌ವಿಮರ್ಶೆ ಮಾಡುವುದಕ್ಕೆ ಸಿದ್ಧರಿದ್ದಾರೆಯೇ ? ಅದಲ್ಲದೆ, ಬಜೆಟಿನಲ್ಲಿ ಯಾವುದು ಸೇರಿದೆ ಅದನ್ನಾದರೂ ತೆಗೆದುಕೊಳ್ಳುವುದಕ್ಕೆ ಆದೇಶ ಕೊಡುತ್ತೀರಾ ! ಇನ್ನೊಂದು ನೋ ಲಾಸ್ ನೋ ಪ್ರಾಫಿಟ್ ಬೇಸಿಸ್ ಮೇಲೆ ಕೆಲಸ ಮಾಡುತ್ತೇವೆಂದು ಹೇಳಿದ್ದಾರೆ. ಅದಕ್ಕೆ ಸುಟಬಲ್ ಲೆಜಿಸ್ಲೇಶನ್ ತರುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀಮತಿ ಬಸವರಾಜೇಶ್ವರಿ:—ಮೊದಲನೆಯದಾಗಿ ಮಾನ್ಯ ವೆಂಕಟಗಿರಿಯನಪ್ಪನವರು ಹೇಳಿರತಕ್ಕ ವಿಚಾರದಲ್ಲಿ ರಾಜಕೀಯ ಏನೂ ಮಾಡಿಲ್ಲ, ಈಗಾಗಲೇ ರಿಪೇರ್ಸ್ ಅಂಡ್ ಮೈಂಟ್‌ನೆನ್ಸ್ ಮಾಡುತ್ತಿದ್ದಾರೆ.

ಎರಡನೆಯದಾಗಿ ಮಾನ್ಯ ದೇವೇಗೌಡರು ೨-೩ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಸಹಕಾರ ತತ್ವದ ಮೇಲೆ ಈಸ್ಕೀಮುಗಳನ್ನು ಮುಂದುವರಿಸಿಕೊಂಡು ಹೋಗಬೇಕೆಂದು ತೀರ್ಮಾನ ಮಾಡಿದೆ. ಅದರ ಬಗ್ಗೆ ಈಗಾಗಲೇ ಸರ್ಕಾರ ಅನುಮತಿ ಕೊಟ್ಟಿದೆ. ಈ ರೀತಿಯಿಂದ ಕೆಲಸ ಮಾಡಿಕೊಂಡು ಹೋಗಿ ಮುಂದೆ ತೊಂದರೆ ಬಂದಾಗ ನೋಡೋಣ ಎಂದು ಹೇಳಿದ್ದಾರೆ. ಎರಡನೆಯ ವಿಚಾರ ಅವರು ಹೇಳಿರತಕ್ಕದ್ದು— ಬಜೆಟಿನಲ್ಲಿ ಎರಡು ಕೋಟಿ ರೂಪಾಯಿ ಲಿಫ್ಟ್ ಇರಿಗೇಷನ್ನಿಗೆ ಕೊಟ್ಟಿದ್ದಾರೆ. ಆ ಸ್ಕೀಮುಗಳನ್ನುಸಹ ಸರ್ಕಾರದವರು ಇನ್ನುಮುಂದೆ ಅದೇ ಪದ್ಧತಿಯಮೇಲೆ ತೆಗೆದುಕೊಂಡು ಕೆಲಸ ಮಾಡಿಸುತ್ತಾರೆ. ಅಲ್ಲಿ ಪೂರ್ಣ ಮಾಡಿರುವ ಕೆಲಸಗಳೂ ಇವೆ. ಅದಕ್ಕಾಗಿ ಕೆಲವು ಕಮಿಟಿಗಳನ್ನು ರಚನೆಮಾಡಿಕೊಂಡು ಕೆಲಸಮಾಡಬೇಕೆಂದು ಸರ್ಕಾರದ ಅಭಿಪ್ರಾಯ. ಸ್ಪಾಟುಟರಿ ಪವರ್ಸ್ ಇಲ್ಲ. ಆದ್ದರಿಂದ ಅದನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಪ್ರಸ್ತಾಪಮಾಡಿದ್ದಾರೆ. ಅದನ್ನು ಸರ್ಕಾರ ವಿಚಾರಮಾಡುತ್ತಿದೆ.

5-00 P. M.

ಶ್ರೀ ಎಚ್. ಸಿದ್ದವೀರಪ್ಪ :— ೬೮-೬೯ರಲ್ಲಿ ಸರ್ಕಾರದವರು ವಿಚಾರ ಮಾಡುತ್ತಾ ಇರಬೇಕಾದರೆ ಎಷ್ಟು ವರ್ಕ್ಸ್ ಈಗ ಆಯಿತು, ಎಷ್ಟು ಎಕರೆ ಸಾಗುವಳಿಗೆ ಬಂತು, ೧೯೬೯-೭೦ನೇ ಇಸವಿಯಲ್ಲಿ ಎ.ಆರ್.ಪಿ. ಸ್ಕೀಮುಗಳನ್ನು ತೆಗೆದುಕೊಂಡಿದ್ದಾರೆ. ಅದರಲ್ಲಿ ಎಷ್ಟು ವರ್ಕ್ಸನ್ನು ತೆಗೆದುಕೊಂಡು ಮಾಡಿದ್ದಾರೆ. ಇವರಿಗೆ ಎಷ್ಟು ಹೇಳಿದರೂ ಕೇಳುವುದಿಲ್ಲ. ನನಗೆ ಹೇಳುತ್ತಾರೆ, ಮೇಜರ್ ಇರ್ರಿಗೇಷನ್ ಸ್ಕೀಮುಗಳು ಬೆನಿಫಿಷಿಯಲ್ ಸ್ಕೀಮುಗಳು ಅವಕ್ಕೆ ಸಹಕಾರ ಕೊಡಿ ಎಂದು. ಆಗದೇ ಇರುವ ಸ್ಕೀಮುಗಳನ್ನು ತೆಗೆದುಕೊಂಡು ಅವಕ್ಕೆ ಹಣ ಹಾಕಿಕೊಂಡು ಕೆಲಸಮಾಡುತ್ತಿದ್ದಾರೆ. ಇದಕ್ಕೆ ನಗಬೇಕೋ ಅಳಬೇಕೋ ಗೊತ್ತಿಲ್ಲ.

ಶ್ರೀಮತಿ ಬಸವರಾಜೇಶ್ವರಿ :— ಮಾನ್ಯ ಸದಸ್ಯರು ಹೇಳಿದಂಥ ವಿಚಾರಕ್ಕೆ ಉತ್ತರ ನನ್ನಲ್ಲಿದೆ. ಅದನ್ನು ಓದಲಿಕ್ಕೆ ಸ್ವಲ್ಪ ತಡವಾಗುತ್ತದೆ.

ಅಧ್ಯಕ್ಷರು :— ೬ ಗಂಟೆಗೆ ಉತ್ತರ ಮುಗಿಯ ಬೇಕು.

ಶ್ರೀ ಪಿ. ವೆಂಕಟಗಿರಿಯಪ್ಪ :— ೫-೧೦ ಗಂಟೆಯವರೆಗೂ ಕೂತುಕೊಳ್ಳೋಣ. ಅರ್ಧ ಗಂಟೆ ಜಾಸ್ತಿಯಾಗಲಿ, ಪರವಾ ಇಲ್ಲ.

ಅಧ್ಯಕ್ಷರು :— ಈ ಡಿಮ್ಯಾಂಡ್‌ಗಳನ್ನು ೬ ಗಂಟೆಗೆ ಸರಿಯಾಗಿ ಓಟಿಗೆ ಹಾಕುತ್ತೇನೆ.

ಶ್ರೀ ಬಿ. ಗಂಗಣ್ಣ :— ಈಗ ನಮ್ಮಲ್ಲಿ ಸಣ್ಣ ನೀರಾವರಿ ಕೆರಗಳಿವೆ. ಅವುಗಳ ಮೇಂಟೇನ್ಸ್ ಗೋಸ್ಕರ ತಕ್ಕ ಸಿಬ್ಬಂದಿಯನ್ನು ತುಮಕೂರು ಜಿಲ್ಲೆಗೆ ಸಂಬಂಧಪಟ್ಟಹಾಗೆ ನೇಮಿಸಬೇಕೆಂದು ಹೇಳಿದ್ದರೂ ನೇಮಿಸಲಿಲ್ಲ. ಇದರಿಂದ ನೀರಿನ ಉಪಯೋಗಕ್ಕೆ ಆತಂಕವಾಗಿದೆ. ರೆಗ್ಯುಲೇಷನ್ ಆಫ್ ವಾಟರ್‌ಗೆ ಬಹಳ ಕಷ್ಟವಾಗುತ್ತದೆ.

ಶ್ರೀಮತಿ ಬಸವರಾಜೇಶ್ವರಿ :— ಅದು ಒಂದು ಜಿಲ್ಲೆಗೆ ಸಂಬಂಧಪಟ್ಟಿದ್ದು. ಅದನ್ನು ವಿಚಾರ ಮಾಡುತ್ತೇನೆ.

† ಶ್ರೀ ಎಚ್.ಸಿ. ಲಿಂಗಾರೆಡ್ಡಿ (ಮೀನುಗಾರಿಕೆ ಮತ್ತು ಬಂದರುಗಳ ರಾಜ್ಯಮಂತ್ರಿಗಳು):— ಮಾನ್ಯ ಅಧ್ಯಕ್ಷರೇ, ಬಂದರುಗಳ ಅಭಿವೃದ್ಧಿಗೆ ಸಂಬಂಧಪಟ್ಟಹಾಗೆ ಕೆಲವು ಸದಸ್ಯರು ಮಾತನಾಡಿದ್ದಾರೆ ಈಗಲೂ ಕೂಡ ಬಹಳ ಕಾಲ ಬೇಡ, ಸ್ವಲ್ಪ ಕಾಲವೇ ಸಾಕು ನನಗೆ ಎಂಬ ಅಭಿಪ್ರಾಯವನ್ನು ಸದಸ್ಯರು ವ್ಯಕ್ತಪಡಿಸುತ್ತಿದ್ದಾರೆ. ಆದ್ದರಿಂದ ನಾನು ಹೆಚ್ಚಿಗೆ ಕಾಲವನ್ನು ತೆಗೆದುಕೊಳ್ಳುವುದಿಲ್ಲ. ಕೆಲವು ಸದಸ್ಯರು ಈ ಬಂದರುಗಳ ಅಭಿವೃದ್ಧಿ ವಿಷಯದಲ್ಲಿ ಮಾತನಾಡಿದರೂ ಬಹಳ ಪ್ರಾಮುಖ್ಯವಾದ ಸೂಚನೆಗಳನ್ನು ಮತ್ತು ಸಲಹೆಗಳನ್ನು ಸರ್ಕಾರಕ್ಕೆ ಮಾಡಿದ್ದಾರೆ. ಅದಕ್ಕಾಗಿ ನಾನು ಅವರೆಲ್ಲರನೂ ಹೃತ್ಪೂರ್ವಕವಾಗಿ

(ಶ್ರೀ ಹೆಚ್. ಸಿ. ಲಿಂಗಾರೆಡ್ಡಿ)

ವಂದಿಸುತ್ತೇನೆ. ಮೊಟ್ಟಮೊದಲನೆಯದಾಗಿ ಮಂಗಳೂರು ಬಂದರನ್ನು ಜಾಗ್ರತೆಯಾಗಿ ಮುಗಿಸಬೇಕು, ಅಲ್ಲಿ ಸಾವಕಾಶವಾಗಿ ನಡೆಯುತ್ತದೆಂದು ಹೇಳಿದರು. ಇತ್ತೀಚೆಗೆ ಮಾನ್ಯ ಮುಖ್ಯಮಂತ್ರಿಗಳು ಮತ್ತು ನಾನೂ ಹೋಗಿದ್ದೆವು. ಅಲ್ಲಿ ಕೆಲಸ ಭರದಿಂದ ಸಾಗುತ್ತಿದೆ. ಅದಕ್ಕೆ ಸುಮಾರು ೧೦ ಕೋಟಿ ರೂಪಾಯಿಗಳು ಅಂದಾಜು ಆಗಿದೆ. ಈ ವರ್ಷದಲ್ಲಿ ೪ ಕೋಟಿ ೨೫ ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿದ್ದೇವೆ. ಇನ್ನು ಎರಡು ವರ್ಷಗಳಲ್ಲಿ ಅಂದರೆ ೧೯೭೨ನೇ ಇಸವಿಯೊಳಗೆ ಈ ಬಂದರಿನ ಮೊದಲನೆಯ ಹಂತದ ಕಾರ್ಯಕ್ರಮ ಪೂರ್ತಿಯಾಗಿ ಮುಗಿಯುತ್ತದೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ ಮತ್ತು ಎರಡನೆಯ ಅಂತಸ್ತಿನ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕಾಗಿದೆ. ಕೇವಲ ೩೦ ಅಡಿ ಆಳದ ಬಂದರನ್ನು ಕಟ್ಟುತ್ತೇವೆಂದರೆ ಅದು ಸಾ ದು, ೫೦ ಅಡಿ ಆಳದ ಬಂದರನ್ನು ಮಾಡಬೇಕೆಂಬ ಅಭಿಪ್ರಾಯವನ್ನು ನನ್ನ ಸ್ನೇಹಿತರು ನಿನ್ನೆ, ಇವತ್ತು ಹೇಳಿದರು. ಈ ವಿಷಯವನ್ನು ಈಗಾಗಲೇ ಭುವನೇಶ್ವರದಲ್ಲಿ ನ್ಯಾಷನಲ್ ಹಾರ್ಬರ್ ಬೋರ್ಡ್‌ನಲ್ಲಿ ಪ್ರಸ್ತಾಪಮಾಡಿದ್ದೇವೆ. ಕೇಂದ್ರ ಸರ್ಕಾರದವರ ಸಹಾಯದಿಂದ ಕುದುರೆಮುಖದ ಅದಿರು ಕಾರ್ಖಾನೆ ಯಶಸ್ವಿಯಾಗಿ ಆಗುವುದರಲ್ಲಿದೆ. ಈ ದೃಷ್ಟಿಯಿಂದ ೧೫ ಕೋಟಿ ರೂಪಾಯಿಗಳ ಖರ್ಚಿನಿಂದ ಇದನ್ನು ತೆಗೆದುಕೊಳ್ಳಬೇಕಾಗಿದೆಯೆಂದು ಕೇಂದ್ರಸರ್ಕಾರದವರು ನನಗೆ ತಿಳಿಸಿದರು. ಅದಿನ್ನೂ ಪತ್ರ ಮುಖೇನ ಮಂಜೂರಾಗಿ ಬಂದಿಲ್ಲ. ಅದರ ಬಗ್ಗೆ ಮುಖ್ಯಮಂತ್ರಿಗಳು ಮತ್ತು ನಾನು ಕೇಂದ್ರ ಸರ್ಕಾರದವರನ್ನು ಒತ್ತಾಯಪಡಿಸುತ್ತಿದ್ದೇವೆ. ದೊಡ್ಡದೊಡ್ಡ ಬಂದರುಗಳು ನಿಲ್ಲುತಕ್ಕ ೪೯ ಅಡಿ ಆಳದ ಬಂದರನ್ನು ಎರಡನೆಯ ಅಂತಸ್ತಿನಲ್ಲಿ ಮುಗಿಸಬೇಕೆಂದು ಒತ್ತಾಯಪಡಿಸುತ್ತಿದ್ದೇವೆ.

ಎರಡನೆಯದಾಗಿ ಕಾರವಾರ ಬಂದರಿನ ವಿಷಯ. ಇದಕ್ಕೆ ಸರ್ಕಾರದವರು ಬೇಕಾದಷ್ಟು ಹಣವನ್ನು ಖರ್ಚುಮಾಡಿದ್ದಾರೆ. ಸುಮಾರು ಒಂದು ಕೋಟಿ ರೂಪಾಯಿಗಳವರೆಗೂ ಖರ್ಚುಮಾಡಿ ಅದನ್ನು ಸರ್ವಋತು ಬೃಹತ್ ಬಂದರನ್ನಾಗಿ ಮಾಡಬೇಕೆಂದು ಕೇಂದ್ರಸರ್ಕಾರದವರನ್ನು ಒತ್ತಾಯಮಾಡುತ್ತಿದ್ದೇವೆ. ಕಾರಣ, ಈ ಬಂದರು ಅಭಿವೃದ್ಧಿಯಾಗುವುದಕ್ಕೆ ಬಳ್ಳಾರಿ ಮತ್ತು ಹೊಸಪೇಟೆಗಳಲ್ಲಿ ಹೇರಳವಾಗಿ ಅದುರು ಸಿಗುತ್ತದೆ. ೧೫೦ ದಶಲಕ್ಷ ಟನ್ನುಗಳಷ್ಟು ಕಬ್ಬಿಣದ ಅದುರು ಸಿಗುವುದರಿಂದ ಅದನ್ನು ಕಾರವಾರ ಮುಖಾಂತರ ಸಾಗಿಸಬೇಕಾದರೆ ಒಂದು ಟನ್ನಿಗೆ ೮ ಪೌಂಡಿನಷ್ಟು ರವಾನೆ ಚಾರ್ಜಸ್ ಕಡಿಮೆ ಆಗುತ್ತದೆಂದು ತಜ್ಞರ ಅಭಿಪ್ರಾಯ. ಆದ್ದರಿಂದ ರೈಲು ಹಾಕಿ ಈ ಬಂದರನ್ನು ಬೆಳಸಿದರೆ ಸಂಸ್ಥಾನಕ್ಕೆ ಇದರಿಂದ ಅನುಕೂಲ ಉಂಟು. ಇತ್ತೀಚೆಗೆ ಮಿತ್ಸುಯಿ ಕಂಪೆನಿಯವರು ಈ ಒಂದು ಬಂದರನ್ನು ಕಟ್ಟುವುದರಿಂದ ಇದು ಸರ್ವಋತು ಬಂದರು ಆಗುವುದಕ್ಕೆ ಅವಕಾಶವಾಗುತ್ತದೆ. ಅಲ್ಲದೆ ಇದು ಸ್ವಾಭಾವಿಕವಾಗಿ ಅಭಿವೃದ್ಧಿಯಾಗುವುದಕ್ಕೆ ಒಂದು ಒಳ್ಳೆಯ ಅವಕಾಶವಿರುವ ಬಂದರು ಎಂಬುದಾಗಿ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಮೊದಲನೆಯ ಅಂತಸ್ತಿನ ಪ್ರಕಾರ ೬ ಕೋಟಿ ರೂಪಾಯಿಗಳು ಖರ್ಚಾಗುತ್ತದೆ. ೨೦ ಲಕ್ಷ ಟನ್ನುಗಳಷ್ಟು ಕಬ್ಬಿಣದ ಅದುರನ್ನು ರೈಲು ಹಾಕುವುದಕ್ಕೆ ಮೊದಲೇ ಸಾಗಿಸುವುದಕ್ಕೆ ಆ ಕಂಪನಿಯ ಪರದಿ ಪ್ರಕಾರ ಅವಕಾಶವಿದೆಯೆಂದು ಶ್ರೀಮಾನ್ ಜಾಲಿಸತ್ತಿಯವರು ಸಲಹೆ ಮಾಡಿದ್ದಾರೆ. ಅದು ಸರ್ಕಾರದ ಪರಿಶೀಲನೆಯಲ್ಲಿದೆಯೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಉಳಿದ ಮೈನರ್ ಬಂದರುಗಳಿಗೆ ಅಂದರೆ, ಭಟ್ಕಳ್, ಹೊನ್ನಾವರ ಮತ್ತು ಕುಂದಾಪುರ ಇವುಗಳಿಗೆ ಕ್ರಮವಾಗಿ ೨೫ ಲಕ್ಷ ರೂಪಾಯಿಗಳು, ೧೫ ಲಕ್ಷ ರೂಪಾಯಿಗಳು ಮತ್ತು ೨೫ ಲಕ್ಷ ರೂಪಾಯಿಗಳು ಖರ್ಚುಮಾಡಿ ಇವನ್ನು ಸಣ್ಣ ಬಂದರುಗಳನ್ನಾಗಿ ಅಭಿವೃದ್ಧಿಪಡಿಸುತ್ತಿದ್ದೇವೆ. ಆದರೆ ಈ ಸಣ್ಣ ಬಂದರುಗಳ ಮುಖಾಂತರ ಕಬ್ಬಿಣದ ಅದುರನ್ನು ನಾವು ಬೇರೆ ಕಡೆಗಳಿಗೆ ರಫ್ತು ಮಾಡುವುದಕ್ಕೆ ಹೆಚ್ಚಿನ ಅವಕಾಶ ಇದ್ದಹಾಗೆ ಕಾಣುವುದಿಲ್ಲ. ಆದ್ದರಿಂದ ಈಗ ಮಂಗಳೂರು ಬಂದರನ್ನು ಅಭಿವೃದ್ಧಿ ಪಡಿಸಿದ ಮೇಲೆ ಮತ್ತು ಅದರ ಮೇಲೆ ಹೆಚ್ಚಿನ ಗಮನವನ್ನು ಕೇಂದ್ರೀಕರಿಸಿದ ನಂತರ ಕಾರವಾರ ಬಂದರನ್ನು ಅಭಿವೃದ್ಧಿ ಪಡಿಸುವ ಬಗ್ಗೆ ಹೆಚ್ಚಿನ ಗಮನವನ್ನು ಕೊಡುತ್ತೇವೆ. ಇನ್ನುಳಿದ ಬಂದರುಗಳ ಬಗ್ಗೆ ಈಗಾಗಲೇ ಕಾಣಿಸಿರುವ ಸೌಕರ್ಯಗಳನ್ನು ಎತ್ತಷ್ಟು ಒದಗಿಸಬೇಕೋ ಅಷ್ಟನ್ನೂ ಒದಗಿಸುತ್ತಿದ್ದೇವೆ. ಮಿನಿಮಂ ಲೈಟ್ ಮತ್ತು ನ್ಯಾವಿಗೇಷನ್ ಏಡ್ಸನ್ನು ಒದಗಿಸಬೇಕೆಂದು ವ್ಯವಸ್ಥೆಮಾಡುತ್ತಿದ್ದೇವೆ. ಕಾರ್ಗೊ ಫ್ಲೋಟ್ಸ್‌ಗಳನ್ನು ಫಿಷರಿ ಹಾರ್ಬರ್‌ಗಳಾಗಿ ಅಭಿವೃದ್ಧಿಪಡಿಸಬೇಕೆಂಬ ದೃಷ್ಟಿಯಿಂದ ಮಲ್ಪೆ ಮತ್ತು ಹೊನ್ನಾವರ ಬಂದರುಗಳಿಗಾಗಿ ೨೦ ಕೋಟಿ ರೂಪಾಯಿಗಳನ್ನು ಖರ್ಚುಮಾಡಿ ಅವನ್ನು ಬೃಹತ್ ಮೇಜರ್ ಬಂದರುಗಳಾಗಿ ಅಭಿವೃದ್ಧಿಮಾಡಬೇಕೆಂದು ಇಂಡಿಯಾ ಸರ್ಕಾರದವರಲ್ಲಿ ಪತ್ರ ವ್ಯವಹಾರವನ್ನು ಮಾಡುತ್ತಿದ್ದೇವೆ. ಅದಕ್ಕಾಗಿ ಸರ್ವೆ ಮತ್ತು ಪ್ರಾಜೆಕ್ಟ್ ರಿಪೋರ್ಟ್‌ಗಳನ್ನು ತಯಾರುಮಾಡಿ ಇನ್ನು ಎರಡು ಮೂರು ತಿಂಗಳುಗಳಲ್ಲಿ ಈ ಕೆಲಸಗಳು ಪ್ರಾರಂಭವಾಗತಕ್ಕ ಪ್ರಯತ್ನದಲ್ಲಿದ್ದೇವೆ. ಸುಮಾರು ೧೯೭೩ ಸಣ್ಣ ಬಂದರುಗಳಿಗೆ ನೀರು ಮತ್ತು ವಿದ್ಯುಚ್ಛಕ್ತಿ ಸ್ಕೀಮುಗಳನ್ನು ಅಭಿವೃದ್ಧಿಪಡಿಸುವ ಸಲುವಾಗಿ ತಕ್ಕ ಕಾರ್ಯಕ್ರಮಗಳನ್ನು ಈಗಾಗಲೇ ಕೈಗೊಂಡಿದ್ದೇವೆ. ಮಂಗಳೂರು ಪೋರ್ಟ್‌ಗಳಲ್ಲಿಯೂ ಕೂಡ

ಕೆಲಸಗಳು ಭರದಿಂದ ಸಾಗುತ್ತಿವೆ. ಕಾರವಾರ ಮತ್ತು ಮಂಗಳೂರು ಹಾಗೂ ಇನ್ನೊಸಣ್ಣ ಬಂದರುಗಳೂ ಸೇರಿ ೧೬ ಲಕ್ಷ ೪೫ ಸಾವಿರ ಟನ್ನುಗಳಷ್ಟು ಪದಾರ್ಥಗಳನ್ನು ಬೇರೆ ಕಡೆಗೆ ಸುಮಾರು ಎಂಡೂವರೆ ಕೋಟಿ ರೂಪಾಯಿಗಳ ಖರ್ಚಿನಲ್ಲಿ ರವಾನಿಸುವಂಥ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸುತ್ತಿದ್ದೇವೆ.

ಇದರ ಪೈಕಿ ಸುಮಾರು ೬ ಲಕ್ಷ ಟನ್‌ನಷ್ಟು ಸಾಮಾನು ಸರಂಜಾಮು ಕಬ್ಬಿಣ ಮತ್ತು ಅದಿರನ್ನು ಬೇರೆ ಕಡೆಗೆ ರವಾನಿಸುವ ವಿಷಯವಾಗಿದೆ. ಎಂ. ಎಂ. ಟಿ. ಎಂ. ಎ. ಟಿ ಸಿ ಸಂಸ್ಥೆಗಳು ಏನಿವೆ ಅದು ನಮ್ಮ ಬಳ್ಳಾರಿ ಜಿಲ್ಲೆಯ ಕಬ್ಬಿಣದ ಅದಿರನ್ನು ಕಾರವಾರ ಮತ್ತು ನಮ್ಮ ಸಂಸ್ಥಾದ ಇತರ ಬಂದರುಗಳ ಮುಖಾಂತರ ಬೇರೆ ಕಡೆಗೆ ಕಳುಹಿಸುವ ವಿಷಯವಾಗಿ ಮಾತು, ಬಂದರುಗಳ ಸಂಪೂರ್ಣ ಸಾಮರ್ಥ್ಯವನ್ನು ಉಪಯೋಗಿಸಿಕೊಳ್ಳುವ ವಿಷಯವಾಗಿ ಆಗಬೇಕು ಎನ್ನುವ ಒತ್ತಾಯ ಸಂಸ್ಥೆಗಳ ಮೇಲೂ ಮತ್ತು ಕೇಂದ್ರ ಸರಕಾರದ ಮೇಲೂ ತೀವ್ರತಕ್ಕ ವಿಷಯವಾಗಿ ಮಾಡಿದ್ದೇವೆ. ಬಂದರುಗಳನ್ನು ಅಭಿವೃದ್ಧಿ ಪಡಿಸಿಕೊಳ್ಳಬೇಕಾದರೆ ಇನ್ನೂ ಹೆಚ್ಚಿನ ಹಣ ಕೊಡಬೇಕಾಗುತ್ತದೆ. ಕಾರವಾರ ಬಂದರನ್ನು ಕಾರ್ಪೊರೇಷನ್ ಆಗಿ ರಚನೆ ಮಾಡಿ ಎಂದು ಶ್ರೀನಿವಾಸನಾಯಕರು ಹೇಳುತ್ತಿದ್ದಾರೆ. ಫಿಷರೀಸ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಮಾಡಬೇಕೆಂದು ವಿಚಾರ ನಡೆಯುತ್ತಾ ಇದೆ. ಫಿಷರೀಸ್ ಬಂದರುಗಳನ್ನು ಅಭಿವೃದ್ಧಿ ಮಾಡುವುದಕ್ಕೆ ಅವಕಾಶ ಇದೆ. ಕಂಗೋ ಪೋರ್ಟ್‌ನ್ನು ಅಭಿವೃದ್ಧಿ ಪಡಿಸಲು ಹಣ ಬೇಕು, ಅದಕ್ಕೂ ಕೂಡ ಕಾರ್ಪೊರೇಷನ್ ಮಾಡುವುದು ಪರಿಶೀಲನೆ ಮಾಡಬೇಕಾದಂಥಹ ವಿಷಯ. ಇಂಡಿಯಾ ಸರಕಾರದವರು ವಾಟರ್ ಟ್ರಾನ್ಸ್ಪೋರ್ಟ್ ಕಾರ್ಪೊರೇಷನ್ ಮಾಡಿ ಎಂದು ಒಂದು ಮಸೂದೆಯನ್ನು ತಯಾರು ಮಾಡಿ ಕಳುಹಿಸಿದ್ದಾರೆ. ಅದರಲ್ಲಿ ನೀವು ಹೇಳಿದ ಕಾರವಾರ ಪೋರ್ಟ್ ಟ್ರಸ್ಟ್ ಮಾಡಬೇಕು ಎನ್ನುವ ವಿಷಯವನ್ನು ಆಲೋಚನೆ ಮಾಡುತ್ತಿದ್ದೇವೆ. ಅವುಗಳ ಮುಖಾಂತರ ಹೆಚ್ಚಿನ ಹಣ ಕೊಡಿಸಿ ಬಂದರುಗಳನ್ನು ಹೆಚ್ಚು ಅಭಿವೃದ್ಧಿ ಪಡಿಸಲು ಸಾಧ್ಯವೇ ಎಂದು ವಿಚಾರ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ ಎನ್ನತಕ್ಕಂಥ ಭರವಸೆ ಕೊಟ್ಟು ಮಾನ್ಯ ಸದಸ್ಯರು ಬೇಡಿಕೆಗಳನ್ನು ಒಪ್ಪಿಕೊಳ್ಳಬೇಕು ಎಂದು ಪ್ರಾರ್ಥನೆ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ. ಕೆ. ಲಕ್ಕಪ್ಪ (ಲೋಕೋಪಯೋಗಿ ಶಾಖೆಯ ಮಂತ್ರಿಗಳು);— ಸಭಾಪತಿಗಳೇ, ಮೂರು ದಿವಸಗಳಿಂದ ಅವಿರತವಾಗಿ ಲೋಕೋಪಯೋಗಿ ಖಾತೆಯ ಬೇಡಿಕೆ ಬಗ್ಗೆ ಚರ್ಚೆ ನಡೆದಿದೆ. ಅನೇಕ ಮಾನ್ಯ ಸದಸ್ಯರುಗಳು ಒಳ್ಳೆ ಉಪಯುಕ್ತವಾದಂಥ ಮತ್ತು ಸರಕಾರದ ಗಮನವನ್ನು ಸೆಳೆಯುವಂಥ ಸಲಹೆಗಳನ್ನು ಕೊಟ್ಟಿದ್ದಾರೆ. ಈ ರೀತಿಯಾದಂತಹ ರಚನಾತ್ಮಕವಾದ ಸಲಹೆಗಳಿಗೆ ಯಾವತ್ತೂ ಸರಕಾರದ ಕಡೆಯಿಂದ ಸ್ವಾಗತ ಇದೆ. ಎಂಬ ಮಾತನ್ನು ಹೇಳಬಯಸುತ್ತೇನೆ. ನನ್ನ ಮನಸ್ಸಿಗೆ ಸ್ವಲ್ಪ ಸಮಾಧಾನಕರ ಎಂದರೆ ನನಗೆ ಸಂಬಂಧಪಟ್ಟ ಖಾತೆ ಮೇಲೆ ಕಟುವಾದಂಥ ಟೀಕೆಗಳು ಬಂದಿಲ್ಲ. ಮಿತ್ರರಾದಂಥ ಶ್ರೀಮಾನ್ ಶಿವಪ್ಪನವರು ಮಾತ್ರ ಸ್ವಲ್ಪ ಕಟುವಾಗಿ ಟೀಕಿಸಿದ್ದಾರೆ. ಆದರೆ ಅದು ಕಟುವಾದಂಥ ಟೀಕೆ ಎಂದು ನನಗಾದರೂ ಅನ್ನಿಸುವುದಿಲ್ಲ. ಕಾರಣವಾದರೂ ನಾನು ಸಹ ಒಪ್ಪಬಹುದಾದಂಥ ಕೆಲವು ಲೋಪದೋಷಗಳನ್ನು ಅವರು ಎತ್ತಿ ತೋರಿಸಿದ್ದಾರೆ. ಹಾಗೆ ಹೇಳತಕ್ಕಂಥ ಕಾಲದಲ್ಲಿ ಅದನ್ನು ಸ್ವಲ್ಪ ಕಟ್ಟುನಿಟ್ಟಾಗಿ ಭದ್ರವಾಗಿ ಹೇಳಿದ್ದಾರೆ. ಸಹಜ ಟೀಕೆಗಳು ಬಂದಿಲ್ಲ. ಅಂದ ಮಾತ್ರಕ್ಕೆ. ಈ ಲೋಕೋಪಯೋಗಿ ಖಾತೆಯಲ್ಲಿ ಎಲ್ಲಾ ಕೆಲಸಗಳು ಸಹ ತೃಪ್ತಿಕರವಾಗಿ ನಡೆಯುತ್ತಾ ಇದೆ. ಹಾಗೆ ಅಂದುಕೊಳ್ಳುವ ಉದ್ಧಟತನದ ಮಾತನ್ನು ಹೇಳುವುದಕ್ಕೆ ಹೋಗುವುದಿಲ್ಲ. ಅನೇಕ ಮಾನ್ಯ ಸದಸ್ಯರು ಹೇಳಿದ ಹಾಗೆ ಕೆಲವು ಲೋಪದೋಷಗಳು ಇವೆ. ಈ ಲೋಪದೋಷಗಳನ್ನು ಸರಿಪಡಿಸಲಿಕ್ಕೆ ಮಾನ್ಯ ಸದಸ್ಯರಗಳು ಹೆಚ್ಚಿನ ಸಹಕಾರ ಮತ್ತು ಹೆಚ್ಚಿನ ಉಪಯುಕ್ತವಾದ ಸಲಹೆಗಳು ಬಂದ ಪಕ್ಷದಲ್ಲಿ ಹೆಚ್ಚು ಉಪಕಾರವಾದೀತು ಎಂದು ನಾನು ನಿರೀಕ್ಷಣೆ ಮಾಡುತ್ತೇನೆ. ಕೆಲವು ಮಿತ್ರರು ಮಾತನಾಡುತ್ತಾ ರಾಜ್ಯದಲ್ಲಿ ಸಾಕಷ್ಟು ರಸ್ತೆ ಸಾರಿಗೆ ವ್ಯವಸ್ಥೆ ಆಗಿಲ್ಲ ಎನ್ನತಕ್ಕ ಮಾತನ್ನು ಹೇಳಿದರು. ಅಂಕಿ ಅಂಶಗಳನ್ನು ತಮ್ಮ ಮುಂದೆ ನೀಡುವುದಾದರೆ ನಮ್ಮ ಇಂಡಿಯಾ ದೇಶದ ಅನೇಕ ರಸ್ತೆಗಳನ್ನು ಹೋಲಿಸಿಕೊಂಡು ನೋಡುವುದಾದರೆ ನಮ್ಮ ಮೈಸೂರು ರಾಜ್ಯದಲ್ಲಿ ಎಲ್ಲಾ ರಾಜ್ಯಗಳಿಗಿಂತಲೂ ಸಹ ಹೆಚ್ಚಿನ ಪ್ರಮಾಣದಲ್ಲಿ ರಸ್ತೆಗಳನ್ನು ಮಾಡಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು ನಾನು ಅಂದು ಕೊಂಡಿದ್ದೇನೆ ಕೆಲವು ವರ್ಷಗಳ ಹಿಂದೆ ೧೯೬೧ನೇ ಸಾಲಿನಲ್ಲಿ ಆಲ್ ಇಂಡಿಯಾ ರೋಡ್ಸ್ ಹಾಗೆ ಒಂದು ಸಮಿತಿ ಸೇರಿ ೨೦ ವರ್ಷಗಳ ಅವಧಿಯಲ್ಲಿ ಎಷ್ಟು ರಸ್ತೆಗಳನ್ನು ನಿರ್ಮಾಣ ಮಾಡಬೇಕು ಎಂದು ಒಂದು ತೀರ್ಮಾನವನ್ನು ತೆಗೆದುಕೊಂಡಿದ್ದರು. ಆ ತೀರ್ಮಾನದ ಪ್ರಕಾರ ನಮ್ಮ ರಾಜ್ಯದಲ್ಲಿ ೧೯೮೧ನೇ ಸಾಲಿಗೆ ಸುಮಾರು ೪೨ ಸಾವಿರ ೫೬೦ ಮೈಲಿ ರಸ್ತೆಗಳನ್ನು ನಾವು ಮಾಡಬೇಕಾಗುತ್ತದೆ. ಆದರೆ ಈಗಾಗಲೇ ನಾವು ೩೯ ಸಾವಿರ ೨೭ ಮೈಲ ರಸ್ತೆಗಳನ್ನು ನಮ್ಮ ರಾಜ್ಯದಲ್ಲಿ ಮಾಡಿದ್ದೇವೆ. ಇನ್ನು ಉಳಿದಿರದ್ದನ್ನು ೧೦ ವರ್ಷಗಳ ಅವಧಿಯಲ್ಲಿ ಮಾಡಬೇಕಾಗುತ್ತದೆ. ಈಗಿನ ವೇಗದಲ್ಲಿ ಹೋಗುವುದೆಂದರೆ, ೧೦ ವರ್ಷಗಳ ಅವಧಿಯಲ್ಲಿ ಯಾವ ನಿರೀಕ್ಷಣೆ ಇದೆಯೋ ಆ ನಿರೀಕ್ಷಣೆಯನ್ನು ಮುಟ್ಟಿ ಮುಂದೆ ಹೋಗಬಹುದಾದ ಸಾಧ್ಯತೆ ಇದೆ, ಎಂದು ನಾನಾದರೂ ಅಂದು ಕೊಂಡಿದ್ದೇನೆ. ಇಡೀ ಇಂಡಿಯಾದ ಅವರೇಜ್

(ಶ್ರೀ ಕೆ. ಲಕ್ಕಪ್ಪ)

ಚಿತ್ರದ ಮೇಲೆ ಳಳ, ಮೈಲಿ ಇದ್ದರೆ ನಮ್ಮ ಮೈಸೂರು ರಾಜ್ಯದಲ್ಲಿ ಈಗಾಗಲೇ, ೫೩ ಮೈಲಿಗಳಷ್ಟು ರಸ್ತೆ-ಗಳನ್ನು ನಾವು ಸಾಧಿಸಿದ್ದೇವೆ. ಆದರೆ ೫೩ ಮೈಲಿಗಳಷ್ಟು ರಸ್ತೆಗಳನ್ನು ಮಾಡಿದ್ದೇವೆ ಅಂತ ಹೇಳುವ ಕಾಲದಲ್ಲಿ ಶ್ರೀಮಾನ್ ಶಿವಪ್ಪನವರು ಹೇಳಿ ಹಾಗೆ ಎಲ್ಲಾ ರಸೆ ಗಳನ್ನೂ ಉತ್ತಮವಾದ ರೀತಿಯಲ್ಲಿ ಮಾಡಿದ್ದೀಪೆ ಅಂತ ನನಗೂಹೂ ಹೇಳಲಿಕ್ಕೆ ಸಾಧ್ಯವಿಲ್ಲ. ನಾವು ಹೆಚ್ಚು ರಸ್ತೆಗಳನ್ನು ಮಾಡಿದ್ದೇವೆ. ಈ ಕಾರಣದಿಂದ ಎಲ್ಲಾ ರಸ್ತೆಗಳನ್ನೂ ಸಹ ನಾವು ನಿರೀಕ್ಷಣೆ ಮಾಡುವಷ್ಟು ಮಟ್ಟದ ಮಟ್ಟಿಗೆ ಮಾಡಲಿಕ್ಕೆ ಸಾಧ್ಯವಾಗಲಲ್ಲ ಎನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರ ಶ್ರೀಮಾನ್. ಶಿವಪ್ಪನವರು ಹೇಳಿದಾಗೆ ಮೊಣ ಕಾಲು ಉದ್ದಗುಂಡಿಗಳು ಇರತಕ್ಕ ರಸ್ತೆಗಳು ಯಾವುದೂ ನೋಡಲಿಲ್ಲ ಪ್ರಾಯಶಃ ಅದು ಹಳ್ಳಿಗಾಡಿನಲ್ಲಿ ಇರತಕ್ಕ ರಸ್ತೆಗಳಿರಬಹುದು ಮಿರ್ಜಾರವರ ಕಾಲದ ರಸ್ತೆಗಳನ್ನು ತೆಗೆದುಕೊಂಡು ಪ್ರಸ್ತಾಪ ಮಾಡಿದರು, ಶ್ರೀಮಾನ್ ಮಿರ್ಜಾರವರ ಕಾಲದಲ್ಲಿ ಯಾವ ರಸ್ತೆಗಳು ಆಗಿವೆಯೋ ಆ ರಸ್ತೆಗಳು ಈವೊತ್ತು ನಾಲ್ಕಾರು ಪಟ್ಟು ಉತ್ತಮವಾದಂಥ ರೀತಿಯಲ್ಲಿ ಆಗಿವೆ ಎಂದು ಹೇಳಿದರೆ ತಪ್ಪಾಗಲಾರದು ಎಂದು ತಿಳಿದುಕೊಂಡಿದ್ದೇನೆ. ಆ ಕಾಲದಲ್ಲಿ ಕೆಲವೇ ರಸ್ತೆಗಳಿಗೆ ಮಾತ್ರ ಟಾರು ಹಾಕಿದ್ದು ಮಿಕ್ಕ ರಸ್ತೆಗಳಿಗೆ ಟಾರು ಹಾಕಿರಲಿಲ್ಲ. ಕೆಲವು ಕಡೆ ಮತ್ತು ಸಿಮೆಂಟ್ ಕಾಂಕ್ರೀಟ್ ರಸ್ತೆ ಆಗಿತ್ತು. ಈ ರಸ್ತೆಗಳೆಲ್ಲವು ಈಗ ಉತ್ತಮ ಮೆಟಲ್ ರಸ್ತೆಗಳಾಗಿ ಉತ್ತಮವಾದಂಥ ಟಾರ್ ರಸ್ತೆಗಳಾಗಿವೆ. ಅನೇಕ ಜನ ಮೈಸೂರು ರಾಜ್ಯದಲ್ಲಿ ಪ್ರವಾಸ ಮಾಡಿಕೊಂಡು ಹೋದಂಥವರು ಮೈಸೂರು ರಾಜ್ಯದಲ್ಲಿ ಉತ್ತಮವಾದಂಥ ರೀತಿಯಲ್ಲಿ ರಸ್ತೆಗಳು ಇವೆ ಎಂದು ಹೇಳಿದ್ದನ್ನು ನಾನು ಅಹಮದಬಾದಿಗೆ ಹೋದಾಗ ಕೇಳಿದೆ. ಎಲ್ಲಾ ರಸ್ತೆಗಳ ಉತ್ತಮವಾಗಿದೆ ಎಂದು ಹೇಳುವ ಗೋಜಿಗೆ ಹೋಗುವುದಿಲ್ಲ. ಮುಖ್ಯವಾಗಿ ರಸ್ತೆಗಳು ಬಹಳ ಮಟ್ಟಿಗೆ ಉತ್ತಮವಾದ ರೀತಿಯಲ್ಲಿ ನಾವು ರಸ್ತೆಗಳನ್ನು ಮಾಡಿದ್ದೇವೆ.

ರಸ್ತೆಗಳನ್ನು ಬಹಳ ದೊಡ್ಡ ಪ್ರಮಾಣದಲ್ಲಿ ಮಾಡಿದ್ದೇನೆ ಎಂಬುದನ್ನು ವಿವರಿಸಿದ್ದೇನೆ. ಅದೇ ರೀತಿ ಸೇತುವೆಗಳನ್ನೂ ಸಹ ಹೆಚ್ಚು ಪ್ರಮಾಣದಲ್ಲಿ ಮಾಡಿದ್ದೇನೆ ಎಂದು ಹೇಳಬಯಸುತ್ತೇನೆ. ೧೯೫೬ರಲ್ಲಿ ಕೇವಲ ೨೨೭ ಸೇತುವೆಗಳು ಇದ್ದದ್ದು ಇಂದು ೫೭೭ ಸೇತುವೆಗಳು ಆಗಿವೆ, ಇದರಲ್ಲಿ ಸಣ್ಣ ಸೇತುವೆಗಳು ಸೇರಿಲ್ಲ, ೧೦೦ ಅಡಿಗಳಿಗಿಂತಲೂ ಅಗಲವಾಗಿರತಕ್ಕ ದೊಡ್ಡ ಸೇತುವೆಗಳನ್ನು ಅಂದರೆ ಮೇಜರ್ ಸೇತುವೆಗಳನ್ನು ೧೩ ವರ್ಷಗಳ ಅವಧಿಯಲ್ಲಿ ಸುಮಾರು ೨೯೦ನ್ನು ಕಟ್ಟಿದ್ದೇವೆ, ಇನ್ನೂ ಅನೇಕ ಸೇತುವೆಗಳನ್ನು ಕಟ್ಟಬೇಕೆಂದು ಮಂಜೂರು ಸಹ ಮಾಡಿದ್ದೇವೆ. ಇನ್ನು ದೊಡ್ಡ ರಸ್ತೆಗಳನ್ನು ಮಾಡುವುದರ ಜೊತೆಗೆ ಈ ರಸ್ತೆಗಳನ್ನು ಗ್ರಾಮ ಗ್ರಾಮಕ್ಕೂ ಸಹ ಹಬ್ಬಬೇಕೆಂಬುದು ನಮ್ಮ ಆಶೆಯಾಗಿದೆ. ಗ್ರಾಮಾಂತರದಲ್ಲಿ ಬೆಳೆಕನ್ನು ಚೆಲ್ಲಬೇಕಾದರೆ ರಸ್ತೆಗಳ ಅವಶ್ಯಕತೆ ಹೆಚ್ಚಿನದು ಎಂಬುದನ್ನು ಸರ್ಕಾರ ಮನಗಂಡಿದೆ. ಈ ಕಾರಣದಿಂದ ಈ ಕೆಲವು ವರ್ಷಗಳ ಅವಧಿಯಲ್ಲಿ ಯಾವ ರಾಜ್ಯವೂ ಸಹ ಮಾಡಿಲ್ಲದಷ್ಟು ಹೆಚ್ಚು ಪ್ರಮಾಣದಲ್ಲಿ ಗ್ರಾಮಾಂತರ ರಸ್ತೆಗಳನ್ನು ಮಾಡಿದ್ದೇವೆ. ಸುಮಾರು ೧೨ ಸಾವಿರ ಮೈಲಿ ರಸ್ತೆ ಆಗಿದೆ, ಇನ್ನೂ ಮಾಡಬೇಕೆಂದು ಆಶೆ ಇದೆ. ಇರತಕ್ಕ ಹಣವ ಮಿತಿಯಲ್ಲಿ ಹೆಚ್ಚು ಕೆಲಸ ಮಾಡುವುದು ಸ್ವಲ್ಪ ಕಷ್ಟವಾಗುತ್ತಾ ಇದೆ. ಇತ್ತೀಚೆಗೆ ಹೊಸದಾಗಿ ಗ್ರಾಮಾಂತರಗಳಲ್ಲಿ ಹೆಚ್ಚು ರಸ್ತೆಗಳನ್ನು ಮಾಡುವುದಕ್ಕೆ ಹೋಗಿಲ್ಲವೆಂಬುದನ್ನು ಒಪ್ಪಿಕೊಳ್ಳುತ್ತೇನೆ. ಈಗ ಮಾಡಿರತಕ್ಕ ರಸ್ತೆಗಳನ್ನು ಉತ್ತಮವಾದ ರೀತಿಯಲ್ಲಿ ಇಟ್ಟುಕೊಳ್ಳಬೇಕೆಂಬ ದೃಷ್ಟಿಯಿಂದ ಈ ರಸ್ತೆಗಳನ್ನು ತಾಲ್ಲೂಕು ಬೋರ್ಡುಗಳಿಗೆ ವಹಿಸಿದ್ದೇವೆ. ಅನೇಕ ಮಾನ್ಯ ಸದಸ್ಯರು ತಾಲ್ಲೂಕು ಬೋರ್ಡುಗಳಿಗೆ ಹಣ ಇಲ್ಲ ಅವರು ಅದನ್ನು ಮೇಂಟೇನ್ ಮಾಡುವಾಗ ತಾವು ೧೫೦ ರೂಪಾಯಿ ಕೊಡುವುದು ಸಾಲುವುದಿಲ್ಲ ಎಂಬ ಮಾತನ್ನು ಪ್ರಸ್ತಾಪ ಮಾಡಿದ್ದಾರೆ. ನಾವು ಈ ರಸ್ತೆಗಳನ್ನು ತಾಲ್ಲೂಕು ಬೋರ್ಡುಗಳಿಗೆ ವಹಿಸುವಾಗ ಹಣವನ್ನು ಕೊಡದೇ ಸುಮ್ಮನೆ ವಹಿಸುತ್ತಾ ಇಲ್ಲ. ಸರ್ಕಾರದ ಬೊಕ್ಕಸಕ್ಕೆ ಕಂದಾಯದ ರೂಪದಲ್ಲಿ ಬರತಕ್ಕ ಎಲ್ಲಾ ಹಣವನ್ನೂ ಸಹ ತಾಲ್ಲೂಕು ಅಭಿವೃದ್ಧಿ ಮಂಡಲಿ ಮತ್ತು ಪಂಚಾಯ್ತಿಗಳಿಗೆ ಕೊಟ್ಟು ಈ ಕೆಲಸವನ್ನು ಮಾಡಿಸುತ್ತಾ ಇದ್ದೇವೆ. ಅವರು ಎಷ್ಟು ಹಣವನ್ನು ಮೇಂಟೆನ್ಸ್‌ಗಾಗಿ ಕೊಡುತ್ತಾರೆಯೋ ಖರ್ಚು ಮಾಡತ್ತಾರೆಯೋ ಆದರಲ್ಲಿ ೫೦ ಪರ್ಸೆಂಟ್ ಸರ್ಕಾರದಿಂದ ಕೊಡುತ್ತೇವೆ ಎಂದು ಹೇಳಿ ಹೀಗಿರುವಾಗ ಇದರ ಮೇಲೆ ಏಕೆ ಕೊಕ್ಕೆ ಹಾಕಿಕೊಂಡಿದ್ದೀರಿ, ಖರ್ಚು ಮಾಡಿದ್ದಾರೆ ಎಂದು ಪಿಡಬ್ಲ್ಯುಡಿ ಅವರು ಸರ್ಟಿಫೈ ಮಾಡಿದ ಮೇಲೆ ೧೫೦ ರೂಪಾಯಿ ಕೊಡುತ್ತೇವೆ ಅಂತ ಏಕೆ ಕಂಡೀಷನ್ ಹಾಕಿದ್ದೀರಿ, ಅವರ ಮೇಲೆ ನಂಬಿಕೆ ಇಲ್ಲವೇ ಎಂಬ ವಿಷಯವನ್ನು ಪ್ರಸ್ತಾಪ ಮಾಡಿದರು. ನಾನು ಈಗ ಹೇಳುವುದೆನ್ನು ತಾವೆಲ್ಲರೂ ಒಪ್ಪುತ್ತೀರಿ ಎಂದು ತಿಳಿದಿದ್ದೇನೆ, ಅವರ ಮೇಲೆ ಅಪನಂಬಿಕೆ ಇಲ್ಲ ಈ ಕೆಲಸ ತೃಪ್ತಿಕರವಾಗಿ ಮಾಡಲಿ ಎಂಬ ಆಶೆಯಿಂದ ಈ ಕಂಡೀಷನ್‌ನ್ನು ಹಾಕಿದ್ದೇವೆಯೇ ಹೊರತು ಮೇಲೆ ಒಬ್ಬರು ನೋಡುವವರು ಇದ್ದರೆ ಖರ್ಚು ಮಾಡುತ್ತಾರೆ ಖರ್ಚು ಮಾಡದಿದ್ದರೆ ಸರ್ಟಿಫೈ ಆಗುವುದಿಲ್ಲ ಎಂಬ ಭೀತಿ ಇರಲಿ ಎಂಬ ದೃಷ್ಟಿಯಿಂದ ಮಾಡಿದ್ದೇವೆ. ಈ ರಸ್ತೆಗಳು ಇತರ ಪಿಡಬ್ಲ್ಯುಡಿ ರಸ್ತೆಗಳಿಗೆ ಸರಿಸಮಾನವಾಗಿ

ಇರಬೇಕೆಂಬ ಉದ್ದೇಶ ಇಲ್ಲ. ಇವು ಕೊನೆಯ ಹುತದ ರಸ್ತೆಗಳು, ಗ್ರಾವಲ್ ರೋಡ್ಸ್ ಆಗಿ ಉಳಿಯ ಬೇಕೇ ಹೊರತು ದೊಡ್ಡ ರಸ್ತೆಗಳಾಗಬೇಕೆಂಬ ಉದ್ದೇಶ ಇಲ್ಲ, ಆದ್ದರಿಂದ ಇದಕ್ಕೆ ಹೆಚ್ಚು ಹಣವನ್ನು ಖರ್ಚು ಮಾಡುವುದಕ್ಕೆ ಸಾಧ್ಯತೆ ಇಲ್ಲ.

ನಮ್ಮ ರಾಜ್ಯದಲ್ಲಿ ನ್ಯಾಷನಲ್ ಹೈವೇಸ್ ಸಾಕಾದಷ್ಟು ಇಲ್ಲ, ಅದನ್ನು ಒಪ್ಪಿಕೊಳ್ಳುತ್ತೇನೆ. ಆಲ್ ಇಂಡಿಯಾ ಪ್ಲಾನ್ ಪ್ರಕಾರ ನಮ್ಮ ರಾಜ್ಯದಲ್ಲಿ ೧೯೮೦ನೇ ಸಾಲಿನ ವೇಳೆಗೆ ಸುಮಾರು ೨೪೧೮ ಮೈಲಿಗಳಷ್ಟು ಆಗಬೇಕಾಗುತ್ತದೆ. ಹಾಲಿ ಕೇವಲ ೭೯೮ ಮೈಲಿಗಳಷ್ಟು ಮಾತ್ರ ಇದೆ. ಇದನ್ನು ತೆಗೆದುಕೊಳ್ಳತಕ್ಕವರು ಕೇಂದ್ರ ಸರ್ಕಾರದವರು, ಈಗಾಗಲೇ ನಾವು ಸುಮಾರು ೧೩ ರಸ್ತೆಗಳನ್ನು ನ್ಯಾಷನಲ್ ಹೈವೇ ಆಗಿ ಪರಿವರ್ತನೆ ಮಾಡಬೇಕೆಂದು ಬಹಳ ದಿವಸದಿಂದ ಅವರೊಡನೆ ಪತ್ರವ್ಯವಹಾರ ಮಾಡುತ್ತಾ ಇದ್ದೇವೆ, ಇವತ್ತಿನವರೆಗೂ ಯಾವುದನ್ನೂ ಆ ರೀತಿ ಮಾಡಿ ಡಿಕ್ಲೇರ್ ಮಾಡಿಲ್ಲ, ಮೊನ್ನೆತಾನೆ ನಾನು ದೆಹಲಿಗೆ ಹೋಗಿದ್ದಾಗ ಸಂಬಂಧಪಟ್ಟ ಮಂತ್ರಿಗಳು ಉಪಮಂತ್ರಿಗಳಿಗೆ ಒತ್ತಾಯ ಪೂರ್ವಕವಾಗಿ ಇದನ್ನು ಹೇಳಿ ಬಂದಿದ್ದೇನೆ, ಅವರು ಕೊನೆ ಪಕ್ಷ ೩ ರಸ್ತೆಗಳನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಪಡೋಣ ಎಂದು ಹೇಳಿದ್ದಾರೆ. ಯಾವುದನ್ನು ತೆಗೆದುಕೊಳ್ಳುತ್ತಾರೆಯೋ ಗೊತ್ತಿಲ್ಲ. ಆ ರಸ್ತೆಗಳನ್ನು ಬಹುಶಃ ತೆಗೆದುಕೊಂಡರೆ ಹೆಚ್ಚಿನ ಪ್ರಗತಿಯಾದಂತಾಗುತ್ತದೆ ಎಂದು ನಾನು ತಿಂದುಕೊಂಡಿದ್ದೇನೆ.

ಕಳೆದ ಮೂರು ದಿವಸಗಳಿಂದಲೂ ಚರ್ಚೆ ನಡೆದಂತಹ ಕಾಲದಲ್ಲಿ ನನ್ನ ಮಿತ್ರರಾದ ಶ್ರೀಮಾನ್ ನಂಜೇಗೌಡರು ಲಕ್ಕಪ್ಪನವರ ವಿಚಾರದಲ್ಲಿ ನನಗೆ ಅಭಿಮಾನ ಇದೆ ಎಂಬ ಮಾತನ್ನು ಹೇಳಿದರು. ಬಹಳ ಸಂತೋಷ. ಎಲ್ಲಿಯವರೆಗೆ ಅವರ ಅಭಿಮಾನವನ್ನು ಉಳಿಸಿಕೊಳ್ಳುವುದಕ್ಕೆ ನನಗೆ ಯೋಗ್ಯತೆ ಇದೆಯೋ ಅಲ್ಲಿಯವರೆಗೂ ಇದೇ ರೀತಿಯ ಅಭಿಮಾನ ಇಟ್ಟುಕೊಂಡಿರಲಿ, ನನ್ನ ಯೋಗ್ಯತೆ ಮೀರಿ ತಪ್ಪು ಹೆಜ್ಜೆ ಇಟ್ಟ ಕಾಲದಲ್ಲಿ ಅಕ್ಷೇಪಣೆ ಮಾಡಲಿ ಎಂದು ಅವರಲ್ಲಿ ಕೇಳಿಕೊಳ್ಳುತ್ತೇನೆ. ಅವರು ಒಂದು ಒಳ್ಳೆಯ ಸೂಚನೆಯನ್ನು ಸಹ ಕೊಟ್ಟರು, ಲಕ್ಕಪ್ಪನವರು ಎಡವಿ ತಪ್ಪು ಹೆಜ್ಜೆ ಹಾಕಿಯಾರು ಅಂತ ಹೇಳಿ. ಯಾವುದೋ ಒಂದು ಲೈಸೆನ್ಸ್ ಕೊಡತಕ್ಕ ಉದಾಹರಣೆಯನ್ನು ಕೊಟ್ಟರು, ಕಾದು ನೋಡುತ್ತಾ ಇದ್ದೇನೆ ಇದರಲ್ಲಿ ಲಕ್ಕಪ್ಪನವರು ಹೇಗೆ ವರ್ತಿಸುತ್ತಾರೆ ಎಂಬ ಮನ್‌ಸೂಚನೆಯನ್ನು ಕೊಟ್ಟಿದ್ದಾರೆ. ನಾನು ಇದರಲ್ಲಿ ಎಡವಿ ಹೋಗುತ್ತಿಲ್ಲ: ಯಾರನ್ನೂ ಫೇವರ್ ಮಾಡುವುದಕ್ಕೆ ನಾನು ಹೋಗಿಲ್ಲ, ಒಬ್ಬರಿಗೊಬ್ಬರಿಗೆ ಫೇವರ್ ಮಾಡತಕ್ಕ ಮನೋಭಾವ ನನ್ನಲ್ಲಿ ಇಲ್ಲವೂ ಇಲ್ಲ. ಇದು ನಂಜನಗೂಡಿನ ಪೆಟ್ರೋಲ್ ಬಂಕಿಗೆ ಸಂಬಂಧಪಟ್ಟಂತೆ ಲೈಸೆನ್ಸ್ ಕೊಡತಕ್ಕ ವಿಚಾರ. ಅಲ್ಲಿ ಇದರ ಸಮೀಪದಲ್ಲೇ ಇನ್ನೊಂದು ಖಾಸಗಿ ಪೆಟ್ರೋಲ್ ಬಂಕು ಇದೆ, ಅದು ಇಂಡಿಯನ್ ಆಯಿಲ್ ಕಾರ್ಪೊರೇಷನ್. ಆದರೆ ಪ್ರೈವೇಟ್ ಬಂಕುಗಳಿಂದ ಜನರಿಗೆ ಆಗುವ ಅನುಕೂಲದ ದೃಷ್ಟಿಯಿಂದ, ಅವರ ನಿಷ್ಪಕ್ಷಪಾತ ದೃಷ್ಟಿಯಿಂದ ನಾನಾ ರೀತಿಯಲ್ಲಿ ಕೆಲವರು ಹೇಳಿದರು. ನಾನು ಸರಕಾರದ ಕಡೆಯಿಂದ ನಡೆಯುತ್ತಿರುವುದು, ಆದರಲ್ಲಿ ಹಸ್ತಕ್ಷೇಪ ಮಾಡಬೇಕು ಎಂಬ ದೃಷ್ಟಿಯಿಂದ ಅವರ ಯಾವ ಕೇಳಿಕೆಗೂ ನಾನು ಮಾನ್ಯ ಕೊಟ್ಟಿಲ್ಲ. ಪತ್ರವ್ಯವಹಾರ ಮಾಡುವುದಕ್ಕೆ ಹೋಗಿಲ್ಲ. ನಾನು ಯಾವತ್ತೂ ನನ್ನ ಸ್ವಂತ ಹಣ ಖರ್ಚುಮಾಡುವಾಗ ಯಾವರೀತಿ ನಡೆದುಕೊಳ್ಳುತ್ತೆನೆಯೋ ಅದೇ ರೀತಿಯಲ್ಲಿ ಸರಕಾರಿ ಹಣ ಖರ್ಚುಮಾಡುವಾಗಲೂ ನಡೆದುಕೊಳ್ಳುತ್ತೇನೆ, ಯೋಚನೆ ಮಾಡದೇ ಏನೂ ಮಾಡುವುದಿಲ್ಲ, ಅಪಾದನೆ ಬರಲು ಅವಕಾಶ ಕೊಡುವುದಿಲ್ಲ.

5-30 P M.

ಶ್ರೀ ವಿ. ಎಲ್. ಶಿವಪ್ಪ:—ಅದಕ್ಕೇ ನಿಮಗೆ ಹೆಚ್ಚು ಹಣ ಕೊಟ್ಟಿಲ್ಲ, ಇಲಾಖೆ ಮಾತ್ರ ಕೊಟ್ಟಿದ್ದಾರೆ.

ಶ್ರೀ ಎಚ್. ಎನ್. ನಂಜೇಗೌಡ: ೬೦ ಮೀಟರ್ ಇರಬೇಕು, ಸ್ಟ್ಯಾಂಡರ್ಡ್ ಇರಬೇಕು.

ಶ್ರೀ ಕೆ. ಲಕ್ಕಪ್ಪ:—ಅದನ್ನು ಪೂರ್ಣವಾಗಿ ಓವರ್‌ಲುಕ್ ಮಾಡಬೇಕೆಂಬ ಉದ್ದೇಶವಿಲ್ಲ, ಇಲಾಖೆ ಮೂಲಕ ಸ್ಟ್ಯಾಂಡರ್ಡ್ ಏನಿದೆ ಎಂಬುದನ್ನು ಪರೀಕ್ಷೆಮಾಡಲಾಗುತ್ತಿದೆ. ಕಾನೂನು ದಾಟಿ ಹೋಗುವುದು ಸರಿಯಲ್ಲ. ಆದರೂ ಕೂಡ ಸಾರ್ವಜನಿಕರಿಗೆ ಹೆಚ್ಚು ತೊಂದರೆಯಾಗದಂತೆ ಕಾನೂನನ್ನು ಸ್ವಲ್ಪ ಸಡಿಲ ಮಾಡಿದರೆ ತಪ್ಪಾಗಲಾರದು ಎಂದು ಅಂದುಕೊಂಡಿದ್ದೇನೆ. ಈ ಸಂದರ್ಭದಲ್ಲಿ ಯಾವ ಫೇವರ್ ಮಾಡುವ ದೃಷ್ಟಿಯಿಂದಲೂ ವರ್ತಿಸಿಲ್ಲ.

ಶ್ರೀ ಕೆ ಎನ್. ವೀರಪ್ಪಗೌಡ —ವರ್ಗಮಾಡುವ ವಿಚಾರದಲ್ಲಿ ಸಂಬಂಧಪಟ್ಟ ಮಂತ್ರಿಗಳು ವರ್ಗಮಾಡುವರೆಂದು ಶ್ರೀಮಾನ್ ದೇವೇಗೌಡರು ಹೇಳಿದರು.

ಶ್ರೀ ಕೆ. ಲಕ್ಕಪ್ಪ:—ಪ್ರಸ್ತಾಪನೆ ಮಾಡಿರುವುದಾಗಿ ಹೇಳಿದರು. ವರ್ಗಮಾಡುವುದು ಸೂಕ್ತವೆಂದು ಸಲಹೆ ಮಾಡಿರುವರು ಅಷ್ಟೇ. ಈ ಸಂದರ್ಭದಲ್ಲಿ ಕಳಕಳಿಯಿಂದ ಒಂದು ವಿಚಾರವನ್ನು ನಿವೇದಿಸಿಕೊಳ್ಳುತ್ತೇನೆ. ಈಗ ವರ್ಗದ ವಿಚಾರದಲ್ಲಾ ಸಹ ನಾನು ಬಹಳ ಕಟ್ಟುನಿಟ್ಟಾಗಿದ್ದೇನೆ. ರೂಲ್ಸ್ ಮೀರಿ ಏನು ಮಾಡುವುದೂ ಸರಿಯಲ್ಲವೆಂಬುದನ್ನು ತಾವು ಒಪ್ಪಿಕೊಳ್ಳುತ್ತೀರಿ. ಈಗತಾನೆ ಶ್ರೀ ಬಂಗಾರಪ್ಪನವರು ಶಿವಮೊಗ್ಗದಲ್ಲಿರುವ ಸೂಪರಿಂಟೆಂಡಿಂಗ್ ಎಂಜಿನಿಯರನ್ನು ಅಲ್ಲೇ ಇರಿಸಬೇಕು ಎಂದು ಹೇಳಿದರು. ಆದರೆ ಮೂರು ವರ್ಷಗಳಿಗಿಂತ ಹೆಚ್ಚು ಕಾಲ ಒಬ್ಬರನ್ನು ಒಂದೇ ಜಾಗದಲ್ಲಿಡುವುದು ಸರಿಯಲ್ಲ ಎಂಬುದು ನನ್ನ ಅಭಿಪ್ರಾಯ. ಎಲ್ಲಾದರೂ ಹಾಗೆ ಮೂರು ವರ್ಷಗಳಿಗೆ ಮೇಲ್ಪಟ್ಟು ಕಾರಣಾಂತರಗಳಿಂದ ಯಾರನ್ನಾದರೂ ಒಂದು ಕಡೆ ಇಟ್ಟಿದ್ದರೆ ಅದನ್ನು ಗಮನಕ್ಕೆ ತಂದರೆ ವಿಚಾರ ಮಾಡಲಾಗುವುದು. ಇಂದು, ಬಂಗಾರಪ್ಪನವರು ಅಲ್ಲಿಯ ಎಂಜಿನಿಯರು ಯೋಗ್ಯರು ಆದ್ದರಿಂದ ಅವರನ್ನು ಇರುವ ಜಾಗದಲ್ಲೇ ಮುಂದುವರೆಸಬೇಕು ಎಂದು ಹೇಳುವರು.

ಶ್ರೀ ಪಿ. ವೆಂಕಟಗಿರಿಯಪ್ಪ:—ಬೆಂಗಳೂರಿನಲ್ಲಿ ಕೆಲವರು ಹತ್ತು ವರ್ಷಗಳಿಂದ ಕೆಲವರಿದ್ದಾರೆ.

ಶ್ರೀ ಕೆ. ಲಕ್ಕಪ್ಪ:—ಕಟ್ಟಾನಿಟ್ಟಾಗಿ ವರ್ತಿಸುವುದು ಒಳ್ಳೆಯದು. ನಾಗರತ್ನಮ್ಮನವರು ಮೈಸೂರಿನಲ್ಲಿ ಹತ್ತಾರು ವರ್ಷದಿಂದ ಯಾರೋ ಇದ್ದಾರೆಂದು ಹೇಳಿದರು.

ಶ್ರೀ ಎನ್. ಹುಚ್ಚಮಾಸ್ತಿಗೌಡ: ಎಸ್ಟಾಬ್ಲಿಷ್‌ಮೆಂಟ್ ಸೆಕ್ಷನ್ನಿನಲ್ಲಿ ೫ ವರ್ಷಗಳಿಗೆ ಮೇಲ್ಪಟ್ಟು ಇರುವವರು ಇದ್ದಾರೆ. ಅವರು ಖಿದೀಮರಾಗಿದ್ದಾರೆ, ಕೆಲವರು ಗೆಜೆಟೆಡ್ ಆಫೀಸರುಗಳೂ ಕೂಡ ಈ ಊರಿನಲ್ಲೇ ೧೫ ವರ್ಷಗಳಿಂದಲೂ ಇದ್ದಾರೆ. ಅವರ ಕಡೆ ಸ್ವಲ್ಪ ಗಮನಕೊಡಬೇಕು.

ಶ್ರೀ ಕೆ. ಲಕ್ಕಪ್ಪ:—ನಾನು ಒಂದುವರೆ ವರ್ಷದಿಂದ ಬೆಂಗಳೂರಿನಲ್ಲಿ ಬಹಳ ಕಾಲದಿಂದ ಯಾರಿದ್ದಾರೆಂದು ತಿಳಿಯಬಂತೋ ಅವರನ್ನು ಬೇರೆ ಕಡೆಗೆ ಬದಲಾಯಿಸಿದ್ದೇನೆ. ಇದಲ್ಲದೆ ಬಹಳ ವರ್ಷಗಳಿಂದ ಒಂದೇ ಕಡೆ ಇರುವವರ ಪಟ್ಟಿ ಮಾಡಿ ಕಳಿಸಬೇಕೆಂದು ಚೀಫ್ ಎಂಜಿನಿಯರಿಗೆ ಹೇಳಿದ್ದೇನೆ. ಮುಂದೆ ವರ್ಗಮಾಡುವಾಗ ಇದನ್ನು ನೋಡಿ ಸೂಕ್ತ ಕ್ರಮ ಕೈಕೊಳ್ಳುತ್ತೇನೆ. ಯಾರನ್ನೂ ಬಿಡುವುದಿಲ್ಲ. ಮೊದಲೇ ಹೇಳಿದಂತೆ ಈ ಖಾತೆಯಲ್ಲಿ ಲಂಚರುಷುವತ್ತು ಬಹಳವಾಗಿದೆ, ಅಧಿಕಾರಿಗಳು ಆಸ್ತಿಮಾಡಿಕೊಂಡಿರುವ ನಿದರ್ಶನಗಳಿವೆ, ಇಲ್ಲವೆಂದು ಹೇಳುವುದಕ್ಕಾಗುವುದಿಲ್ಲ, ಅದನ್ನು ಸಾಧ್ಯವಾದಷ್ಟು ಬಿಗಿಪಡಿಸಬೇಕೆಂಬ ಉದ್ದೇಶದಿಂದ ಕೆಲವು ಕಾರ್ಯಕ್ರಮ ತೆಗೆದು ಕೊಳ್ಳಲಾಗಿದೆ. ಈಗ ಕೆಲವು ಜನರ ಮೇಲೆ ಕ್ರಮ ತೆಗೆದು ಕೊಂಡು ವಿಜಿಲೆನ್ಸ್ ಕಮೀಷನ್ನಿಗೆ ತನಿಖೆ ಮಾಡಬೇಕೆಂದು ತಿಳಿಸಿ, ಅನೇಕರನ್ನು ಸಸ್ಪೆಂಡ್ ಮಾಡಿ, ಅನೇಕರಿಗೆ ಪ್ರಮೋಷನ್ ನಿಲ್ಲಿಸಿ ಕ್ರಮ ಕೈಕೊಳ್ಳಲಾಗಿದೆ, ನ್ಯಾಯವಾದ ವಿಷಯವನ್ನು ಸರ್ಕಾರದ ಗಮನಕ್ಕೆ ತರುವುದಾದರೆ ಸೂಕ್ತ ಕ್ರಮ ತೆಗೆದುಕೊಳ್ಳಲು ಪ್ರಯತ್ನ ಮಾಡುತ್ತೇನೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು) :—ಸನ್ಮಾನ್ಯ ಅಧ್ಯಕ್ಷರೇ, ಸಮಯ ಕಡಮೆ ಇರುವುದರಿಂದ ನಾನು ಸಂಕ್ಷೇಪವಾಗಿ ಮುಖ್ಯ ವಿಚಾರಗಳನ್ನು ಮಾತ್ರ ಪ್ರಸ್ತಾಪ ಮಾಡುತ್ತೇನೆ. ಈ ಮಾನ್ಯ ಸಭೆಯಲ್ಲಿ ಅನೇಕ ವರ್ಷಗಳಿಂದ ಪ್ರತಿಯೊಂದು ಸಲ ಬಜೆಟ್ ಮಂಡಿಸಿದಾಗ ಚರ್ಚೆಯಾದಾಗ ನೀರಾವರಿ ಸೌಕರ್ಯ ಹೆಚ್ಚು ಒದಗಿಸಲು ಹೆಚ್ಚು ಹಣ ಖರ್ಚುಮಾಡಬೇಕು ಎಂದು ಪದೇಪದೇ ಹೇಳಿದ್ದಾರೆ. ನಾನೂ ಸಹ ಈ ಸಲಹೆಯನ್ನು ಪೂರ್ಣವಾಗಿ ಒಪ್ಪಿದ್ದೇನೆ. ಅದೇ ರೀತಿಯಲ್ಲಿ ಕಳೆದ ಎರಡು ವರ್ಷಗಳಿಂದ ನೀರಾವರಿಯ ಮೇಲೆ ಹೆಚ್ಚು ಖರ್ಚುಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಬಜೆಟ್ಟಿನಲ್ಲೇನು ನಮೂದಿಸಿರುತ್ತೇವೋ ಅಷ್ಟನ್ನೂ ಖರ್ಚು ಮಾಡಿರುವುದೂ ಅಲ್ಲದೆ ಪ್ರತ್ಯೇಕವಾಗಿಯೂ ಕೂಡ ಖರ್ಚು ಮಾಡುತ್ತಿದ್ದೇವೆಂಬುದು ಮಾನ್ಯ ಸದಸ್ಯರಿಗೆ ಗೊತ್ತಿದೆ. ನಮ್ಮ ರಾಜ್ಯದ ಬಹಳ ಭಾಗ ಜಮೀನು ಕೃಷ್ಣ ಮತ್ತು ಕಾವೇರಿ ನದಿ ಪಾತ್ರದಲ್ಲಿದೆ. ಸ್ವಲ್ಪ ಭಾಗ ಗೋದಾವರಿ ಮತ್ತು ಉಳಿದ ಸಣ್ಣ ಪುಟ್ಟ ನದಿಗಳ ಪಾತ್ರದಲ್ಲಿ ಇದ್ದರೂ ಇಂದು ನೀರಾವರಿ ಸೌಕರ್ಯ ಹೆಚ್ಚಬೇಕಾದರೆ ಕಾವೇರಿ ನದಿ ಪಾತ್ರದಲ್ಲಿ ನಾವು ತೆಗೆದುಕೊಂಡಿರುವ ಅನೇಕ ಪ್ರಾಜೆಕ್ಟುಗಳನ್ನೂ, ಆದೇ ರೀತಿಯಿಂದ ಕೃಷ್ಣ ನದಿ ಪಾತ್ರದಲ್ಲಿ ತೆಗೆದು ಕೊಂಡಿರುವ ಅನೇಕ ಪ್ರಾಜೆಕ್ಟುಗಳನ್ನೂ, ಯಾವ ಕೆಲಸ ಬಹಳ ವರ್ಷಗಳಿಂದಲೂ ನಡೆಯುತ್ತಿದೆಯೋ ಅದನ್ನು ಆದಷ್ಟು ತೀವ್ರವಾಗಿ ಮುಗಿಸಲು ಎಲ್ಲ ಪ್ರಯತ್ನಗಳನ್ನೂ ಮಾಡಲಾಗುತ್ತಿದೆ, ಈ ಪ್ರಯತ್ನವನ್ನು ನಾವು ಹೆಚ್ಚಿನ ರೀತಿಯಿಂದ ಮಾಡುತ್ತಿದ್ದೇವೆ. ೧೯೬೮-೬೯ರಲ್ಲಿ ನೀರಾವರಿಯ ಮೇಲೆ ಸುಮಾರು

ಹದಿನಾಲ್ಕೂವರೆ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ, ೧೯೬೯–೭೦ನೆಯ ಸಾಲಿಗೆ ೧೯ ಕೋಟಿ ರೂಪಾಯಿ ಖರ್ಚು ಆಗುತ್ತದೆಂಬ ಅಂದಾಜಿದೆ, ೧೯೭೦-೭೧ಕ್ಕೆ ೧೬ ಕೋಟಿಗೆ ಬಜೆಟ್ಟಿನಲ್ಲಿ ಅವಕಾಶವಿದ್ದರೂ ನಾವು ೨೦ ಕೋಟಿಯ ಮೇಲೆ ಖರ್ಚುಮಾಡಬಹುದೆಂಬ ನಿರೀಕ್ಷೆ ಇದೆ. ನಮಗೆ ಎಷ್ಟೇ ಕಷ್ಟ ಬಂದರೂ ಕಾವೇರಿ ಮತ್ತು ಕೃಷ್ಣ ನದಿ ನೀರನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ, ಈಗಾಗಲೇ ನದಿ ಪಾತ್ರಗಳಲ್ಲಿ ಪ್ರಾರಂಭಿಸಿರುವ ನೀರಾವರಿ ಯೋಜನೆಗಳನ್ನು ಆದಷ್ಟು ಜಾಗ್ರತೆ ಕಾರ್ಯಗತ ಮಾಡುವುದಕ್ಕೆ ಎಲ್ಲಾ ಪ್ರಯತ್ನವನ್ನೂ ಮಾಡಬೇಕೆಂಬ ದೃಢ ನಿಶ್ಚಯ ಸರಕಾರ ಮಾಡಿಕೊಂಡಿದೆ ಎಂದು ಈ ಮಾನ್ಯ ಸಭೆಗೆ ಹೇಳಲು ಇಷ್ಟಪಡುತ್ತಿದ್ದೇನೆ.

ಅನೇಕ ಮಾನ್ಯ ಸದಸ್ಯರು ಕಾವೇರಿ ಪ್ರಾಜೆಕ್ಟ್‌ಗಳ ಬಗ್ಗೆ ಹೇಳಿದ್ದಾರೆ. ಅನೇಕ ಮಾನ್ಯ ಸದಸ್ಯರು ಕೃಷ್ಣಾ ಪ್ರಾಜೆಕ್ಟ್‌ಗಳ ಬಗ್ಗೆ ಹೇಳಿದ್ದಾರೆ. ಕಾವೇರಿ ಕಣಿವೆಯಲ್ಲಿ ಈಗಾಗಲೇ ಸುವರ್ಣಾವತಿ ಕೆಲಸ ಭರದಿಂದ ನಡೆಯುತ್ತಿದೆ, ಹೇಮಾವತಿ ಕೆಲಸ ಭರದಿಂದ ನಡೆಯುತ್ತಿದೆ, ಕಬಿನಿ ಕೆಲಸ ಭರದಿಂದ ನಡೆಯುತ್ತಿದೆ. ಹಾರಂಗಿ ಪ್ರಾಜೆಕ್ಟ್ ಕೆಲಸ ಕೂಡ ಮಂಜೂರಾಗಿದೆ, ಟೆಂಡರು ಕರೆದು, ಮೂರು ದಿವಸ ಮೊದಲು ಯಾರದು ಲೋಯೆಸ್ಟ್ ಟೆಂಡರ್ ಇತ್ತು ಅದನ್ನು ಒಪ್ಪಿಕೊಂಡಿದ್ದೇವೆ. ಬಹುಶಃ ಇನ್ನು ಕೆಲವೇ ದಿವಸಗಳಲ್ಲಿ ಹಾರಂಗಿ ಪ್ರಾಜೆಕ್ಟ್ ಕೆಲಸ ಪ್ರಾರಂಭವಾಗುತ್ತದೆ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಕಾವೇರಿ ಪ್ರಾಜೆಕ್ಟ್‌ಗಳ ಬಗ್ಗೆ ಎಷ್ಟು ಹಣವನ್ನು ಬಜೆಟ್ಟಿನಲ್ಲಿ ಒದಗಿಸಿದ್ದೇವೆ ಎನ್ನುವುದು ಮುಖ್ಯವಲ್ಲ. ನಾನು ಮುಖ್ಯ ಮಂತ್ರಿಯಾಗಿ ಈ ಸಭೆಗೆ ಆಶ್ವಾಸನೆ ಕೊಡುವುದಕ್ಕೆ ಇಷ್ಟ ಪಡುತ್ತೇನೆ, ಕಾವೇರಿ ಏಕೆ, ಯಾವ ಪ್ರಾಜೆಕ್ಟ್‌ಗಳನ್ನು ಮಂಜೂರು ಮಾಡಿದರೂ ಕೂಡ, ಆ ಪ್ರಾಜೆಕ್ಟ್‌ಗಳ ಕೆಲಸ ಕಾರ್ಯ ನಡೆಯಲಿಕ್ಕೆ ಬಜೆಟ್ಟಿನಲ್ಲಿ ಎಷ್ಟು ಹಣವನ್ನು ಒದಗಿಸಿದ್ದೇವೆ ಎನ್ನುವುದು ಮುಖ್ಯವಲ್ಲ. ಆ ಪ್ರಾಜೆಕ್ಟ್‌ಗಳು ವೇಗ ಗತಿಯಿಂದ ನಡೆಯುವುದರ ಸಲುವಾಗಿ ಎಷ್ಟು ಹಣ ಬೇಕು ಎಂಡರೆ, ಆ ಹಣ ನನ್ನ ಹತ್ತಿರ ಇಲ್ಲ ಎನ್ನುವ ಮಾತನ್ನು ಹೇಳುವುದಿಲ್ಲ ಎಂದು ಸ್ಪಷ್ಟವಾದ ಆಶ್ವಾಸನೆ ಕೊಡುತ್ತೇನೆ. ಆ ಪ್ರಾಜೆಕ್ಟ್‌ಗಳು ಆದಷ್ಟು ಜಾಗ್ರತೆ ಮುಗಿಯುವುದರ ಸಲುವಾಗಿ ಎಷ್ಟು ದುಡ್ಡು ಬೇಕು ಆ ದುಡ್ಡನ್ನು ಒದಗಿಸುವುದಕ್ಕೆ ತಯಾರಿದ್ದೇನೆ ಎನ್ನುವಂಥ ಆಶ್ವಾಸನೆಯನ್ನು ಈ ಮಾನ್ಯ ಸಭೆಗೆ ಕೊಡುತ್ತೇನೆ. ಶ್ರೀಮಾನ್ ಎಚ್. ಡಿ. ದೇವೇಗೌಡರು ಮತ್ತು ಕೆಲವು ಸದಸ್ಯರು ಕೆಲವು ಆತಂಕಗಳನ್ನು ಹೇಳಿದರು. ಉದಾಹರಣೆಗೆ ಹೇಳಬೇಕಾಗಿದ್ದರೆ ಹೇಮಾವತಿಯಲ್ಲಿ ಸ್ವಲ್ಪ ಮಟ್ಟಿಗೆ ಆತಂಕ ಬಂತು. ಒಂದೊಂದು ಸಲ ಹೀಗಾಗುತ್ತದೆ. ನಾವು ದುಡ್ಡು ಕೊಟ್ಟಿರುತ್ತೇವೆ, ಅದು ಖರ್ಚಾಗುವ ಹಾಗಿಲ್ಲ. ಹಣ ಖರ್ಚಾಗಲಾರದ್ದಕ್ಕೆ ಅನೇಕ ಕಾರಣಗಳು ಬರುತ್ತವೆ, ಆತಂಕಗಳು ಬರುತ್ತವೆ. ಈ ಒಗ್ಗೆ ನಾನು ವಿರೋಧ ಪಕ್ಷದ ನಾಯಕರ ಜೊತೆ ಮಾತನಾಡಿದ್ದೇನೆ. ಟೆಂಡರು ರೂಲ್ಸ್ ಪ್ರಕಾರ ಕಡಿಮೆ ಟೆಂಡರ್ ಕೊಟ್ಟಿರುವವರಿಗೆ ಕೆಲಸ ದೊರೆಯಬೇಕಾಗುತ್ತದೆ. ಆ ನಂತರ ರೇಟುಗಳು ವರ್ಕ್ ಜಟ್ ಆಗಲಿಲ್ಲ ಎಂದು ಜಗಳ ತೆಗೆದು ರೇಟು ಹೆಚ್ಚು ಕೊಡಿ ಎಂದು ಕೇಳುತ್ತಾರೆ. ರೇಟು ಹೆಚ್ಚಿಗೆ ಕೊಡುವುದಕ್ಕೆ ಬರುವುದಿಲ್ಲ. ಆಗ ಕಂಟ್ರಾಕ್ಟ್ ಟರ್ಮಿನೇಟ್ ಮಾಡಬೇಕು. ಅದಕ್ಕೆ ಕಾನೂನು ಕಾಯದೆಗಳಿಅತ್ತವೆ. ಕೋರ್ಟಿಗೆ ಹೋಗಿ ಅಲ್ಲಿಂದ ಸ್ಟೇ ಬಂದರೆ ಕೆಲಸ ನಿಲ್ಲುತ್ತದೆ ಎನ್ನುವ ಭಯವಿರುತ್ತದೆ. ಹೀಗೆ ಎಲ್ಲವನ್ನೂ ನಾವು ನೋಡಬೇಕಾಗಿದೆ. ಒಂದು ಕಡೆ ನೀರಿನ ಉಪಯೋಗ ಮಾಡಿಕೊಳ್ಳಬೇಕು, ಒಂದು ಕಡೆ ಪ್ರಾಜೆಕ್ಟ್‌ಗಳು ತೀವ್ರಗತಿಯಿಂದ ಮುಗಿಯಬೇಕು, ನೀರಾವರಿಯ ಪ್ರಯೋಜನ ಜನತೆಗೆ ಸಿಕ್ಕಬೇಕು, ಇನ್ನೊಂದು ಕಡೆ ಕಾನೂನು ಕಾಯದೆಗೆ ಭಂಗ ತರುವಂಥ ಯಾವುದೇ ರೀತಿಯ ಆಕ್ಷೇಪ ಬರಲಾರದಂತೆ ನೋಡಿಕೊಳ್ಳುವ ಪರಿಸ್ಥಿತಿಯೂ ಬರುತ್ತದೆ.

ನಮ್ಮಲ್ಲಿ ಹಿಂದಿನಿಂದ ಅನೇಕ ಎಸ್ಟಿಮೇಟುಗಳನ್ನು ಮಾಡಿದ್ದಾರೆ, ಅನೇಕ ಎಸ್ಟಿಮೇಟುಗಳಲ್ಲಿ ಮೆಸನರಿ ವರ್ಕ್ಸ್ ಎಲ್ಲಾ ಸರ್ಕಿ ಮಾರ್ಟರಿನಿಂದ ಮಾಡುವಂಥಾದ್ದಾಗಿದೆ. ನಮ್ಮ ಇಂಜಿನಿಯರುಗಳು ಮತ್ತು ಅನೇಕ ಮಾನ್ಯ ಸದಸ್ಯರು ಹೇಳುತ್ತಿದ್ದಾರೆ, ಸುರ್ಕಿ ಮಾರ್ಟರ್‌ನ ಸ್ಟೈಂಗ್ತ್ ಬಗ್ಗೆ ಗ್ಯಾರಂಟಿ ಬರುವುದಿಲ್ಲ, ಕಾಲದ ಬಗ್ಗೆ ಗ್ಯಾರಂಟಿ ಬರುವುದಿಲ್ಲಾ, ಅದು ತೀವ್ರ ತಯಾರಾಗುವ ಹಾಗಿಲ್ಲ, ನಿಧಾನವಾಗಿ ಕೆಲಸ ನಡೆಯಬೇಕಾಗುತ್ತದೆ, ಕೆಲಸ ತೀವ್ರವಾಗಿ ಮುಗಿಯಬೇಕು. ತೀವ್ರವಾಗಿ ಮುಗಿಯುವುದಕ್ಕೆ ಏನೇನು ಕಾರ್ಯ ಕ್ರಮಗಳನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಂಡು ಸ್ಪೆಸಿಫಿಕೇಷನ್ ಬೇಕಾದರೆ ಬದಲಾವಣೆ ಮಾಡಿ ಎಂದು ಮಾನ್ಯ ಸದಸ್ಯರು ಹೇಳುತ್ತಾರೆ, ಇದನ್ನೇ ನಮ್ಮ ಇಂಜಿನಿಯರುಗಳು ಕೂಡ ಹೇಳುತ್ತಾರೆ. ನಾನು ಅದನ್ನು ಪರಿಶೀಲನೆ ಮಾಡುತ್ತಿದ್ದೇನೆ. ಕಾವೇರಿ ಬೇಸಿನ್‌ನಲ್ಲಿ ಏನು ಪ್ರಾಜೆಕ್ಟ್‌ಗಳ ಕೆಲಸ ನಡೆಯುತ್ತಿದೆ ಅವುಗಳನ್ನು ಆದಷ್ಟು ಜಾಗ್ರತೆ ಮುಗಿಸಬೇಕು ಎನ್ನುವ ವಿಚಾರ ನಾವು ಮಾಡುತ್ತಿದ್ದೇವೆ. ಈ ಕೆಲಸಗಳನ್ನು ಮುಗಿಸುವುದಕ್ಕೆ ಏನೇನು ಪ್ರಯತ್ನ ಮಾಡಬೇಕಾಗುತ್ತದೆ, ಆ ಪ್ರಯತ್ನ ಮಾಡುತ್ತಿದ್ದೇವೆಂದು ಹೇಳುತ್ತೇನೆ.

(ಶ್ರೀ ವೀರೇಂದ್ರ ಪಾಟೀಲ್)

ಹೋದ ಸಲ ಕಾವೇರಿ ಬೇಸಿನ್‌ನಲ್ಲಿ ಎರಡು ಹೊಸ ಪ್ರಾಜೆಕ್ಟ್ ತೆಗೆದುಕೊಂಡಿದ್ದೇವೆ. ಒಂದು ಗುಂಡಲ್ ಪ್ರಾಜೆಕ್ಟ್ ಇದಕ್ಕೆ ಶ್ರೀ ಎಸ್. ನಿಜಲಿಂಗಪ್ಪನವರು ಫೌಂಡೇಷನ್ ಸ್ಟೋನ್ ಹಾಕಿದರು. ಅದರ ಬಗ್ಗೆ ಕೆಲಸ ಪ್ರಾರಂಭವಾಗಿದೆ ಮತ್ತು ಮಂಚನಬೆಲೆ ಯೋಜನೆಗೆ ಕೂಡ ಅಸ್ತಿಭಾರ ಶಿಲೆಯನ್ನು ಹಾಕಿದು ಟೆಂಡರುಗಳನ್ನು ಕರೆದಿದ್ದೇವೆ. ಕೆಲವು ದಿವಸಗಳಲ್ಲಿ ಈ ಕೆಲಸವನ್ನೂ ಸಹ ಪ್ರಾರಂಭ ಮಾಡುತ್ತೇವೆ. ಈ ರೀತಿಯಿಂದ ೧೯೭೦-೭೧ಕ್ಕೆ ತಾರಕ ಪ್ರಾಜೆಕ್ಟ್ ಪ್ರಾರಂಭ ಮಾಡಬೇಕು ಎನ್ನುವ ವಿಚಾರವನ್ನು ಇಟ್ಟು ಕೊಂಡಿದ್ದೇವೆ. ಬಹುಶಃ ಇದೇ ವರ್ಷ ಈ ಪ್ರಾಜೆಕ್ಟ್ ಪ್ರಾರಂಭ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎಂದು ನಾನು ಪೂರ್ತಿಯಾಗಿ ನಂಬಿಕೊಂಡಿದ್ದೇನೆ.

ಅಪ್ಪರ್ ಕೃಷ್ಣ ಮೇಲ್ದಂಡೆ ಯೋಜನೆ ಮಂದಗತಿಯಿಂದ ನಡೆಯುತ್ತಿದೆ ಎಂದು ಅನೇಕ ಮಾನ್ಯ ಸದಸ್ಯರು ಹೇಳಿದ್ದಾರೆ. ಈಗೀಗ ಸ್ವಲ್ಪಮಟ್ಟಿಗೆ ಕೆಲಸಕಾರ್ಯಗಳು ನಡೆಯುತ್ತಿವೆ. ನಾರಾಯಣ ಪುರದಲ್ಲಿ ಕೆಲಸಕಾರ್ಯಗಳು ನಡೆಯುತ್ತಿವೆ. ಆಲಮಟ್ಟಿಯಲ್ಲಿ ಕೆಲಸ ಹೆಚ್ಚು ತ್ವರಿತ ಗತಿಯಿಂದ ನಡೆಯುತ್ತಿಲ್ಲ ಎಂದು ಹೇಳಿದ್ದಾರೆ. ಆಲಮಟ್ಟಿಯಲ್ಲಿ ಟೆಂಡರುಗಳನ್ನು ಕರೆಯುವುದರಲ್ಲಿ ಸ್ವಲ್ಪಮಟ್ಟಿಗೆ ನಿಧಾನವಾಯಿತು. ಟೆಂಡರುಗಳು ಬಂದಿವೆ; ಅವುಗಳನ್ನು ಒಪ್ಪಿಕೊಂಡಿದ್ದೇವೆ. ಒಂದು, ಒಂದೂವರೆ ತಿಂಗಳಿನಲ್ಲಿ ಕೆಲಸ ಭರದಿಂದ ಪ್ರಾರಂಭವಾಗುವ ಆಸೆ ಇದೆ ಎನ್ನುವ ಮಾತನ್ನು ಹೇಳುತ್ತೇನೆ.

ದೇವರಬಿಳಿಕೆರೆ ಕೆಲಸ ಪ್ರಾರಂಭ ಮಾಡಿದ್ದೇವೆ. ಪ್ರಾಜೆಕ್ಟನ್ನು ಈಗಾಗಲೇ ಮಂಜೂರು ಮಾಡಿದ್ದೇವೆ, ಟೆಂಡರುಗಳು ಬಂದಿವೆ. ಟೆಂಡರುಗಳನ್ನು ಪರಿಶೀಲಿಸಿ ಒಪ್ಪಿಗೆಯನ್ನು ಕೊಟ್ಟ ಕೂಡಲೇ ಕೆಲಸ ಪ್ರಾರಂಭ ಮಾಡುತ್ತೇವೆ. ಅದು ಮಂಜೂರಾದ ಪ್ರಾಜೆಕ್ಟ್. ಹಿಂದೆ ಹೋಗಬೇಕಾದ ಪರಿಸ್ಥಿತಿ ಇಲ್ಲ.

ನೀರಾವರಿಗೆ ಸಾಕಷ್ಟು ಹಣ ಬೇಕು. ನಮ್ಮಲ್ಲಿ ಹಣವಿಲ್ಲ. ಹಣದ ಸೌಕರ್ಯವನ್ನು ಯಾವರೀತಿ ಯಿಂದ ಒದಗಿಸಿಕೊಳ್ಳಬೇಕು ಎನ್ನುವುದನ್ನು ವಿಚಾರ ಮಾಡುತ್ತಿದ್ದೇವೆ. ನಾನು ಎಲ್ಲ ರಾಷ್ಟ್ರೀಕೃತ ಬ್ಯಾಂಕುಗಳು ಮತ್ತು ರಾಷ್ಟ್ರೀಕರಣವಾಗಿಲ್ಲದ ಬ್ಯಾಂಕುಗಳವರ ಜೊತೆಯಲ್ಲಿ ಚರ್ಚೆ ಮಾಡಿದ್ದೇನೆ. ಅವರು ಕೆಲವು ಪ್ರಾಜೆಕ್ಟ್‌ಗಳಿಗೆ ಸಹಾಯ ಮಾಡುವುದಕ್ಕೆ ಮುಂದೆ ಬಂದರೆ ಯಾವ ಪ್ರಾಜೆಕ್ಟ್‌ಗಳನ್ನು ತೆಗೆದುಕೊಂಡಿದ್ದೇವೆ ಅವುಗಳನ್ನು ಇನ್ನೂ ಹೆಚ್ಚು ವೇಗದಲ್ಲಿ ತೆಗೆದುಕೊಂಡು ಹೋಗುವುದಕ್ಕೆ ಸಾಧ್ಯ ವಾಗುತ್ತದೆ. ಅದಕ್ಕಾಗಿ ಅವರ ಕೂಡ ಈಗಾಗಲೇ ಸಮಾಲೋಚನೆ ಮಾಡುತ್ತಿದ್ದೇನೆ. ಅದರ ಫಲಿತಾಂಶ ಏನಾಗುತ್ತದೆ ಎಂದು ಈ ಹೊತ್ತೇ ಹೇಳುವುದಕ್ಕಾಗುವುದಿಲ್ಲ. ಹಣ ಸಿಕ್ಕುವುದಕ್ಕೆ ಎಲ್ಲೆಲ್ಲಿ ಸಾಧ್ಯತೆ ಇದೆ ಅದನ್ನೆಲ್ಲ ವ್ಯವಸ್ಥೆ ಮಾಡಿಕೊಂಡು ನೀರಾವರಿ ಪ್ರಾಜೆಕ್ಟ್‌ಗಳನ್ನು ಅದಷ್ಟು ತೀವ್ರಗತಿಯಿಂದ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ವರ್ಲ್ಡ್ ಬ್ಯಾಂಕ್ ಲೋನ್ ಸಲುವಾಗಿ ನಾವು ಕೇಳಿದ್ದೇವೆ. ಅವರು ಕೇಳಿದ ಪ್ರಾಜೆಕ್ಟ್ ರಿಪೋರ್ಟ್ಸ್ ಕಳುಹಿಸಿದ್ದೇವೆ. ಏನೇನು ಮಾಹಿತಿ ಬೇಡುತ್ತಿದ್ದಾರೆ ಅದನ್ನೆಲ್ಲ ಕಳುಹಿಸಿದ್ದೇವೆ. ಇಲ್ಲಿಯವರೆಗೆ ಯಾವುದೇ ಕಮ್ಯೂನಿಕೇಷನ್ ಈ ಬಗ್ಗೆ ನಮಗೆ ಬಂದಿಲ್ಲ. ಆ ಪರಿಸ್ಥಿತಿಯಲ್ಲಿ ನಾವು ಇದ್ದೇವೆ.

ಶ್ರೀ ಎಂ. ನಾಗಪ್ಪ : ಕೃಷ್ಣ ಬಲ ದಂಡೆ ನಾಲೆ ಬಗ್ಗೆ ... .

ಶ್ರೀ ವೀರೇಂದ್ರ ಪಾಟೀಲ್ : ಹೈ ಲೆವೆಲ್ ಕೆನಾಲ್ ಬಗ್ಗೆ ಅದರ ಕೆಪಾಸಿಟಿ ಹೆಚ್ಚು ಮಾಡಬೇಕು ಎನ್ನುವ ವಿಚಾರ ನಮ್ಮ ಮುಂದೆ ಇದೆ. ಈ ಹೊತ್ತಿನ ದಿವಸ ಅದನ್ನು ಹೆಚ್ಚು ಮಾಡುತ್ತೇವೆಂದು ಹೇಳುವುದಕ್ಕಾಗುವುದಿಲ್ಲ. ದುರ್ದೈವದಿಂದ ಪೂರ್ತಿ ಏರಿಯಾ ಡೆವಲಪ್ ಆಗಿಲ್ಲ. ಲೋಕಲೈಸ್ಡ್ ಏರಿಯಾ ಡೆವಲಪ್ ಆಗದೆ ಇದೆ. ಅದನ್ನು ಡೀ ಲೋಕಲೈಸ್ ಮಾಡಿ ಫ್ರೆಷ್ ಏರಿಯಾ ಡಿಕ್ಲೇರ್ ಮಾಡಿ ಎಂದು ಹೇಳುತ್ತಿದ್ದಾರೆ. ಲೋಕಲೈಸ್ಡ್ ಏರಿಯಾ ಮಾಡಿದ್ದೇವೆ, ನೀರು ಹರಿದುಕೊಂಡು ಹೋಗುತ್ತಿದೆ. ಅದನ್ನು ಡೀ ಲೋಕಲೈಸ್ ಮಾಡಿ ಬೇರೆ ಕಡೆಗೆ ನೀರು ಹರಿಸುತ್ತೇವೆಂದರೆ ಏನೂ ಆಗುವುದಿಲ್ಲ. ಆ ಏರಿಯಾ ಪೂರ್ತಿಯಾಗಿ ಡೆವಲಪ್ ಆಗಲಾರದೆ ಬೇರೆ ಕಡೆ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಎಲ್ಲ ನೀರೂ ಹರಿದುಕೊಂಡು ನದಿಗೆ ಹೋಗುವುದರಲ್ಲಿ ಅರ್ಥವಿಲ್ಲ. ನಮ್ಮ ಪ್ರಯತ್ನ ತುಂಗಭದ್ರ ಏರಿಯಾ ಡೆವಲಪ್ ಆಗಬೇಕು ಎನ್ನುವುದೇ ಆಗಿದೆ ಮತ್ತು ಆಗಾಗ ಅಲ್ಲಿ ಬ್ರೀಚಸ್ ಏನಾಗುತ್ತದೆ ಅದಕ್ಕೆ ಒಂದು ಆರ್ಗನೈಜೇಷನ್ ಇಟ್ಟುಕೊಂಡು ಯಾವ ಬ್ರೀಚ್ ಆದರೂ ಕೂಡ ನಮ್ಮ ಆರ್ಗನೈಜೇಸೆನ್ ರಾತ್ರಿ ಹಗಲು ಕೆಲಸ ಮಾಡಿ ಎರಡು ಮೂರು ದಿವಸದಲ್ಲಿ ಸರಿಮಾಡಿ ಮುಗಿಸುವಂಥ ವ್ಯವಸ್ಥೆ ಮಾಡಿದ್ದೇವೆ. ತುಂಗಭದ್ರ ಹೈ ಲೆವೆಲ್ ಕೆನಾಲ್ ಕೆಪಾಸಿಟಿ ಹೆಚ್ಚು ಮಾಡಬೇಕು ಎನ್ನುವ ಉದ್ದೇಶವಿದೆ. ಅದಕ್ಕೆ ಪ್ಲಾನ್ ಎಸ್ಟಿಮೇಟ್ ತಯಾರಾಗುತ್ತಿದೆ.

ಶ್ರೀ ಎಂ. ನಾಗಪ್ಪ : ಸ್ವಾಮಿ, ನಾನು ರೈಟ್ ಬ್ಯಾಂಕ್ ಕೆನಾಲ್ ಅಂಡರ್ ಅಪ್ಪರ್ ಕೃಷ್ಣ ಪ್ರಾಜೆಕ್ಟ್ ಬಗ್ಗೆ ಕೇಳಿದೆ.

ಶ್ರೀ ವೀರೇಂದ್ರ ಪಾಟೀಲ್ : ಅದು ಎರಡನೇ ಹಂತದಲ್ಲಿ ಬರುತ್ತದೆ ಎನ್ನುವುದು ಮಾನ್ಯ ಸದಸ್ಯರಿಗೆ ಗೊತ್ತಿದೆ, ನಾವು ಮೊದಲನೇ ಹಂತದ ಕೆಲಸವನ್ನು ಪ್ರಾರಂಭ ಮಾಡಿದ್ದೇವೆ. ಕೆಲಸ ನಡೆಯುತ್ತಿದೆ, ಎರಡನೇ ಹಂತಕ್ಕೆ ಇನ್ನೂ ಬಂದಿಲ್ಲ.

ಮೈಸೂರು ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ ಚೆನ್ನಾಗಿ ಕೆಲಸ ಮಾಡುತ್ತಿದೆ. ಲಕ್ಷಾವಧಿ ರೂಪಾಯಿ ಉಳಿತಾಯ ಮಾಡುತ್ತಿದೆ. ಅದಕ್ಕೆ ಸರ್ಕಾರದಿಂದ ಏನೂ ಉಪಕಾರ ಮಾಡುತ್ತಿಲ್ಲ. ಅವರೂ ಎಲ್ಲರಂತೆಯೇ ಕೆಲಸಗಳಿಗೆ ಟೆಂಡರ್ ಹಾಕುತ್ತಾರೆ. ಅವರದು ಲೋಯೆಸ್ಟ್ ಟೆಂಡರ್ ಇದ್ದರೆ ಕೆಲಸ ಕೊಡುತ್ತಾರೆ ಇದರಲ್ಲಿ ಎಲ್ಲರೂ ಅಧಿಕಾರಿಗಳೇ ಇದ್ದಾರೆ. ಯಾರೂ ನಾನ್ ಆಫಿಷಿಯಲ್ಸ್ ಇಲ್ಲ. ಮ್ಯಾನೇಜಿಂಗ್ ಡೈರೆಕ್ಟರಿಂದ ಹಿಡಿದು ಪ್ರತಿಯೊಬ್ಬರೂ ನಮ್ಮ ಅಧಿಕಾರಿಗಳೇ ಇದ್ದಾರೆ.

ವಿದ್ಯುಚ್ಛಕ್ತಿ ಬಗ್ಗೆ ಹೇಳಬೇಕಾಗಿದ್ದರೆ ನಮ್ಮಲ್ಲಿ ಈ ಹೊತ್ತು ಸಾಕಷ್ಟು ವಿದ್ಯುಚ್ಛಕ್ತಿ ಇದೆ. ನಮ್ಮ ಹತ್ತಿರ ಇರುವಂಥ ವಿದ್ಯುಚ್ಛಕ್ತಿಯನ್ನು ಪೂರ್ತಿಯಾಗಿ ನಾವೇ ಉಪಯೋಗ ಮಾಡುತ್ತ ಇಲ್ಲ. ಹಾಳೂ ಮಾಡುತ್ತಿಲ್ಲ ಎನ್ನುವ ಮಾತನ್ನು ಸಂತೋಷದಿಂದ ಹೇಳುತ್ತಿದ್ದೇನೆ. ನಮ್ಮಲ್ಲಿ ಸರ್‌ಪ್ಲಸ್ ವಿದ್ಯುಚ್ಛಕ್ತಿ ಏನಿದೆ ಅದರ ಮಾರಾಟದಿಂದ ಪ್ರಯೋಜನ ಪಡೆಯುತ್ತಿದ್ದೇವೆ. ಆಂಧ್ರ ಪ್ರದೇಶದವರು ವಿದ್ಯುಚ್ಛಕ್ತಿಯನ್ನು ತೆಗೆದುಕೊಳ್ಳುತ್ತಿದ್ದಾರೆ. ಇನ್ನೂ ಹೆಚ್ಚಾಗಿ ತೆಗೆದುಕೊಳ್ಳುತ್ತಾರೆನ್ನುವ ವಿಚಾರವಿದ್ದು ಅವರ ಅಧಿಕಾರಿಗಳು ಬಂದು ಚರ್ಚೆ ಮಾಡಿದ್ದಾರೆ, ಅವರಿಗೆ ಸಾಕಷ್ಟು ಪ್ರಮಾಣದಲ್ಲಿ ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಅದೇ ರೀತಿ ಮಹಾರಾಷ್ಟ್ರಕ್ಕೂ ಹೋದ ಸಲ ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡಿದ್ದೇವೆ. ಈ ಸಲವೂ ಮತ್ತೆ ಬೇಕು ಎಂದು ಕೇಳಿದ್ದಾರೆ. ಅವರ ಅಧಿಕಾರಿಗಳು ಬಂದಾಗ ಅವರ ಜೊತೆ ಸಮಾಲೋಚನೆ ಮಾಡಿ ಒಂದು ನಿರ್ಧಾರಕ್ಕೆ ಬರುತ್ತೇವೆ. ತಮಿಳು ನಾಡಿಗೆ ಸಹ ವಿದ್ಯುಚ್ಛಕ್ತಿ ಬೇಕು ಎಂದು ಕೇಳಿದ್ದಾರೆ. ಅವರು ಅಧಿಕಾರಿಗಳ ಬಂದಾಗ ಅವರ ಜೊತೆಯಲ್ಲಿ ಚರ್ಚೆ ಮಾಡಿ ನಮ್ಮಲ್ಲಿ ಏನು ಸರ್‌ಪ್ಲಸ್ ವಿದ್ಯುಚ್ಛಕ್ತಿ ಇದೆ ಅದನ್ನು ನೆರೆ ಪ್ರಾಂತಗಳಿಗೆ ಮಾರಿ ಅದರಿಂದ ಸಾಕಷ್ಟು ಹಣ ಪಡೆಯುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ನಾವು ಉಪಯೋಗ ಮಾಡದೆ ಇರುವ ವಿದ್ಯುಚ್ಛಕ್ತಿಯಿಂದ ಸ್ವಲ್ಪ ಮಟ್ಟಿಗೆ ಹಣ ಗಳಿಸುವುದಕ್ಕೆ ಸಾಧ್ಯವಾಗುತ್ತಿದೆ. ಈ ಪರಿಸ್ಥಿತಿ ಯಾವತ್ತಿಗೂ ಇರುವುದಿಲ್ಲ. ಇಂಡಿಯಾ ಸರ್ಕಾರದವರು ೧೯೭೩ಕ್ಕೆ ಬಹುಶಃ ಫಿಫ್ತ್ ಪವರ್ ಸರ್ವೇ ಮಾಡಿರುವ ಪ್ರಕಾರ ನಮ್ಮಲ್ಲಿ ವಿದ್ಯುಚ್ಛಕ್ತಿ ಸಾಕಷ್ಟು ಇರುವ ಹಾಗೆ ಇಲ್ಲ. ವಿದ್ಯುಚ್ಛಕ್ತಿ ಕೊರತೆಯನ್ನು ೧೯೭೩ರಿಂದ ಅನುಭವಿಸಬೇಕಾದ ಪ್ರಸಂಗ ನಮ್ಮಲ್ಲಿ ಬರುತ್ತದೆ ಎನ್ನುವಂಥ ಮಾತನ್ನು ಅವರು ಹೇಳಿದ್ದಾರೆ. ಅದಕ್ಕಾಗಿ ನಾವು ಕಾಳಿನದಿ ಪ್ರಾಜೆಕ್ಟ್ ಕೆಲಸವನ್ನು ಆದಷ್ಟು ಬೇಗ ಪ್ರಾರಂಭ ಮಾಡಬೇಕು ಎನ್ನುವ ವಿಚಾರವನ್ನು ಇಟ್ಟುಕೊಂಡಿದ್ದೇವೆ. ಕೇಂದ್ರ ಸರ್ಕಾರದ ಟೆಕ್ನಿಕಲ್ ಮಂಜೂರಾತಿಗೆ ಪ್ರಾಜೆಕ್ ರಿಪೋರ್ಟ್ ಈಗಾಗಲೇ ಕಳುಹಿಸಿದ್ದೇವೆ. ಈ ಪ್ರಾಜೆಕ್ಟಿಗೆ ೫೦ ಕೋಟಿ ರೂಪಾಯಿ ಬೇಕಾಗುತ್ತದೆ. ನಮ್ಮ ಹತ್ತಿರ ಸಾಕಷ್ಟು ದುಡ್ಡಿಲ್ಲ. ಮಾನ್ಯ ಸದಸ್ಯರಿಗೆಲ್ಲ ಗೊತ್ತಿರುವಂತೆ ಪವರ್ ಪ್ರಾಜೆಕ್ಟ್‌ಸ್ ಒಳ್ಳೆಯ ಪೇಯಿಂಗ್ ಪ್ರಾಜೆಕ್ಟ್‌ಸ್, ರೆಮ್ಯುನರೇಟಿವ್ ಪ್ರಾಜೆಕ್ಟ್ ಆಗಿದೆ. ಅದಕ್ಕಾಗಿ ಕಾಳಿನದಿ ಪ್ರಾಜೆಕ್ಟಿಗೆ ಒಂದು ಕಾರ್ಪೊರೇಷನ್ ಮಾಡಬೇಕು ಎನ್ನುವಂಥ ವಿಚಾರ ಇಟ್ಟುಕೊಂಡಿದ್ದೇವೆ ಸರ್ಕಾರದಿಂದ ಐದು ಕೋಟಿ ರೂಪಾಯಿ ಹಾಕುತ್ತೇವೆ, ವಿದ್ಯುಚ್ಛಕ್ತಿ ಮಂಡಲಿಯಿಂದ ಐದು ಕೋಟಿ ರೂಪಾಯಿ ಹಾಕುತ್ತಾರೆ. ಬಾಕಿ ೩೦ ಕೋಟಿ ರೂಪಾಯಿ ಡಿಬೆಂಚರ್ ಸಾಲವನ್ನು ಎತ್ತಿ, ಎಲ್. ಐ ಸಿ. ಮತ್ತು ಇತರ ಸಂಘ ಸಂಸ್ಥೆಗಳಿಂದ ಅದಕ್ಕೆ ಬೇಕಾದ ಹಣವನ್ನು ಪಡೆದು ಕಾಳಿನದಿ ಪ್ರಾಜೆಕ್ಟ್ ಕೆಲಸ ಕಾರ್ಯಗಳು ಒಳ್ಳೆಯ ರೀತಿಯಿಂದ ನಡೆಯುವಂತೆ ಪ್ರಯತ್ನ ಮಾಡಬೇಕು ಎನ್ನುವ ಯೋಚನೆ ಇದೆ ಎಂದು ಈ ಸಭೆಗೆ ಹೇಳುತ್ತೇನೆ.

ಈಗ ಶರಾವತಿಯಲ್ಲಿ ೧೦ಯೂನಿಟ್‌ಗಳು ಪ್ರಾರಂಭ ವಾಗಬೇಕಾಗಿತ್ತು. ಈಗ ೭ಯೂನಿಟ್ಟುಗಳ ಕೆಲಸ ಮುಗಿದಿದೆ. ೮ನೇ ಯೂನಿಟ್ಟು ತಯಾರಾಗುತ್ತಿದೆ. ೯ ಮತ್ತು ೧೦ನೇ ಯುನಿಟ್ಟುಗಳಿಗೆ ಬೇಕಾಗುವ ಟ್ರಾನ್ಸ್‌ಫಾರ್ಮರ್ ಜನರೇಟರ್ ಮೆಷಿನರಿ ತರಿಸುವುದು ಇದೆ. ಮೊದಲು ಈ ಯೂನಿಟ್ಟುಗಳಿಗೆ ಯಾವ ದೇಶದಿಂದ ಮೆಷಿನರಿ ತರಿಸಿದ್ದೀವೆಯೋ ಅದೇ ದೇಶದಿಂದ ಮೆಷಿನರಿ ತರಿಸಲು ಅವಕಾಶ ಕೊಡಬೇಕೆಂದು ಕೇಂದ್ರ ಸರ್ಕಾರವನ್ನು ಕೇಳಿದ್ದೇವೆ. ಆದರೆ ಭೂಪಾಲದಲ್ಲಿ ಈ ಮೆಷಿನರಿ ತಯಾರಾಗುತ್ತದೆ ಅಲ್ಲಿಂದ ತರಿಸಿಕೊಳ್ಳಬಹುದು ಎಂದು ಕೇಂದ್ರ ಸರ್ಕಾರ ತಿಳಿಸಿದೆ. ಈಗಾಗಲೇ ಇದಕ್ಕಾಗಿ ಆರ್ಡರ್ ಪ್ಲೇಸ್ ಮಾಡಿದ್ದೇವೆ. ಈ ಯುನಿಟ್ಟುಗಳಿಗೆ ೧೯೭೨ರಲ್ಲಿ ಮೆಷಿನರಿ ಬಂದು ಪೂರ್ತಿಯಾಗಿ ವಿದ್ಯುಚ್ಛಕ್ತಿ ಸಪ್ಲೈ ಮಾಡುತ್ತದೆ, ಈ ಲೆಕ್ಕದಿಂದ ೮ನೇ ಯೂನಿಟ್ಟು ೧೯೭೨ರಲ್ಲಿ ೯ ಮತ್ತು ೧೦ನೇ ಯುನಿಟ್ಟು ೧೯೭೩ರಲ್ಲಿ ಮುಗಿಯಲು ಸಾಧ್ಯವಾಗುತ್ತದೆ.

(ಶ್ರೀ ವೀರೇಂದ್ರ ಪಾಟೀಲ್)

ಇನ್ನೂ ರೂರಲ್ ಇಲೆಕ್ಟ್ರಿಫಿಕೇಷನ್ ಬಗ್ಗೆ ಸಾಕಷ್ಟು ಪ್ರಗತಿಯಾಗುತ್ತಾ ಇದೆ. ಈಗಾಗಲೇ ೧೧,೮೬೫ ಐ.ಪಿ. ಸೆಟ್‌ಗಳಿಗೆ ಸರ್ವಿಸ್ ಮಾಡಿದ್ದೇವೆ. ೧೯೬೯–೭೦ರಲ್ಲಿ ೧, ೬೬,೫೭೨ ಐ ಪಿ ಸೆಟ್ಟುಗಳಿಗೆ ಸರ್ವಿಸ್ ಮಾಡಿದ್ದೇವೆ. ಇನ್ನೂ ಹೆಚ್ಚಿನ ವೇಗದ ಗತಿಯಲ್ಲಿ ಹೋಗಬೇಕು ಎಂದು ಉದ್ದೇಶ ಇದೆ. ೧೯೬೯–೭೦ರಲ್ಲಿ ಇನ್ನೂ ೩೦ ಸಾವಿರ ಐ ಪಿ ಸೆಟ್ಟುಗಳಿಗೆ ಸರ್ವೀಸ್ ಮಾಡಲು ಹೇಳಿದ್ದೇವೆ. ಇದರಲ್ಲಿ ಅನೇಕ ಅಡಚಣೆಗಳು ಇವೆ. ಮೇಟಿರಿಯಲ್ ದೊರೆಯುವುದು ಕಷ್ಟವಾಗಿದೆ. ಸಾಕಷ್ಟು ಪ್ರಮಾಣದಲ್ಲಿ ಸ್ಟೀಲ್ ನಮಗೆ ಸಿಕ್ಕುತ್ತಾ ಇಲ್ಲ. ಈ ಕೆಲಸಕ್ಕೆ ಪೋಲ್ಸ್ ಕಂಡಕ್ಟರ್ಸ್ ಬೇಕಾಗುತ್ತವೆ. ಪರಿಸ್ಥಿತಿ ಹೀಗೆ ಇರುವುದರಿಂದ ಸಾಕಷ್ಟು ಮೆಟಿರಿಯಲ್ಸ್ ಸಿಕ್ಕಿದರೆ ಮುಂದೆ ಹೋಗಬೇಕು ಎಂದು ಇದೆ. ಮುಂದಿನ ವರ್ಷ ಇನ್ನೂ ಹೆಚ್ಚಿನ ಪ್ರಯತ್ನಮಾಡಿ ಕೆಲಸ ಕಾರ್ಯಗಳನ್ನು ಮಾಡಲು ಪ್ರಯತ್ನ ಪಡುತ್ತೇವೆ.

ಇಲೆಕ್ಟ್ರಿಸಿಟಿ ಜನರೇಟ್ ಮಾಡಿ ಸಪ್ಲೈ ಮಾಡುವ ಒಂಭತ್ತು ಸಂಸ್ಥೆಗಳು ಮಾತ್ರ ಇನ್ನೂ ಉಳಿದುಕೊಂಡಿವೆ, ಪ್ರೈವೇಟ್ ಅಂಡರ್‌ಟೇಕಿಂಗ್ಸ್ ನ್ಯಾಷನಲೈಜ್ ಮಾಡಬೇಕಾದ ಅವಶ್ಯಕತೆ ಇಲ್ಲ. ಯಾಕೆಂದರೆ ಈ ಸಂಸ್ಥೆಗಳ ಅವಧಿ ಮುಗಿಯುತ್ತ ಬಂದಿದೆ. ಒಂದರಡು ವರ್ಷಗಳಲ್ಲಿ ಇಲ್ಲವೆ ಬರುವ ಆರು ವರ್ಷಗಳಲ್ಲಿ ಉಳಿದಿರತಕ್ಕಂತ ಎಲ್ಲಾ ಅಂಡರ್‌ಟೇಕಿಂಗ್ಸ್ ಸರಕಾರದ ವಶಕ್ಕೆ ತೆಗೆದುಕೊಳ್ಳಲು ಸಾಧ್ಯವಾಗುತ್ತದೆ. ನಾವು ಇದರಲ್ಲಿ ಒಂದು ನೀತಿಯನ್ನು ಅನುಸರಿಸುತ್ತಿದ್ದೇವೆ. ಆದೇನೆಂದರೆ ಅಂಡರ್‌ಟೇಕಿಗಿನ ಅವಧಿ ಮುಗಿದ ನಂತರ ಅದಕ್ಕೆ ಎಕ್ಸಟೇನ್‌ಷನ್ ಕೊಡುವುದಿಲ್ಲ. ಅವೆಲ್ಲವೂ ಎಂ. ಎಸ್. ಇ. ಬಿ. ವಶಕ್ಕೆ ಬರುತ್ತವೆ. ಈ ರೀತಿ ಎಲ್ಲಾ ಅಂಡರ್‌ಟೇಕಿಂಗ್ಸ್ ವಶಕ್ಕೆ ತೆಗೆದುಕೊಳ್ಳುವ ಅವಶ್ಯಕತೆ ಇದೆ.

ಇನ್ನು ಎಂಎಸ್‌ಇಬಿ ನಲ್ಲಿ ಕರಪ್‌ಷನ್ ಇದೆ ಎನ್ನುವ ಬಗ್ಗೆ ಅನೇಕ ಮಾನ್ಯ ಸದಸ್ಯರು ಹೇಳಿದ್ದಾರೆ. ಅದು ಇಲ್ಲಾ ಎಂದು ನಾನು ಸಹ ಹೇಳುವುದಿಲ್ಲ. ಅದನ್ನು ತಡೆಗಟ್ಟಲು ಸಾಕಷ್ಟು ಪ್ರಯತ್ನ ನಡೆಯುತ್ತಿದೆ. ಜನಸಾಮಾನ್ಯರು ವಿದ್ಯುತ್‌ಚಕ್ತಿ ಬಳಕೆದಾರರು ಕರಪ್ಷನ್ ತಡೆಗಟ್ಟಲು ಸಹಕಾರ ಮಾಡ ಬೇಕಾದ ಅವಶ್ಯಕತೆ ಇದೆ. ಎಂದು ಕಳಕಳಿಯಿಂದ ಹೇಳಬೇಕಾಗಿದೆ. ಇಲೆಕ್ಟ್ರಿಸಿಟಿ ಬಗ್ಗೆ ಏನಾದರೂ ಕಂಪ್ಲೇಂಟ್ ವಿಜಿಲೆನ್ಸ್ ಕಮಿಷನ್ನಿಗೆ ಬಂದರೆ ಅಲ್ಲಿ ತನಿಖೆಮಾಡಲು ಎಸ್.ಪಿ. ರ್ಯಾಂಕ್ ಆಫೀಸರ್ಸ್ ಇದ್ದಾರೆ. ಇನ್‌ಸ್ಪೆಕ್ಷನ್ ಸ್ಟಾಫ್ ಇದೆ, ಅವರು ಕಂಪ್ಲೇಂಟ್ ಇದ್ದಕಡೆ ರೀಡ್ ಮಾಡಿ ನೋಡಿದ್ದಾರೆ. ಆದರೆ ಇದು ಸಾಲದು ಎಂದು ಹೇಳುವುದನ್ನು ನಾನು ಒಪ್ಪುತ್ತೇನೆ. ಇದಲ್ಲದೆ ಇನ್‌ಸ್ಪೆಕ್ಷನ್ ಸ್ಟಾಫ್ ಕೂಡ ಇದೆ. ಡಿಪೋಗಳಿಗೆ ಹೋಗಿ ಸ್ಟೋರ್‌ನಲ್ಲಿ ಇರುವ ಸ್ಟಾಕ್ ಸರಿಯಾಗಿ ಇದೆಯೇ ಇಲ್ಲವೇ, ಏನಾದರೂ ಷಾರ್ಟೇಜ್ ಇದೆಯೇ ನೋಡ ಬೇಕಾಗುತ್ತದೆ. ಇದಕ್ಕಾಗಿ ಸ್ಪೆಷಲ್ ಸ್ಕ್ವಾಡ್ ಮಾಡಿದ್ದೇವೆ. ಮೀಟರ್ ರೀಡಿಂಗ್ ಮಾಡುವವರು ೫೦ ರೂಪಾಯಿ ಇದ್ದಲ್ಲಿ ೨೦ ರೂಪಾಯಿ ಎಂದು ಬರೆಯುತ್ತಾರೆ ಎಂದು ಕಂಪ್ಲೇಂಟ್ ಇದೆ. ಅಂಥ ಸಂದರ್ಭದಲ್ಲಿ ಅವರನ್ನು ಕರೆಸಿ ಕಾಗದ ಪತ್ರ ತರಿಸಿ ಕೇಳುತ್ತಾರೆ. ಇದನ್ನು ತಡೆಗಟ್ಟಲು ಎಷ್ಟರಮಟ್ಟಿಗೆ ಸಾಧ್ಯವಿದೆಯೋ ಅಷ್ಟು ಮಾಡಲು ಸರ್ವ ಪ್ರಯತ್ನ ಮಾಡಲಾಗುತ್ತಿದೆ, ಇದು ಒಂದು ದೊಡ್ಡ ಆರ್ಗನೈಜೇಷನ್ ಆಗಿದೆ. ಈ ಆರ್ಗನೈಜೇಷನ್ ಬೆಳೆಯುತ್ತಾ ಇದೆ. ಆದುದರಿಂದ ಇಂಥ ಆರ್ಗನೈಜೇಷನ್ನಿನಲ್ಲಿ ಅನೇಕ ದೋಷಗಳು ಕಂಡುಬರುವುದು ಸ್ವಾಭಾವಿಕ. ಇದನ್ನು ಕಡೆಗಣಿಸಬೇಕು ಎಂಬ ಉದ್ದೇಶ ಸರಕಾರಕ್ಕೂ ಇಲ್ಲ. ಎಂ ಎಸ್ ಇ ಬಿ ಗೂ ಇಲ್ಲ. ಸಂಪೂರ್ಣವಾದ ಸಹಕಾರ ಜನಸಾಮಾನ್ಯರಿಂದ ಬಂದರೆ ಇದನ್ನು ತಡೆಗಟ್ಟಲು ಸಾಧ್ಯವಾಗುತ್ತದೆ ಎಂದು ಹೇಳುತ್ತೇನೆ. ಈ ಬೇಡಿಕೆಗಳನು ಈ ಮಾನ್ಯ ಸಭೆ ಮತ್ತು ಮಾನ್ಯ ಸದ್ಯಸರು ಒಪ್ಪಬೇಕು ಎಂದು ಹೇಳುತ್ತೇನೆ.

ಶ್ರೀ ಎಚ್. ಸಿದ್ಧವೀರಪ್ಪ:—ನಾನು ನಿನ್ನೆ ಹೇಳಿದ ಆಪಾದನೆಯ ಬಗ್ಗೆ ಸಂಬಂಧಪಟ್ಟ ಮಂತ್ರಿಗಳು ಒಂದು ಅಕ್ಷರವನ್ನಾದರೂ ಹೇಳುತ್ತಾರೋ ಏನೋ ಎಂದು ನಾನು ಕಣ್ಣು ಕಿವಿ ತೆಗೆದಿಟ್ಟುಕೊಂಡು ಅವರು ಉತ್ತರ ಹೇಳುವಾಗ್ಗೆ ಕೂತಿದ್ದೆ. ಆದರೆ ಅವರು ಉತ್ತರ ಹೇಳಿದುದನ್ನು ನೋಡಿದರೆ ಅವರು ಏನೋ ಹೇಳಿದ್ದಾರೆ ಎಂದು ಕ್ಷುಲ್ಲಕವಾದುದು ಎನ್ನುವ ರೀತಿಯಲ್ಲಿ ಇದನ್ನು ನೋಡಿದ್ದಾರೆಯೇ ? ಇಲ್ಲವೇ ಈಗಲೇ ಬೇಡ, ಇದು ಗುರುತರವಾದ ಆಪಾದನೆಯಾಗಿದೆ ಎಂದು ಅವರು ತಲೆಯಲ್ಲಿ ಇಟ್ಟುಕೊಂಡಿದ್ದಾರೆ ಎಂದು ಅಷ್ಟು ಹೇಳಿದರೆ ಸಾಕು.

ಶ್ರೀ ವೀರೇಂದ್ರ ಪಾಟೀಲ:—ಗರ್ನಮೆಂಟ್ ಇನ್‌ಕ್ವಾಯರಿ ಬಗ್ಗೆ ಹೇಳುವ ಅವಶ್ಯಕತೆ ಇಲ್ಲ ಎಂದು ಭಾವಿಸಿ ಹೇಳಲಿಲ್ಲ. ಅದರ ಬಗ್ಗೆ ಏನು ಪರಿಸ್ಥಿತಿ ಇದೆ ತಿಳಿದುಕೊಂಡು ಅವರಿಗೆ ಉತ್ತರ ಕೊಡಬೇಕು ಎಂಬ ಉದ್ದೇಶದಿಂದ ಅದನ್ನು ಹೇಳಲಿಲ್ಲ.

ಶ್ರೀ ಎಚ್. ಸಿದ್ದವೀರಪ್ಪ:—ಇದರ ಬಗ್ಗೆ ನೋಟೀಸ್ ಕೊಟ್ಟಿದ್ದೇವೆ. ಇದು ಅವರ ಗಮನದಲ್ಲಿ ಇದೆ ಎಂದು ಹೇಳಿದ್ದರಿಂದ ಅದನ್ನು ವಿಚಾರ ಮಾಡಿ, ಇದರ ಡಿಸ್ಕಷನ್ನಿಗೆ ಅವಕಾಶ ಮಾಡಿ ಕೊಡುತ್ತಾರೆ ಎಂದು ನಂಬಿದ್ದೇನೆ. ಆದುದರಿಂದ ಈ ವಿಚಾರ ಹೆಚ್ಚಿಗೆ ಹೇಳುವುದು ಬೇಡ.

ಶ್ರೀ ಕೆ. ಪ್ರಭಾಕರ:—ಮಂಚನಬೆಲೆ ಯೋಜನೆಯ ಫೌಂಡೇಷನ್ ಹಾಕಿದ್ದಾರೆ. ಈ ಯೋಜನೆ ಕಟ್ಟಲೇಕು ಎನ್ನುವುದು ಇನ್ನೂ ಫೈನಲ್ಲಾಗಿ ಆಗಿಲ್ಲ ಎಂದು ಗೊತ್ತಾಗಿದೆ. ಎಷ್ಟು ದಿನಸದಲ್ಲಿ ಈ ಕಾರ್ಯ ಮಾಡುತ್ತೀರಿ ಎನ್ನುವುದನ್ನು ದಯವಿಟ್ಟು ಹೇಳುತ್ತೀರಾ?

ಶ್ರೀ ವೀರೇಂದ್ರ ಪಾಟೀಲ.—ಇದರಲ್ಲಿ ಅಂಥದ್ದೇನೂ ಕಷ್ಟ ಇಲ್ಲ.

ಶ್ರೀ ಎಸ್ ವಿ ಅಗ್ನಿಹೋತ್ರಿ:—ಈ ಇಲಾಖೆಯಲ್ಲಿ ತಾವು ಅಧಿಕಾರ ವಹಿಸಿಕೊಂಡ ಮೇಲೆ ರೋಡ್ ಕ್ಲಾಸಿಫಿಕೇಷನ್ ಮಾಡಿ ಫಸ್ಟ್‌ಕ್ಲಾಸ್, ಸೆಕೆಂಡ್‌ಕ್ಲಾಸ್, ಥರ್ಡ್‌ಕ್ಲಾಸ್ ರೋಡ್ ಎಂದು ಮಾಡಿ ೧೫೦ ರೂಪಾಯಿ ೧೦೦ ರೂಪಾಯಿ ಕೊಡಬೇಕು ಎಂದು ಮಾಡಿದುದು ಬಹಳ ಸಂತೋಷ. ಆದರೆ ಈ ಥರ್ಡ್ ಕ್ಲಾಸ್ ರೋಡ್ ಮಾಡುತ್ತಾರಲ್ಲಾ ಅದರ ಮೇಲೆ ತಿರುಗಾಡುವವರು ಯಾರು? ತಿರುಗಾಡಲು ಯೋಗ್ಯವಾಗುವ ಹಾಗೆ ರೋಡ್ ಮಾಡುತ್ತಾರೆಯೇ ಎಂಬುದನ್ನು ಸ್ಪಷ್ಟೀಕರಣ ಮಾಡಬೇಕು.

ಶ್ರೀ ಕೆ. ಲಕ್ಕಪ :—ಯಾರಾದರೂ ತಿರುಗಾಡಬಹುದು.

ಶ್ರೀ ವೀರೇಂದ್ರ ಪಾಟೀಲ.—ಮಾನ್ಯ ಸದಸ್ಯರು ಮಂಚನಬೆಲೆ ಯೋಜನೆಯ ಬಗ್ಗೆ ಕೇಳಿದರು ಎಕ್ಸ್‌ಕವೇಷನ್ ಬಗ್ಗೆ ಇರುವ ಫೈಲು ಇಂದು ನನಗೆ ಬಂದಿದೆ. ಮೊದಲು ೬೦ ಫೀಟ್ ಎಂದು ಡಿಸೈನ್ ಮಾಡಿದರು ಅದನ್ನು ಸ್ವಲ್ಪ ಮಟ್ಟಿಗೆ ಚೇಂಜ್ ಮಾಡಿದೆ ಮತ್ತು ಅದಕ್ಕೆ ಟೆಂಡರ್ಸ್‌ಗಳು ಬಂದಿವೆ. ಈ ಕೆಲಸ ಜಾಗ್ರತೆ ಪ್ರಾರಂಭ ಮಾಡುತ್ತೇವೆ. ಅದರಲ್ಲಿ, ಕಷ್ಟ ಏನೂ ಇಲ್ಲ.

ಶ್ರೀ ಬಿ, ಗಂಗಣ್ಣ:—ನಮ್ಮ ಪಾವಗಡ ತಾಲ್ಲೂಕಿನ ಯೋಜನೆಯ ಬಗ್ಗೆ ದಯವಿಟ್ಟು ಹೇಳಬೇಕು.

ಶ್ರೀ ವೀರೇಂದ್ರ ಪಾಟೀಲ್.—ಪ್ರಾಜೆಕ್ಟ್ ರಿಪೋರ್ಟ್ ತಯಾರಾಗಿದೆ. ಇದಕ್ಕೆ ಕ್ಲಿಯರನ್ಸ್ ದೊರಕಿಸಲು ಪ್ರಯತ್ನ ಮಾಡುತ್ತಿದ್ದೇವೆ. ಅದು ಬಂದ ಮೇಲೆ ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಆರ್. ಜಿ. ಪಾಲೀ:—ಕಾರವಾರ ಬಗ್ಗೆ ರಿಪೋರ್ಟ್ ಬಂದಿದ್ದು ೬ ಕೋಟಿ ಚಿಲ್ಲರೆ ಯೋಜನೆ ಇಟ್ಟುಕೊಂಡಿದ್ದಾರೆ, ಕೇಂದ್ರ ಸರಕಾರ ಹಣಕೊಡದೆ ಇದ್ದರೆ ಡೆವಲಪ್ಪಮೆಂಟ್ ಕಾರ್ಯ ಮಾಡುವುದನ್ನು ನಿಶ್ಚಯ ಮಾಡಿದಿರಾ?

ಶ್ರೀ ಎಚ್. ಸಿ.ಲಿಂಗಾರೆಡ್ಡಿ.—ಫಿಜಿಕಲ್ ರಿಪೋರ್ಟ್ ಪರಿಶೀಲನೆ ಮಾಡಿದ ಮೇಲೆ ಕೇಂದ್ರ ಸರಕಾರಕ್ಕೆ ಪ್ರಾರ್ಥನೆ ಮಾಡುವ ವಿಷಯ ಬರುತ್ತದೆ. ಈಗಲೇ ಕೇಳತಕ್ಕಂತ ವಿಚಾರ ಇಲ್ಲ.

ಶ್ರೀ ಎಸ್. ವಿ ಅಗ್ನಿಹೋತ್ರಿ:—೧೯೬೪ನಲ್ಲಿ ಹೊಲಿಕೇರಿ ಮೀಡಿಯಂ ಇರಿಗೇಷನ್ ಟ್ಯಾಂಕ್ ಮಾಡುತ್ತೇವೆ. ಎಂದು ಆಗಿನ ಮುಖ್ಯ ಮಂತ್ರಿಗಳಾಗಿದ್ದ ಶ್ರೀಮಾನ್ ನಿಜಲಿಂಗಪ್ಪನವರು ವಚನ ಕೊಟ್ಟಿದ್ದರು ಅದನ್ನು ಯಾವಾಗ ಮುಗಿಸುತ್ತೀರಿ ಇದರ ಬಗ್ಗೆ ಹೇಳಬೇಕು.

ಶ್ರೀ ವೀರೇಂದ್ರ ಪಾಟೀಲ್:—ಅದನ್ನು ಮಾಡುತ್ತೇವೆ.

ಶ್ರೀ ಎಚ್. ಎನ್, ನಂಜೇಗೌಡ:—ಹಾರಂಗಿ ಬಗ್ಗೆ ೮೦ ಸಾವಿರ ರೂಪಾಯಿ ಕೆಲಸದ ಬಗ್ಗೆ ಟೆಂಡರ್ ಕೇಳಿದ್ದೀರಿ. ಉಳಿದ ಕೆಲಸದ ಬಗ್ಗೆ ಟೆಂಡರ್ ಕರೆಸುತ್ತೀರಾ?

ಶ್ರೀ. ವೀರೇಂದ್ರ ಪಾಟೀಲ:—ಈಗ ಒಂದು ಟೆಂಡರ್ ವಿಲೇವಾರಿ ಮಾಡಿದ್ದೇವೆ. ಮಾನ್ಯ ಸದಸ್ಯರು ಹೇಳಿದ ಹಾಗೇ ೮೦ ಲಕ್ಷ ರೂಪಾಯಿ ಟೆಂಡರ್ ಬಂದಿರುವುದನ್ನು ಒಪ್ಪಿಕೊಂಡಿದೆ. ಬೇರೆಕೆಲಸಗಳ ಟೆಂಡರ ಕರೆಯ ಬೇಕಾಗಿದೆ. ಟೆಂಡರ್ ಕರೆಯಲು ಇಂಜಿನಿಯರ್‌ರವರಿಗೆ ಹೇಳುತ್ತೇವೆ.

6-00 PM.

MR. SPEAKER:—The question is—

"That the respective sums not exceeding the amounts, mentioned in the Demands Nos. 6, 29, 30, 30A, 45, 47, 31, 31A, 43, 48, 30B, 46, 32, 50 and 50A be granted to the Government to defray the charges which will come in course of payment during the financial year for the period ending with 31st day of March 1970".

The motion was adopted

As ordered by the Chair the motion for demands for grants adopted by the House are re-produced below.

DEMAND No. 6—OTHER TAXES-ADMINISTRATION.

13. Other Taxes and Duties.

"That a sum not exceeding Rs. 16,87,000 be granted to the Government to defray the charges which will come in course of payment during the financial year for the period ending 31st day of March 1971, in respect of "Other Taxes and Duties".

DEMAND No. 29—IRRIGATION—COMMERCIAL

43. Irrigation, Navigation, Embankment and Drainage Works (Commercial)

"That a sum not exceedings Rs. 9,56,27,000 be granted to the Government to defray the charges which will come in course of payment during the financial year for the period ending 31st day of March 1971, in respect of 'I.N.E. and D. Works (Commercial)'.

DEMAND No. 30—IRRIGATION—(NON-COMMERCIAL)

44. Irrigation, Navigation, Embankment and Drainage Works (Non-Commercial).

"That a sum not exceeding Rs. 3,52,33,000 be granted to the Government to defray the charges which will come in course of payment during the financial year

for the period ending 31st day of March 1971 in respect of I. N. E. and D. Works (Non-Commercial)".

DEMAND NO. 30—A—ELECTRICITY SCHEMES

45. Electricity Schemes.

"That a sum not exceeding Rs. 6,85,47,000 be granted to the Government to defray the charges which will come in course of payment during the financial year for the period ending 31st day of March 1971, in respect of 'Electricity Schemes'."

DEMAND NO. 45.—CAPITAL OUTLAY ON IRRIGATION

99. Capital Outlay on Irrigation, Navigation, Embankment and Drainage Works (Commercial)

"That a sum not exceeding Rs. 24,05,93,000 be granted to the Government to defray the charges which will come in course of payment during the financial year for the period ending 31st day of March 1971, in respect of 'Capital Outlay on Irrigation, Navigation, Embankment and Drainage Works (Commercial)'."

DEMAND NO. 47.—CAPITAL ACCOUNT OF ELECTRICITY SCHEMES OUTSIDE THE REVENUE ACCOUNT

101. Capital Outlay on Electricity Schemes

"That a sum not exceeding Rs. 16,55,47,000 be granted to the Government to defray the charges which will come in course of payment during the financial year for the period ending 31st day of March 1971, in respect of 'Capital Outlay on Electricity Schemes'."

DEMAND NO. 31.—PUBLIC WORKS

50. Public Works.

"That a sum not exceeding Rs. 32,65,13,000 be granted to the Government to defray the charges which will come in course of payment during the financial year for the period ending 31st day of March 1971, in respect of 'Public Works'.".

DEMAND NO. 31-A—CAPITAL OUTLAY ON PUBLIC WORKS

52. Capital Outlay on Public Works

"That a sum not exceeding Rs. 83,23,000 be granted to the Government to defray the charges which will come in course of payment during the financial year for the period ending 31st day of March 1971, in respect of 'Capital Outlay on Public Works."

DEMAND NO. 43.—CAPITAL OUTLAY ON IMPROVEMENT OF PUBLIC HEALTH

94. Capital Outlay on Improvement of Public Health.

"That a sum not exceeding Rs. 1,03,97,000 be granted to the Government to defray the charges which will come in course of payment during the financial year for the period ending 31st day of March 1971, in respect of 'Capital Outlay on Improvement of Public Health'."

DEMAND NO. 48—CAPITAL OUTLAY ON PUBLIC WORKS

103. Capital Outlay on Public Works.

"That a sum not exceeding Rs. 8,72,70,000 be granted to the Government to defray the charges which will come in course of payment during the financial year for the period ending 31st day of March 1971, in respect of 'Capital Outlay on Public Works."

DEMAND NO. 30.—B—CAPITAL OUTLAY ON IRRIGATION

48. Capital Outlay on Irrigation, Navigation, Embankment and Drainage Works.

Minister of State for Minor Irrigation:—Sir, on the recommendation of the Governor, I beg to move:

"That a sum not exceeding Rs. 82,00,000 be granted to the Government to defray the charges which will come in course of payment during the financial year for the period ending 31st day of March 1971, in respect of 'Capital Outlay on Irrigation, Navigation, Embankment and Drainage Works'.

DEMAND NO. 46.—CAPITAL OUTLAY ON IRRIGATION (NON-COMMERCIAL)

100. Capital Outlay on Irrigation, Navigation, Embankment and Drainage Works (Non-Commercial)

Minister of State for Minor Irrigation.—Sir, on the recommendation of the Governor, I beg to move:

"That a sum not exceeding Rs. 1,94,02,000 be granted to the Government to defray the charges which will come in course of payment during the financial year for the period ending 31st day of March 1971, in respect of 'Capital Outlay on I. N. E. and D. Works (Non-Commercial)'.".

DEMAND NO. 32.—PORTS AND PILOTAGE

53. Ports and Pilotage

"That a sum not exceeding Rs. 11,75,000 be granted to the Government to defray the charges which will come in course of payment during the financial year for the period ending 31st day of March 1971, in respect of 'Ports and Pilotage.

DEMAND NO. 50.—DEVELOPMENT OF MINOR PORTS

110. Capital Outlay on Ports.

"That a sum not exceeding Rs. 50,00,000 be granted to the Government to defray the charges which will come in course of payment during the financial year for the period ending 31st day of March 1971, in respect of 'Capital Outlay on Ports'.".

DEMAND NO. 50-A.—CAPITAL OUTLAY ON ROAD AND WATER TRANSPORT SCHEME

114. Capital Outlay on Road and Water Transport Schemes.

"That a sum not exceeding Rs. 5,00,000 be granted to the Government to defray the charges which will come